ESTD : 1971

# ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

# SREE SUBRAMANYESWARA CO-OPERATIVE BANK LIMITED

SUBCO BANK - EVERYONE'S BANK

ಆಡಳಿತ ಕಛೇರಿ : 'ರಜತ ಭವನ', ನಂ. 106, ಆರ್.ವಿ. ರಸ್ತೆ
ವಿಶ್ವೇಶ್ವರಪುರಂ, ಬೆಂಗಳೂರು-560 004

## 2022-2023ನೇ ಸಾಲಿಗೆ ನಡೆದ
## 53ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳು
## ಮತ್ತು
## 2023-2024ನೇ ಸಾಲಿನ
## ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ
## ಲೆಕ್ಕ ಪರಿಶೋಧನಾ ವರದಿ

"Rajatha Bhavana", No. 106, R.V. Road, Visveswarapuram
BENGALURU - 560 004

# ಶ್ರೀ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.106, ರಜತ ಭವನ, ಆರ್.ವಿ.ರಸ್ತೆ, ವಿ.ವಿ.ಪುರಂ. ಬೆಂಗಳೂರು-560 004.

ESTD : 1971

**ದಿನಾಂಕ 23-09-2023ನೇ ಶನಿವಾರದಂದು ಬೆಳಿಗ್ಗೆ 10-30 ಘಂಟೆಗೆ ನಡೆದ ಬ್ಯಾಂಕಿನ 2022-2023ನೇ ಸಾಲಿನ 53ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳು:**

**ಸ್ಥಳ: ಚಾಮರಾಜು ಕಲ್ಯಾಣ ಮಂದಿರ**

16ನೇ ಕ್ರಾಸ್, 3ನೇ ಬ್ಲಾಕ್, ಜಯನಗರ (ಸೌತ್ ಎಂಡ್ ಸರ್ಕಲ್ ಹತ್ತಿರ), ಬೆಂಗಳೂರು – 560011.

ಹಾಜರಾತಿ : 2997 ಸದಸ್ಯರು

ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ಕೃಷ್ಣಯ್ಯಶೆಟ್ಟಿ ಯವರು ಮಹಾಸಭೆಗೆ ಆಗಮಿಸಿರುವ ಎಲ್ಲಾ ಸನ್ಮಾನ್ಯ ಸದಸ್ಯರುಗಳು ಉಪಹಾರವನ್ನು ಸ್ವೀಕರಿಸಿದ ನಂತರ, ಸಭಾಂಗಣದಲ್ಲಿರುವ ಕುರ್ಚಿಗಳಲ್ಲಿ ಆಸೀನರಾಗಬೇಕೆಂದು ಕೋರಿದರು. ಮಹಾಸಭೆಯನ್ನು ನಡೆಸಲು ಅಗತ್ಯವಿರುವಷ್ಟು ಕೋರಂ ಸಂಖ್ಯೆಯಲ್ಲಿ ಸದಸ್ಯರು ಹಾಜರಾತಿ ಇರುವುದನ್ನು ಖಚಿತಪಡಿಸಿಕೊಂಡು 53ನೇ ವಾರ್ಷಿಕ ಮಹಾಸಭೆಯನ್ನು ಆರಂಭ ಮಾಡುತ್ತಿರುವುದಾಗಿ ತಿಳಿಸಿ, ಮಹಾಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಡಾ: ಕೆ.ಎಂ. ರಂಗಧಾಮ ಶೆಟ್ಟಿಯವರು ವಹಿಸಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಹಾಗೂ ಆಡಳಿತ ಮಂಡಲಿಯ ಇತರೆ ಎಲ್ಲಾ ನಿರ್ದೇಶಕರು ಸಹ ವೇದಿಕೆಗೆ ಆಗಮಿಸಿ, ಆಸೀನರಾಗಬೇಕೆಂದು ಬ್ಯಾಂಕಿನ ಎಲ್ಲಾ ಸದಸ್ಯರ ಪರವಾಗಿ ವಿನಂತಿಸಿದರು. ಅವರ ವಿನಂತಿಯ ಮೇರೆಗೆ ಬ್ಯಾಂಕಿನ ಅಧ್ಯಕ್ಷರಾದ ಡಾ: ಕೆ.ಎಂ. ರಂಗಧಾಮಶೆಟ್ಟಿಯವರು, ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಮತ್ತು ಎಲ್ಲಾ ನಿರ್ದೇಶಕರುಗಳು ವೇದಿಕೆಗೆ ಆಗಮಿಸಿ ಆಸೀನರಾದ ಮೇಲೆ ಆಡಳಿತ ಮಂಡಲಿಯ ನಿರ್ದೇಶಕರುಗಳ ಕಿರುಪರಿಚಯವನ್ನು ಮಹಾಸಭೆಗೆ ಮಾಡಿಕೊಡುತ್ತಾ, ಅವರೆಲ್ಲರಿಗೂ ಹೂಗುಚ್ಛವನ್ನು ನೀಡಿ, ಸಪ್ತವರ್ಣಗಳಿಂದ ಕೂಡಿದ ಸಹಕಾರ ಶಲ್ಯವನ್ನು ತೊಡಿಸಿ ಗೌರವಿಸಿದ ನಂತರ ಸಭೆಯು ಪ್ರಾರಂಭವಾಯಿತು.

1. **ಪ್ರಾರ್ಥನೆ:**

   ಮೊದಲಿಗೆ ಸಿಬ್ಬಂದಿಯವರು ಶ್ರೀ ಸಿದ್ಧಿವಿನಾಯಕನನ್ನು ಕುರಿತು ಪ್ರಾರ್ಥನೆ ಮಾಡಿದ ನಂತರ ಬ್ಯಾಂಕಿನ ಸ್ಥಾಪನೆ, ಹಿನ್ನಲೆ, ಧ್ಯೇಯ ಹಾಗೂ ಸಾಧನೆಗಳನ್ನೊಳಗೊಂಡ ಬ್ಯಾಂಕಿನ ಗೀತೆಯನ್ನು ಹಾಡಿದರು. ಅನಂತರ ಆಡಳಿತ ಮಂಡಲಿಯವರಿಂದ ಬ್ಯಾಂಕಿನ ಆರಾಧ್ಯದೈವ ಶ್ರೀ ಸುಬ್ರಮಣ್ಯೇಶ್ವರಸ್ವಾಮಿಗೆ ಜ್ಯೋತಿ ಬೆಳಗಿಸುವುದರೊಂದಿಗೆ ಮಹಾಸಭೆಯ ಕಾರ್ಯಕಲಾಪಗಳಿಗೆ ಚಾಲನೆ ನೀಡಿದ ನಂತರ, ನಿರ್ದೇಶಕ ಮಂಡಲಿಯವರಿಂದ ಬ್ಯಾಂಕಿನ 2022-2023ನೇ ಸಾಲಿನ 53ನೇ ವಾರ್ಷಿಕ ವರದಿಯನ್ನು ಬಿಡುಗಡೆಗೊಳಿಸಲಾಯಿತು.

2. **ಸ್ವಾಗತ ಭಾಷಣ:**

   ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಡಾ: ಕೆ.ಎಂ. ರಂಗಧಾಮಶೆಟ್ಟಿ ಯವರು ಮೊದಲಿಗೆ ಸಭೆಯಲ್ಲಿ ಕ್ಷಮೆಯನ್ನು ಕೋರುತ್ತಾ, ನನಗೆ ಆರೋಗ್ಯದಲ್ಲಿ ವ್ಯತ್ಯಯವಾಗಿರುವ ಕಾರಣ ನಿಂತು ಮಾತನಾಡಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಕುಳಿತು ಮಾತನಾಡಲು ಒಪ್ಪಿಗೆ ನೀಡಬೇಕೆಂದು ಕೋರಿ, ಯಾರೂ ಸಹ

ತಪ್ಪು ತಿಳಿಯಬಾರದೆಂದು ಮನವಿ ಮಾಡುತ್ತಾ, ಗೌರವಾನ್ವಿತ, ವಯೋವೃದ್ಧ, ಜ್ಞಾನವೃದ್ಧ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಸದಸ್ಯರುಗಳನ್ನು, ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯ ಸಾರಥಿಯವರನ್ನು, ಆಡಳಿತ ಮಂಡಲಿಯ ನಿರ್ದೇಶಕರುಗಳನ್ನು, ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ಕೃಷ್ಣಯ್ಯ ಶೆಟ್ಟಿಯವರನ್ನು, ನಿವೃತ್ತ ಪ್ರಭಾರ ಪ್ರಧಾನ ವ್ಯವಸ್ಥಾಪಕರು ಹಾಗೂ ಹಾಲಿ ಬ್ಯಾಂಕಿನಲ್ಲಿ ಪೂರ್ಣ ಸಮಯದ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರನ್ನು ಹಾಗೂ ಸಿಬ್ಬಂದಿ ವರ್ಗದವರನ್ನು ಇಂದಿನ ಬ್ಯಾಂಕಿನ 2022–2023ನೇ ಸಾಲಿನ 53ನೇ ವರ್ಷದ ವಾರ್ಷಿಕ ಮಹಾಸಭೆಗೆ ಆಡಳಿತ ಮಂಡಲಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಎಲ್ಲರಿಗೂ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿದರು.

ಸನ್ಮಾನ್ಯ ಸಹೃದಯ ಗೌರವಾನ್ವಿತ ಸದಸ್ಯ ಬಂಧುಗಳೇ, ವಯೋವೃದ್ಧರೆ, ಜ್ಞಾನವೃದ್ಧರೆ, ಸಂಪನ್ಮೂಲ ವ್ಯಕ್ತಿಗಳೆ, ಇಂದು ನಡೆಯುತ್ತಿರುವ ಬ್ಯಾಂಕಿನ 2022–2023ನೇ ಸಾಲಿನ 53ನೇ ವಾರ್ಷಿಕ ಮಹಾಸಭೆಗೆ ಆಗಮಿಸಿರುವ ತಮಗೆಲ್ಲರಿಗೂ ಆಡಳಿತ ಮಂಡಲಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕವಾದ ಸ್ವಾಗತವನ್ನು ಕೋರುತ್ತೇನೆ. ಮಹಾಸಭೆಗಳನ್ನು ಸುಮಾರು 49 ವರ್ಷಗಳ ಕಾಲ ಕಲ್ಯಾಣ ಮಂಟಪಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಸಿಕೊಂಡು ಬಂದಿರುವುದು ತಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಆದರೆ ಕಳೆದ ಮೂರು ಸಾಲುಗಳ ಮಹಾ ಸಭೆಗಳನ್ನು ಕೋವಿಡ್–19ರ ಕಾರಣದಿಂದಾಗಿ ಸರ್ಕಾರವು ಅನುಮತಿಸಿದಂತೆ ವಿಡಿಯೋಕಾನ್ಫರೆನ್ಸ್ / ವರ್ಚುಯೆಲ್ ಮೀಟಿಂಗ್ ಮೂಲಕ ನಡೆಸಲಾಗಿದೆ. ಇದರಿಂದಾಗಿ ಆಡಳಿತ ಮಂಡಲಿ ಮತ್ತು ಸದಸ್ಯರುಗಳ ನಡುವಿನ ಮುಕ್ತ ಭೇಟಿಗೆ ಅವಕಾಶ ವಂಚಿತವಾಗಿದ್ದು ದುರಾದೃಷ್ಟಕರ ಸಂಗತಿ. ಇಂದಿನ ಮಹಾಸಭೆಯನ್ನು ಭೌತಿಕವಾಗಿ ನಡೆಸುತ್ತಿರುವುದರಿಂದ ನಿಮ್ಮೆಲ್ಲರನ್ನು ಮುಖಾಮುಖಿ ಭೇಟಿಯಾಗುತ್ತಿರುವುದು ತುಂಬಾ ಸಂತೋಷದ ವಿಷಯವಾಗಿದ್ದು, ಬ್ಯಾಂಕಿನ ಪ್ರಗತಿ ಮತ್ತು ಸಾಧನೆಯನ್ನು ವಾರ್ಷಿಕ ವರದಿ ಪುಟ ಸಂಖ್ಯೆ 64ರಲ್ಲಿ ಕಾಣಬಹುದಾಗಿದೆಯೆಂದು ವಿವರಿಸಿದರು.

ಕೋವಿಡ್–19ರ ಕಾರಣ ಇಡೀ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ಕಾರಣದಿಂದ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿ ಬ್ಯಾಂಕಿಂಗ್ ವಲಯದ ಬೆಳವಣಿಗೆಗೆ ಹಿನ್ನಡೆಯಾಗಿತ್ತು. ಆದರೆ ಕೇಂದ್ರ ಸರ್ಕಾರವು ಹಲವಾರು ಸೂಕ್ತ ಕ್ರಮಗಳನ್ನು ಕೈಗೊಂಡ ಪರಿಣಾಮವಾಗಿ, ಆರ್ಥಿಕತೆಯು ಈಗ ಚೇತರಿಕೆಯ ಹಾದಿಯನ್ನು ಕಂಡಿರುವುದಾಗಿ ತಿಳಿಸಿದರು.

ಬ್ಯಾಂಕು ಕಳೆದ 53 ವರ್ಷಗಳಿಂದ ಉತ್ತಮವಾಗಿ ನಡೆಯುತ್ತಿದ್ದು, ಹಿಂದಿನ ಸಾಲುಗಳಲ್ಲಿ ಅತಿ ಹೆಚ್ಚಿನ ಶೇ.25ರ ಡಿವಿಡೆಂಡ್ ನೀಡಿದ ಹೆಗ್ಗಳಿಕೆ ನಮ್ಮ ಬ್ಯಾಂಕಿನದಾಗಿದೆ. ನಂತರ ಭಾರತೀಯ ರಿಸರ್ವ್ ಬ್ಯಾಂಕು, ಬ್ಯಾಂಕಿನ ನಿಧಿಗಳನ್ನು ಹೆಚ್ಚಿಸಿಕೊಳ್ಳುವಂತೆ ಮತ್ತು ವಿವೇಕಯುತ ಬ್ಯಾಂಕ್ ಆಗಿ ವರ್ತಿಸುವಂತೆ ಸೂಚಿಸಿದ ಮೇರೆಗೆ ನಂತರದ ವರ್ಷಗಳಲ್ಲಿ ಡಿವಿಡೆಂಡ್ ಪ್ರಮಾಣವನ್ನು ಇಳಿಸಲಾಯಿತು. ಆದರೆ ಕಳೆದ 2019–2020ನೇ ಸಾಲಿನಲ್ಲಿ ಕೆಲವು ಸಹಕಾರಿ ಬ್ಯಾಂಕುಗಳ ಆರ್ಥಿಕತೆಯಲ್ಲಿ ಉಂಟಾದ ವ್ಯತ್ಯಯಗಳಿಂದಾಗಿ, ಭಾರತೀಯ ರಿಸರ್ವ್ ಬ್ಯಾಂಕು ನಿರ್ಬಂಧ ಹೇರಿದ್ದರಿಂದ ಹಾಗೂ 2020–2021ನೇ ಸಾಲಿನಲ್ಲಿ ಬ್ಯಾಂಕಿನಲ್ಲಿ ನಿವ್ವಳ ಎನ್.ಪಿ.ಎ. ಪ್ರಮಾಣವು ಶೇಕಡ 10 ಕ್ಕಿಂತ ಹೆಚ್ಚಿಗೆ ಇದ್ದು, ಬ್ಯಾಂಕಿನ ಮೇಲೆ ಮೇಲುಸ್ತುವಾರಿ (SAF-Supervisory Action Framework) ಕ್ರಮವನ್ನು ಜಾರಿಗೊಳಿಸಿರುವುದರಿಂದ ಸದಸ್ಯರಿಗೆ ಡಿವಿಡೆಂಡ್ ನೀಡಲು ಸಾಧ್ಯವಾಗಿರುವುದಿಲ್ಲವೆಂದರು.

ವರದಿ ಸಾಲಿನಲ್ಲಿಯೂ ಸಹ ಸಾಲಗಾರರು ಕೋವಿಡ್–19 ರಿಂದಾದ ತೊಂದರೆಗಳನ್ನೇ ತಿಳಿಸುತ್ತಾ, ಸಾಲ ಮರುಪಾವತಿ ಸಮರ್ಪಕವಾಗಿ ಮಾಡದೆ ಇರುವುದರಿಂದ ಸಾಲ ವಸೂಲಾತಿ ನಿರೀಕ್ಷಿಸಿದಷ್ಟು

ಪ್ರಮಾಣದಲ್ಲಿ ವಸೂಲಾಗಿರುವುದಿಲ್ಲ. ಆದರೂ ಕೆ.ಸಿ.ಎಸ್. ಕಾಯಿದೆ ಮತ್ತು ಸರ್ಫೇಸಿ ಕಾಯಿದೆಯಡಿಯಲ್ಲಿ ಸಾಲ ವಸೂಲಾತಿಗೆ ಕಾನೂನು ಕ್ರಮಗಳನ್ನು ಜರುಗಿಸಿದ ಮೇರೆಗೆ ಎನ್.ಪಿ.ಎ. ಮೊತ್ತವು ರೂ.69.81 ಕೋಟಿಗಳಿಂದ ರೂ.68.35 ಕೋಟಿಗಳಿಗೆ ಇಳಿಕೆಯಾಗಿದೆ. ಬ್ಯಾಂಕಿನ ನಿರ್ವಹಣಾ ಲಾಭ ರೂ.5.76 ಕೋಟಿಗಳಿದ್ದು, ವರದಿ ಸಾಲಿನಲ್ಲಿ ಅನುತ್ಪಾದಿತ ಆಸ್ತಿಗಳು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ವರ್ಗೀಕರಣಗೊಂಡಿದ್ದರಿಂದ ವರದಿ ಸಾಲಿನಲ್ಲಿ ರೂ.0.86 ಕೋಟಿಗಳಷ್ಟು ಎನ್.ಪಿ.ಎ. ಮೊತ್ತವನ್ನು ಕಾದಿರಿಸಲಾಗಿದೆ. ಇದರ ಜೊತೆಗೆ ನಾವು ರೂ.10.00 ಕೋಟಿಗಳ ಠೇವಣಿ ಮಾಡಿದ್ದ PMC ಬ್ಯಾಂಕು ತೊಂದರೆಗೆ ಒಳಗಾದ ಕಾರಣ ಅದನ್ನು ಅನುತ್ಪಾದಿತ ಹೂಡಿಕೆಯೆಂದು ಪರಿಗಣಿಸುವಂತೆ ಆರ್.ಬಿ.ಐ. ನಿರ್ದೇಶಿಸಿರುವುದರಿಂದ ಅದಕ್ಕೂ ಸಹ ರೂ.2.40 ಕೋಟಿಗಳನ್ನು ಕಾದಿರಿಸಬೇಕಾಯಿತು ಹಾಗೂ ಸರ್ಕಾರಿ ಭದ್ರತೆಗಳ ಮೇಲಿನ ಸವಕಳಿಗಾಗಿ ರೂ.2.05 ಕೋಟಿಗಳಷ್ಟು ಕಾದಿರಿಸಿರುವ ಎಲ್ಲಾ ಕಾರಣಗಳಿಂದಾಗಿ ರೂ.5.31 ಕೋಟಿಗಳಷ್ಟು ಅವಕಾಶ ಕಲ್ಪಿಸಿದರ ಜೊತೆಗೆ ರೂ.0.08 ಕೋಟಿಗಳ ಆದಾಯ ತೆರಿಗೆ ಪಾವತಿಸಿದ ನಂತರ ರೂ.0.37 ಕೋಟಿಗಳು ಬ್ಯಾಂಕಿನ ನಿವ್ವಳ ಲಾಭಗಳಿಸಿರುವುದಾಗಿ ತಿಳಿಸಿದರು.

ಬ್ಯಾಂಕು ಮೊದಲ ಬಾರಿಗೆ ಹಿಂದಿನ ಸಾಲಿನಲ್ಲಿ ರೂ.7.89 ಕೋಟಿಗಳ ನಿವ್ವಳ ನಷ್ಟವನ್ನು ಅನುಭವಿಸಿದ್ದು, ವರದಿ ಸಾಲಿನ ಲಾಭ ಕಳೆದು ಸಾಲಿನಾಂತ್ಯಕ್ಕೆ ರೂ.7.52 ಕೋಟಿಗಳ ಕ್ರೋಢೀಕೃತ ನಿವ್ವಳ ನಷ್ಟವನ್ನು ಹೊಂದಿರುವುದರಿಂದ ಡಿವಿಡೆಂಡ್ ನೀಡಲು ಯಾವುದೇ ಮೊತ್ತವನ್ನು ಸೂಚಿಸಿರುವುದಿಲ್ಲ, ಇದು ಆಡಳಿತ ಮಂಡಲಿಗೆ ತುಂಬಾ ನೋವಿನ ಸಂಗತಿಯಾಗಿದೆಯೆಂದರು.

ಪ್ರಸ್ತುತ ಆಡಳಿತ ಮಂಡಲಿಯು ಅಸ್ತಿತ್ವಕ್ಕೆ ಬಂದ ನಂತರ ಮಂಜೂರು ಮಾಡಿರುವ ಯಾವುದೇ ಸಾಲಗಳು ಎನ್.ಪಿ.ಎ. ಆಗಿರುವುದಿಲ್ಲ ಹಾಗೂ ಹಿಂದೆ ನೀಡಿರುವ ಸಾಲಗಳನ್ನು ವಸೂಲಿ ಮಾಡಲು ಕೆ.ಸಿ.ಎಸ್. ಕಾಯಿದೆ ಮತ್ತು ಸರ್ಫೇಸಿ ಕಾಯಿದೆಯಡಿ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಕೇಂದ್ರೀಕೃತ ವಸೂಲಾತಿ ತಂಡವನ್ನು ಸಹ ರಚಿಸಲಾಗಿದ್ದು, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸುಮಾರು 48 ಖಾತೆಗಳ ಮೊತ್ತ ರೂ.24.38 ಕೋಟಿಗಳ ಮೇಲೆ ಹರಾಜು ಪ್ರಕ್ರಿಯೆ ನಡೆಸಲಾಗಿದ್ದು, ವರದಿ ಸಾಲಿನಾಂತ್ಯಕ್ಕೆ 16 ಸ್ಥಿರಾಸ್ತಿಗಳನ್ನು ಭೌತಿಕವಾಗಿ ಬ್ಯಾಂಕಿನ ವಶಕ್ಕೆ ಪಡೆದು ಹರಾಜು ನಡೆಸಿದ್ದರೂ ಸಹ ಬಿಡ್‌ದಾರರು ಭಾಗವಹಿಸಿರುವುದಿಲ್ಲ. ಮಾನ್ಯ ಸದಸ್ಯರು ಈ ಬಗ್ಗೆ ಹತ್ತಿರದ ಶಾಖೆಗಳಲ್ಲಿ ವಿಚಾರಿಸಿ, ಸ್ಥಿರಾಸ್ತಿಗಳ ಮಾರಾಟಕ್ಕೆ ಸಹಕರಿಸಬೇಕಾಗಿ ಕೋರಿದರು.

ಕೇಂದ್ರ ಗೃಹ ಮತ್ತು ಸಹಕಾರ ಮಂತ್ರಿಗಳಾದ ಶ್ರೀಯುತ ಅಮಿತ್ ಷಾ ರವರು, ಮಾನ್ಯ ಹಣಕಾಸು ಸಚಿವರು ಮತ್ತು ಆರ್.ಬಿ.ಐ. ಗೌರ್ನರ್ ಅವರೊಂದಿಗೆ ಹಲವು ಸುತ್ತಿನ ಸಭೆಗಳನ್ನು ನಡೆಸಿದ ನಂತರ ದೇಶದಲ್ಲಿರುವ ಸಹಕಾರಿ ಬ್ಯಾಂಕುಗಳನ್ನು ಸಶಕ್ತ ಮತ್ತು ಸದೃಢಗೊಳಿಸಲು ಆರ್.ಬಿ.ಐ. ಮೂಲಕ ಕೈಗೊಂಡಿರುವ ಪ್ರಮುಖ 7 (ಏಳು) ಅಂಶಗಳು ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಸಹಕಾರಿ ಬ್ಯಾಂಕುಗಳು ಏಳಿಗೆ ಹೊಂದಲು ತುಂಬಾ ಉತ್ತೇಜನಕಾರಿ ಅಂಶಗಳಾಗಿವೆ. ಇಂತಹ ಉತ್ತಮ ನಿರ್ಧಾರವನ್ನು ಕೈಗೊಂಡಿರುವ ಶ್ರೀಯುತ ಅಮಿತ್ ಷಾ ಅವರಿಗೆ ಬ್ಯಾಂಕಿನ ಎಲ್ಲಾ ಸದಸ್ಯರ ಹಾಗೂ ಆಡಳಿತ ಮಂಡಲಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಈ ಏಳು ಅಂಶಗಳ ಪೈಕಿ ಒಂದಾದ "Compromise Settlements & Technical write-offs" – "ರಾಜಿ ಪರಿಹಾರ ನೀತಿ ಮತ್ತು ತಾಂತ್ರಿಕ ವಜಾ" ಪಾಲಿಸಿಯನ್ನು ಆರ್.ಬಿ.ಐ. ನಿರ್ದೇಶನ ದನ್ವಯ ಬ್ಯಾಂಕಿನಲ್ಲಿ ಎನ್.ಪಿ.ಎ. ಪ್ರಮಾಣವನ್ನು ತಗ್ಗಿಸುವ ಸಲುವಾಗಿ ರಚಿಸಿ ಅಳವಡಿಸಿಕೊಳ್ಳಲಾಗಿದ್ದು, ಬ್ಯಾಂಕಿಗೂ

ಯಾವುದೇ ತೊಂದರೆಯಾಗದಂತೆ ಕನಿಷ್ಟ ತ್ಯಾಗದೊಂದಿಗೆ, ಅಸಲಿನ ಜೊತೆಗೆ ಬಡ್ಡಿಯನ್ನು ಪಡೆಯುವ ಮೂಲಕ ಅನುತ್ಪಾದಿತ ಆಸ್ತಿಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಪಾಲಿಸಿಯನ್ನು ರೂಪಿಸಲಾಗಿದೆ. ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೇಕಡ 6 ಕ್ಕಿಂತ ಕಡಿಮೆ ಮಾಡುವ ಮೂಲಕ ಆರ್.ಬಿ.ಐ. ವಿಧಿಸಿರುವ ಮೇಲುಸ್ತುವಾರಿ ಕ್ರಮದಿಂದ (SAF-Supervisory Action Framework) ಹೊರಬಂದು ಸದಸ್ಯರಿಗೆ ಡಿವಿಡೆಂಡ್ ನೀಡಬೇಕೆಂಬ ಉದ್ದೇಶವಿದೆ. ಅರ್ಹ ಸುಸ್ತಿದಾರರು ಬ್ಯಾಂಕನ್ನು ಸಂಪರ್ಕಿಸಿ ತಮ್ಮ ಸಾಲಗಳನ್ನು ಮರುಪಾವತಿ ಮಾಡುವ ಮೂಲಕ ಬ್ಯಾಂಕಿನ ಪ್ರಗತಿಗೆ ಸಹಕಾರ ನೀಡಬೇಕೆಂದು ಕೋರಿದರು.

ಬ್ಯಾಂಕಿನ "ಸುವರ್ಣ ಮಹೋತ್ಸವ" ವನ್ನು ಹಿಂದಿನ ವರ್ಷಗಳಲ್ಲೇ ಆಚರಿಸಬೇಕಾಗಿದ್ದು, ಕೋವಿಡ್–19ರ ಕಾರಣದಿಂದ ಮುಂದೂಡಲಾಯಿತು. ನಂತರ ಎಲ್ಲರೂ ಸರಿ ಹೋಗುತ್ತಿದ್ದ ಕಾರಣ 2022–2023ನೇ ಆರ್ಥಿಕ ಸಾಲಿನೊಳಗೆ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಆಚರಿಸುವ ಸಲುವಾಗಿ ಇಲಾಖೆಯ ಆಡಳಿತಾತ್ಮಕ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಇಲಾಖೆಯವರು ಕೇಳಿದ ಕೆಲವು ದಾಖಲೆಗಳನ್ನು ಸಲ್ಲಿಸಿದ್ದು, ವಾರ್ಷಿಕ ಮಹಾಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳ ಪ್ರತಿಯನ್ನು ಒದಗಿಸಬೇಕಾಗಿರುವುದರಿಂದ ವಿಷಯವನ್ನು ಇಂದಿನ ಮಹಾಸಭೆಯಲ್ಲಿ ಮಂಡಿಸಿದ್ದು, ಅನುಮತಿ ನೀಡಬೇಕೆಂದು ಮನವಿ ಮಾಡುತ್ತೇನೆ. ಸುವರ್ಣ ಮಹೋತ್ಸವದ ಅಂಗವಾಗಿ ಸನ್ಮಾನ್ಯ ಸದಸ್ಯರಿಗೆ ಕಾನೂನಿನ ಇತಿ ಮಿತಿಯೊಳಗೆ ಉತ್ತಮ ನೆನೆಪಿನ ಕಾಣಿಕೆಯನ್ನು ನೀಡುವ ಉದ್ದೇಶ ಹೊಂದಲಾಗಿದೆಯೆಂದು ತಿಳಿಸಿದರು.

ಬ್ಯಾಂಕಿನ ಆರ್ಥಿಕ ವ್ಯವಹಾರಗಳಲ್ಲಿ ಡಿಜಿಟಲೀಕರಣವು ಪ್ರಮುಖ ಪಾತ್ರ ವಹಿಸುತ್ತಿದ್ದು, ನಮ್ಮ ಬ್ಯಾಂಕು ಸಹ ಇದಕ್ಕೆ ಒತ್ತು ನೀಡಿ, ಬ್ಯಾಂಕಿನಲ್ಲಿ ಸದಸ್ಯರಿಗೆ / ಗ್ರಾಹಕರಿಗೆ ಉತ್ತಮವಾದ ಮತ್ತು ಗುಣಮಟ್ಟದ ಸೇವೆಯನ್ನು ಶೀಘ್ರವಾಗಿ ಒದಗಿಸುವ ದೃಷ್ಠಿಯಿಂದ ಸಂಪೂರ್ಣ ಗಣಕೀಕೃತಗೊಳಿಸಿ, ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಮೆ॥ ಸರಸ್ವತ್ ಇನ್ಫೋಟೆಕ್ ಪ್ರೈ. ಲಿ., ರವರ ಸ್ವಿಫ್ಟ್‌ಕೋರ್ ಸಾಫ್ಟ್‌ವೇರ್ ಅನ್ನು ದಿನಾಂಕ 29.08.2022 ರಿಂದ ಬ್ಯಾಂಕಿನಲ್ಲಿ ಅಳವಡಿಸಿದ್ದು ಕಾರ್ಯ ನಿರ್ವಹಿಸಲಾಗುತ್ತಿದೆ. ದೈನಂದಿನ ಕೆಲವು ವ್ಯವಹಾರಗಳಲ್ಲಿ ಕೆಲವೊಂದು ನ್ಯೂನತೆಗಳು ಕಂಡುಬಂದಿದ್ದು, ಅವುಗಳನ್ನು ಶೀಘ್ರವಾಗಿ ಪರಿಹರಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಳ್ಳಲು ಕ್ರಮವಿಡಲಾಗಿದೆ ಹಾಗೂ ಶ್ರೀಘ್ರವಾಗಿ ಎ.ಟಿ.ಎಂ. ಮತ್ತು RuPay ಕಾರ್ಡ್, ಮೊಬೈಲ್ ಆ್ಯಪ್ ವ್ಯವಸ್ಥೆಯನ್ನು ಬ್ಯಾಂಕ್ SAF ನಿಂದ ಹೊರಬಂದ ನಂತರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ವಿವರಿಸಿದರು.

ಬ್ಯಾಂಕಿನ ಎಂಟು ಶಾಖೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಾರ್ಷಿಕ ಬಾಡಿಗೆ ಮೊತ್ತವೇ ಸುಮಾರು ರೂ.83.00 ಲಕ್ಷ ವ್ಯಯಿಸಲಾಗುತ್ತಿದೆ. ಬ್ಯಾಂಕಿನ ಶಾಖೆಗಳು ಗಣಕೀಕೃತಗೊಂಡಿರುವುದರಿಂದ ಶಾಖೆಗಳನ್ನು ಕಡಿಮೆ ವಿಸ್ತೀರ್ಣವುಳ್ಳ ಮತ್ತು ಕಡಿಮೆ ಬಾಡಿಗೆಯ ಕಟ್ಟಡಗಳಿಗೆ ಸ್ಥಳಾಂತರಿಸಲು ಉದ್ದೇಶಿಸಿದ್ದು, ಈಗಾಗಲೇ ಕಾಚರಕನಹಳ್ಳಿ ಶಾಖೆಯನ್ನು ಸುಮಾರು 2000 ಚದರ ಅಡಿಗಳ, ರೂ.59,800/– ಬಾಡಿಗೆ ಕಟ್ಟಡದಿಂದ ಸುಮಾರು 1000 ಚದರ ಅಡಿಗಳ ರೂ.35,000/–ಗಳ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಇದೇ ರೀತಿ ಎರಡು–ಮೂರು ಶಾಖೆಗಳಿಗೆ ಸ್ವಂತ ಕಟ್ಟಡವನ್ನು ಹೊಂದುವುದರ ಮೂಲಕ ಬಾಡಿಗೆ ಖರ್ಚುಗಳನ್ನು ತಗ್ಗಿಸಲು ಉದ್ದೇಶಿಸಲಾಗಿದೆ. ಅನುಮೋದಿತ ಸಿಬ್ಬಂದಿ ಸೇವಾ ನಿಯಮದಡಿ ಬ್ಯಾಂಕಿನಲ್ಲಿ ನೌಕರರ ಸ್ವಯಂ ಇಚ್ಛಾನಿವೃತ್ತಿ (Voluntary Retirement) ಯೋಜನೆಯನ್ನು ಅಳವಡಿಸಿದ ಮೇರೆಗೆ ಏಳು (7) ಸಿಬ್ಬಂದಿಗಳು ಈ ಯೋಜನೆಯಡಿ

ನಿವೃತ್ತಿ ಹೊಂದಿದ ಪರಿಣಾಮ ವಾರ್ಷಿಕ ಸುಮಾರು ರೂ.50.00 ಲಕ್ಷ ಸಿಬ್ಬಂದಿ ವೆಚ್ಚಗಳು ಕಡಿಮೆಯಾಗುತ್ತದೆ. ಹೀಗೆ ಹಲವಾರು ಖರ್ಚು ವೆಚ್ಚಗಳನ್ನು ಕಡಿಮೆ ಮಾಡುವ ಮೂಲಕ ಲಾಭ ಗಳಿಸಿ ಸದಸ್ಯರಿಗೆ ಡಿವಿಡೆಂಡ್ ನೀಡಲೇಬೇಕೆಂಬುದು ಆಡಳಿತ ಮಂಡಲಿಯ ಹೆಗ್ಗುರಿಯಾಗಿದೆಯೆಂದರು.

ಬ್ಯಾಂಕಿನ ಅಭಿವೃದ್ಧಿಯನ್ನೇ ತನ್ನ ಗುರಿಯಾಗಿಸಿಕೊಂಡಿರುವ ಆಡಳಿತ ಮಂಡಲಿಯು, ಇಂದಿನ ಈ ಮಹಾಸಭೆಯಲ್ಲಿ ಬ್ಯಾಂಕಿನ ಆರ್ಥಿಕ ಅಂಕಿ ಅಂಶಗಳೊಂದಿಗೆ 2022–2023ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಹಾಗೂ ಆಡಳಿತಾತ್ಮಕವಾದ ಹಲವಾರು ವಿಷಯಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇವೆ, ದಯವಿಟ್ಟು ಈ ಎಲ್ಲಾ ವಿಷಯಗಳನ್ನು ಚರ್ಚಿಸಿ, ಮಂಜೂರಾತಿಯನ್ನು ನೀಡಬೇಕಾಗಿ ಪ್ರಾರ್ಥಿಸಿ, ತಮ್ಮ ಅತ್ಯುತ್ತಮವಾದ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಬ್ಯಾಂಕು ಇನ್ನೂ ಹೆಚ್ಚಿನ ರೀತಿ ಉನ್ನತ ಮಟ್ಟಕ್ಕೆ ಬೆಳೆಯಲು ಸಹಕರಿಸುವಂತೆ ಕೋರಿ, ಸ್ವಾಮಿ ವಿವೇಕಾನಂದರ "Those who live's for themselves are more dead than alive – Those who lives for others is true living" ಅಂದರೆ "ಯಾರು ತಮಗಾಗಿ ಬದುಕುವವರೋ ಅವರು ಬದುಕ್ಕಿದ್ದೂ ಸತ್ತಂತೆ – ಯಾರು ಪರರಿಗಾಗಿ ಬದುಕುತ್ತಾರೋ ಅದು ನಿಜವಾದ ಜೀವನ" ಎಂಬ ವಿವೇಕವಾಣಿಯ ಅರ್ಥವನ್ನು ಸಭೆಗೆ ವಿವರಿಸುವುದರೊಂದಿಗೆ, ಎಲ್ಲರನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿದರು.

**3. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸೂಚಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಪಿ. ರುದ್ರಮೂರ್ತಿಯವರು ವಿಷಯವನ್ನು ಮಂಡಿಸುತ್ತಾ, ಬ್ಯಾಂಕಿನ ವರದಿ ಪುಸ್ತಕದಲ್ಲಿನ ಪುಟ ಸಂಖ್ಯೆ 67 ಮತ್ತು 68ರಲ್ಲಿ ಮುದ್ರಿತವಾಗಿರುವ ಒಟ್ಟು 104 ಸದಸ್ಯರುಗಳು ದಿನಾಂಕ 01–09–2022 ರಿಂದ ದಿನಾಂಕ 31–08–2023 ರವರೆಗಿನ ಅವಧಿಯಲ್ಲಿ ಹಾಗೂ ಬ್ಯಾಂಕಿನೊಂದಿಗೆ ಅತ್ಯುತ್ತಮ ಒಡನಾಟವನ್ನು ಹೊಂದಿದ್ದ ಪ್ಯಾನಲ್ ಅಡ್ವೋಕೇಟ್ ಎನ್.ಎಸ್. ಸತ್ಯನಾರಾಯಣ ಗುಪ್ತರವರು ದೈವಾಧೀನರಾಗಿದ್ದು ಇವರೆಲ್ಲರೂ ಹಲವಾರು ವರ್ಷಗಳಿಂದ ನಮ್ಮ ಜೊತೆಯಲ್ಲಿ ಸದಸ್ಯರುಗಳಾಗಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಿರುವುದಾಗಿ ತಿಳಿಸಿ, ದೈವಾಧೀನರಾದ ಸದಸ್ಯರ ಹೆಸರುಗಳನ್ನು ಓದಲು ಮುಂದಾದಾಗ, ಸದಸ್ಯರಾದ ಪ್ರೊ. ಸಿ.ಕೆ. ಲಕ್ಷ್ಮೀನಾರಾಯಣ ಗುಪ್ತ ಸದಸ್ಯತ್ವ ಸಂಖ್ಯೆ 11285 ರವರು ದೈವಾಧೀನರಾಗಿರುವ ಸದಸ್ಯರ ಹೆಸರುಗಳು ಈಗಾಗಲೇ ಮುದ್ರಿತವಾಗಿರುವುದರಿಂದ ಮತ್ತೆ ಓದುವುದು ಬೇಡವೆಂದು ತಿಳಿಸಿ ನೇರ ಚರ್ಚೆಗೆ ಹೋಗೋಣವೆಂದು ಸಲಹೆ ನೀಡಿದರು. ನಂತರ ನಿರ್ದೇಶಕರಾದ ಶ್ರೀ ಪಿ. ರುದ್ರಮೂರ್ತಿಯವರು ಎಲ್ಲಾ ಮೃತರಾದ ಸದಸ್ಯರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಮತ್ತು ಅವರ ಕುಟುಂಬ ವರ್ಗಕ್ಕೆ ದು:ಖಭರಿಸುವ ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲು ಎರಡು ನಿಮಿಷ ಎದ್ದು ನಿಂತು ಮೌನಾಚರಣೆ ಮಾಡಲು ಕೋರಿದ ಮೇರೆಗೆ ಸಭೆಯಲ್ಲಿ ಸೇರಿದ್ದ ಎಲ್ಲರೂ ಎದ್ದು ನಿಂತು ಮೃತ ಸದಸ್ಯರುಗಳ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿದರು.

ಮಹಾಸಭೆಯಲ್ಲಿ ಸದಸ್ಯರು ಕೇಳಿಲಿರುವ ಪ್ರಶ್ನೆಗಳಿಗೆ ಉತ್ತರಿಸಲು ಹಾಗೂ ಮಹಾಸಭೆಯ ಕಾರ್ಯಕಲಾಪಗಳನ್ನು ಮುನ್ನಡೆಸಲು ಬ್ಯಾಂಕಿನಲ್ಲಿ ಪೂರ್ಣ ಸಮಯದ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರಿಗೆ ಮಹಾಸಭೆಯ ಸಭಾಧ್ಯಕ್ಷರಾದ ಡಾ॥ ಕೆ.ಎಂ. ರಂಗಧಾಮ ಶೆಟ್ಟಿ ಯವರು ಅಧಿಕಾರ ನೀಡಿದರು.

**4. ಮಹಾಸಭೆಯ ಆಹ್ವಾನ ಪತ್ರಿಕೆಯಲ್ಲಿನ ಕಾರ್ಯಕಲಾಪಗಳ ಪಟ್ಟಿಯನ್ನು ಓದಿ ಅಂಗೀಕರಿಸುವುದು:**

ನಿರ್ದೇಶಕರಾದ ಶ್ರೀ ನಂಜೇಗೌಡರವರು ವಿಷಯವನ್ನು ಮಂಡಿಸುತ್ತಾ, ನಾನು ಬ್ಯಾಂಕಿನ ಸದಸ್ಯನಾಗಿ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿ ಅವರೊಂದಿಗೆ ಈ ಹಿಂದೆ ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸುತ್ತಿದ್ದೆನು, ಈಗ ನಿರ್ದೇಶಕನಾಗಿ ವಿಷಯವನ್ನು ಮಂಡಿಸಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯವೆಂದು ಭಾವಿಸುವುದಾಗಿ ತಿಳಿಸಿ, ಆಹ್ವಾನ ಪತ್ರಿಕೆಯ ಕಾರ್ಯಕಲಾಪಗಳನ್ನು ಅಂಚೆಯ ಮೂಲಕ ಕಳಿಸಿರುವ 53ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 2 ಮತ್ತು 3 ರಲ್ಲಿ ಹಾಗೂ ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 2 ರಲ್ಲಿ ಮತ್ತು ಕಾರ್ಯಕಲಾಪಗಳಿಗೆ ಅನುಕ್ರಮವಾಗಿ ಆಡಳಿತ ಮಂಡಲಿಯು ಟಿಪ್ಪಣಿಗಳನ್ನು ಪುಟ 5 ರಿಂದ 7 ರವರೆಗೆ ಮುದ್ರಿಸಿ, ಸದಸ್ಯರಿಗೆ ನೀಡಲಾಗಿದೆ. ಕಾರ್ಯಕಲಾಪದ ಪಟ್ಟಿಯಲ್ಲಿ, ಹಿಂದಿನ ಮಹಾಸಭೆಯ ನಡವಳಿಕೆ, ವಾರ್ಷಿಕ ವರದಿಯೊಂದಿಗೆ ಮುಂದಿನ ವರ್ಷದ ಕಾರ್ಯಯೋಜನೆಗೆ ಅನುಮೋದನೆ, 2022–2023ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಇದಕ್ಕೆ ಆಡಳಿತ ಮಂಡಲಿಯ ಅನುಪಾಲನಾ ವರದಿ, 2023–2024ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕ, 2022–2023ನೇ ಸಾಲಿನ ವ್ಯಯದ ಪಟ್ಟಿ ಪರಿಶೀಲನೆ, 2023–2024ನೇ ಸಾಲಿಗೆ ಮುಂಗಡ ಪತ್ರ ಮತ್ತು 2024–2025ನೇ ಸಾಲಿಗೆ ತಾತ್ಕಾಲಿಕ ಮುಂಗಡ ಪತ್ರ ಮಂಜೂರು ಮಾಡುವುದು, 2022–2023ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಬಗ್ಗೆ, ಸದಸ್ಯರ ಸೇಪಡೆ ಮತ್ತು ಸಮಾಪನೆ, ನಿರ್ದೇಶಕ ಮಂಡಲಿಯ ಮತ್ತು ಪದಾಧಿಕಾರಿಗಳಿಗೆ 2022–2023ನೇ ಸಾಲಿನಲ್ಲಿ ನೀಡಿರುವ ಸಂಭಾವನೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇತ್ಯಾದಿಗಳ ವಿಮರ್ಶೆ, ಇವುಗಳನ್ನು ಮಹಾಸಭೆಯಲ್ಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿಸಿರುವಂತೆ ಬೇರೆ ಬೇರೆ ವಿಷಯಗಳಾಗಿ ಚರ್ಚಿಸಬೇಕಾಗಿದೆ, ಆಡಳಿತ ಮಂಡಲಿಯು ಸಹ ಇದಕ್ಕೆ ವಿವರಣೆಯನ್ನು ನೀಡಿದೆಯೆಂದು ತಿಳಿಸಿ, ಮಹಾಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ಪೂರ್ಣವಾಗಿ ಓದಿ, ಆಯಾಯ ವಿಷಯಗಳು ಬಂದಾಗ ಸನ್ಮಾನ್ಯ ಸದಸ್ಯರುಗಳು ಪರಿಶೀಲಿಸಿ ಅಂಗೀಕರಿಸಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಎನ್.ಕೆ. ಹರೀಶ್ ಸದಸ್ಯತ್ವ ಸಂಖ್ಯೆ 107961 ರವರು ಮಾತನಾಡಿ, 53ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯಲ್ಲಿನ ಕಾರ್ಯಕಲಾಪಗಳ ಪಟ್ಟಿಯು ಕಾನೂನು ಬದ್ಧವಾಗಿ ಸರಿಯಾಗಿರುವುದರಿಂದ ಒಪ್ಪಿಗೆಯನ್ನು ಸೂಚಿಸಿದರು. ಇದನ್ನು ಮತ್ತೊಬ್ಬ ಸದಸ್ಯರಾದ ಶ್ರೀ ಶಿವರಾಜ್ ಕೆ.ಎಸ್. ಸದಸ್ಯತ್ವ ಸಂಖ್ಯೆ 120625 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಆಹ್ವಾನ ಪತ್ರಿಕೆ ಮತ್ತು ಕಾರ್ಯಕಲಾಪಗಳ ಪಟ್ಟಿಯನ್ನು ಅಂಗೀಕರಿಸಿತು.

**5. 2021–2022ನೇ ಸಾಲಿನ ವಾರ್ಷಿಕ ಮಹಾ ಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ರವೀಂದ್ರ ಪಿ.ಕೆ. ರವರು ವಿಷಯವನ್ನು ಮಂಡಿಸುತ್ತಾ, 2021–2022ನೇ ಸಾಲಿನ ಮಹಾಸಭೆಯ ನಡವಳಿಕೆಗಳನ್ನು ಬಿಳಿಹೊದಿಕೆ ಪುಸ್ತಕ ಪುಟ ಸಂಖ್ಯೆ 2 ರಿಂದ 29 ರವರೆಗೆ ಮುದ್ರಿತವಾಗಿರುವುದನ್ನು ತಿಳಿಸಿ, ನಡವಳಿಕೆಗಳನ್ನು ಓದಲು ಮುಂದಾದಾಗ, ಸದಸ್ಯರಾದ ಶ್ರೀ ಎನ್.ಕೆ. ಹರೀಶ್ ಸದಸ್ಯತ್ವ ಸಂಖ್ಯೆ 107961 ರವರು ಮಾತನಾಡಿ, ನಡವಳಿಕೆಯು ಸುಮಾರು 30 ಪುಟಗಳಿದ್ದು, ಈಗಾಗಲೇ ಮುದ್ರಿತ ನಡವಳಿಕೆ ಎಲ್ಲರ ಬಳಿ ಇರುವುದರಿಂದ ನಾವುಗಳೇ ಓದಿಕೊಳ್ಳುತ್ತೇವೆ, ಮತ್ತೆ ಓದುವ ಅಗತ್ಯವಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರುಗಳು ಮಾತನಾಡಿ ದಿನಾಂಕ 23–09–2022 ರಂದು ನಡೆದ 52ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳ ಬಗ್ಗೆ ಮಾತನಾಡುತ್ತಾ, ಪುಟ ಸಂಖ್ಯೆ 5 ರಲ್ಲಿ ಬ್ಯಾಂಕಿನ 50 ವರ್ಷದ ಸುವರ್ಣ ಮಹೋತ್ಸವದ ಬಗ್ಗೆ ತಿಳಿಸಲಾಗಿದ್ದು, ಬ್ಯಾಂಕು ಈ ಹಿಂದೆ ಸುಮಾರು 50 ವರ್ಷಗಳ ಕಾಲ ಅತ್ಯುತ್ತಮವಾಗಿ ನಡೆಯುತ್ತಿದ್ದು 16–17 ಪರ್ಸೆಂಟ್ ಡಿವಿಡೆಂಡ್ ನೀಡಿರುತ್ತೀರಿ. ಆದರೆ ಸತತವಾಗಿ ಮೂರು–ನಾಲ್ಕು ವರ್ಷಗಳಿಂದ ಸದಸ್ಯರಿಗೆ ಡಿವಿಡೆಂಡ್ ನೀಡಿರುವುದಿಲ್ಲ. ಕೋವಿಡ್–19 ರಿಂದ ತೊಂದರೆಗಳಾಗಿದ್ದರೂ ಸಹ ಕೆಲವು ಬ್ಯಾಂಕುಗಳು ಲಾಭಗಳಿಸಿ ಉತ್ತಮವಾಗಿದ್ದು ಡಿವಿಡೆಂಡ್ ನೀಡುತ್ತಿವೆ. ನಮ್ಮ ಬ್ಯಾಂಕಿನ ಎನ್.ಪಿ.ಎ. ಪ್ರಮಾಣ ಶೇ. 10 ಕ್ಕಿಂತ ಹೆಚ್ಚಾಗಿದೆ. ಹಿಂದಿನ ವರ್ಷ ಸುಮಾರು ರೂ. 8.00 ಕೋಟಿ ನಷ್ಟವಾಗಿದೆ, ವರದಿ ಸಾಲಿಗೆ ರೂ. 37.00 ಲಕ್ಷಗಳ ಅಲ್ಪ ಲಾಭ ಮಾಡಿದ್ದು, ಸದಸ್ಯರಿಗೆ ಸುವರ್ಣ ಮಹೋತ್ಸವದಲ್ಲಿ ಉತ್ತಮವಾದ ನೆನಪಿನ ಕಾಣಿಕೆ ನೀಡಬೇಕಾಗಿದೆ. ಈ ಸಲವೂ ಅನುಮತಿ ಕೇಳಿರುವಿರಿ, ಸಭೆ ಅನುಮತಿ ನೀಡುತ್ತದೆ. ಆದರೆ ಯಾವ ರೀತಿ ಹಣವನ್ನು ಹೊಂದಿಸಿಕೊಳ್ಳುವಿರಿ ? ಎನ್.ಪಿ.ಎ. ಪ್ರಮಾಣ ತಗ್ಗಿಸಲು ಏನು ಕ್ರಮಗಳನ್ನು ಕೈಗೊಂಡಿರುವಿರೆಂದು ಸಭೆಗೆ ತಿಳಿಸಬೇಕೆಂದರು.

ಸದಸ್ಯರಿಗೆ / ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಸಹಕಾರಿ ಬ್ಯಾಂಕುಗಳು 9–10 ವರ್ಷಗಳಿಂದ ಸಿ.ಬಿ.ಎಸ್. ಅಳವಡಿಸಿಕೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ನಮ್ಮ ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಂಡರೂ ಸಹ ಯಾವುದೇ ಸಾಫ್ಟ್‌ವೇರ್ ಸಹ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇದು ಮೂರನೇ ಸಾಫ್ಟ್‌ವೇರ್ ಆಗಿದ್ದು ಏತಕ್ಕೆ ಸಮರ್ಪಕವಾಗಿ ಅಳವಡಿಸಿಕೊಂಡಿಲ್ಲವೆಂದು ಪ್ರಶ್ನಿಸಿ, ಪದೇಪದೇ ಈ ರೀತಿ ಸಾಫ್ಟ್‌ವೇರ್ ಬದಲಾವಣೆ ಮಾಡುತ್ತೀರಿ, ಇದರಿಂದ ಹೆಚ್ಚಿನ ಖರ್ಚು ವೆಚ್ಚಗಳಾಗುತ್ತಿದೆ. ಡಿಜಿಟಲೀಕರಣದ ಯುಗವಾಗಿದ್ದು, ಎ.ಟಿ.ಎಂ. ಆಗಿಲ್ಲ, ಆನ್‌ಲೈನ್ ವ್ಯವಹಾರ ಆಗಿಲ್ಲ, ನಮ್ಮ ಬ್ಯಾಂಕು ಬೆಂಗಳೂರಿನಂತಹ ಮಹಾನಗರದಲ್ಲಿದ್ದು ಇನ್ನೂ ಹಿಂದುಳಿದಿರುವುದಕ್ಕೆ ಕಾರಣವೇನೆಂದು ಪ್ರಶ್ನಿಸಿದರು?

ಸದಸ್ಯರ ಪ್ರಶ್ನೆಗಳಿಗೆ ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜರವರು ಉತ್ತರಿಸುತ್ತಾ, ಬ್ಯಾಂಕು 2019ರಲ್ಲಿ SAF ನಲ್ಲಿದ್ದರೂ ಸಹ ಆರ್.ಬಿ.ಐ. ಅನುಮತಿ ಪಡೆದು ಡಿವಿಡೆಂಡ್ ವಿತರಿಸಿದೆ. 2020 ರಲ್ಲಿ ಕೋವಿಡ್–19ರ ಹಿನ್ನಲೆಯಲ್ಲಿ ಆರ್ಥಿಕತೆ ಹೆಚ್ಚಿನ ಅನಿಶ್ಚಿತತೆ ಹೊಂದಿರುವುದರಿಂದ ಆರ್.ಬಿ.ಐ. ಬೇಡವೆಂದು ತಿಳಿಸಿದ ಮೇರೆಗೆ ನೀಡಿಲ್ಲ. 2021ರಲ್ಲಿ SAF ಮತ್ತು NPA ಪ್ರಮಾಣ ಶೇ.10ಕ್ಕಿಂತ ಹೆಚ್ಚಿಗೆ ಇದ್ದ ಕಾರಣ ನೀಡಿರುವುದಿಲ್ಲ. 2022ರಲ್ಲಿ ಬ್ಯಾಂಕು ಮೊದಲ ಬಾರಿಗೆ ರೂ.7.89 ಕೋಟಿಗಳ ನಷ್ಟವನ್ನು ಹೊಂದಿದ ಕಾರಣ ಡಿವಿಡೆಂಡ್ ನೀಡಿರುವುದಿಲ್ಲವೆಂದು ತಿಳಿಸಿ, ಪಾವತಿಸಬೇಕಾದ ಯಾವುದೇ ಡಿವಿಡೆಂಡ್ ಮೊತ್ತ ಬಾಕಿ ಇರುವುದಿಲ್ಲ. ಆದರೆ ಸದಸ್ಯರು ಡಿವಿಡೆಂಡ್ ಪಡೆಯುವ ವಿಧಾನವನ್ನು ಮಾಹಿತಿಗಾಗಿ ನೀಡಲಾಗಿದೆಯೆಂದರು. ಬ್ಯಾಂಕಿನ ನಿರ್ವಹಣಾ ಲಾಭ ರೂ.5.76 ಕೋಟಿಗಳಿದ್ದು, ವರದಿ ಸಾಲಿನಲ್ಲಿ ಅನುತ್ಪಾದಿತ ಆಸ್ತಿಗಳು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ವರ್ಗೀಕರಣಗೊಂಡಿದ್ದರಿಂದ ವರದಿ ಸಾಲಿನಲ್ಲಿ ರೂ.0.86 ಕೋಟಿಗಳಷ್ಟು ಎನ್.ಪಿ.ಎ. ಮೊತ್ತವನ್ನು ಕಾದಿರಿಸಲಾಗಿದೆ. ಇದರ ಜೊತೆಗೆ ನಾವು ರೂ.10.00 ಕೋಟಿಗಳ ಠೇವಣಿ ಮಾಡಿದ್ದ PMC ಬ್ಯಾಂಕು ಮುಳುಗಿ ತೊಂದರೆಗೆ ಒಳಗಾದ ಕಾರಣ ಅದನ್ನು ಅನುತ್ಪಾದಿತ ಹೂಡಿಕೆಯೆಂದು ಪರಿಗಣಿಸುವಂತೆ ಆರ್.ಬಿ.ಐ. ನಿರ್ದೇಶಿಸಿರುವುದರಿಂದ ಅದಕ್ಕೂ ಸಹ ರೂ.2.40 ಕೋಟಿಗಳನ್ನು ಕಾದಿರಿಸಬೇಕಾಯಿತು ಹಾಗೂ ರಷ್ಯಾ–ಉಕ್ರೇನ್ ಯುದ್ಧಗಳ ಪರಿಣಾಮವು ಹೂಡಿಕೆಗಳ ಮೇಲೂ ಪರಿಣಾಮ ಬೀರಿದೆ. FIMMDA - Fixed Income Money

Market and Derivatives Association of India ಸಂಸ್ಥೆಯು ಸರ್ಕಾರಿ ಭದ್ರತೆಗಳ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸುತ್ತಾರೆ. ಅದರಂತೆ ಸರ್ಕಾರಿ ಭದ್ರತೆಗಳ ಮೇಲಿನ ಸವಕಳಿಗಾಗಿ ರೂ.2.05 ಕೋಟಿಗಳಷ್ಟು ಕಾದಿರಿಸಿದ್ದು, ಈ ಎಲ್ಲಾ ಕಾರಣಗಳಿಂದಾಗಿ ರೂ.5.31 ಕೋಟಿಗಳಷ್ಟು ಅವಕಾಶ ಕಲ್ಪಿಸಿದರ ಜೊತೆಗೆ ರೂ.0.08 ಕೋಟಿಗಳ ಆದಾಯ ತೆರಿಗೆ ಪಾವತಿಸಿದ ನಂತರ ರೂ.0.37 ಕೋಟಿಗಳು ಬ್ಯಾಂಕಿನ ನಿವ್ವಳ ಲಾಭವಾಗಿರುತ್ತದೆ.

ಸದಸ್ಯರು CBS ಸಾಫ್ಟ್‌ವೇರ್ ಬಗ್ಗೆ ಪ್ರಶ್ನಿಸಿದ್ದು, ಬ್ಯಾಂಕಿನಲ್ಲಿ ಈ ಮೊದಲು ಮೆ॥ ಇನ್‌ಫ್ರಾ ಸಾಫ್ಟ್ ರವರ ಒಮಿನಿ ಎಂಟರ್‌ಪ್ರೈಸಸ್ (Omini Enterprises by M/s. Infra Soft) ಸಾಫ್ಟ್‌ವೇರ್ ಅನ್ನು ವಿಜಯನಗರ ಒಂದು ಶಾಖೆಗೆ ಮಾತ್ರ ಸೀಮಿತವಾಗಿ ಬಳಸಿದ್ದು, ಅನಂತರ ಆರ್.ಬಿ.ಐ. ಸಹ ಸಂಸ್ಥೆಯಾದ ಮೆ॥ ಇಫ್ತಾಸ್ ರವರ ಫಿನ್‌ಕ್ರಾಫ್ಟ್ (Fincract by M/s. IFTAS) ಸಾಫ್ಟ್‌ವೇರ್ ಅನ್ನು ಎಲ್ಲಾ ಶಾಖೆಗಳಿಗೆ ಬಳಸುತ್ತಿದ್ದು ಉತ್ತಮವಾಗಿತ್ತು. ಆದರೆ ಸದರಿ ಸಂಸ್ಥೆಯವರೇ ಸಂಸ್ಥೆಯನ್ನು ಮುಚ್ಚಲಾಗುತ್ತಿದ್ದು, ಸೇವೆಗಳನ್ನು ಸ್ಥಗಿತಗೊಳಿಸಲಾಗುತ್ತದೆ. ಆದ್ದರಿಂದ ಬೇರೆ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ಪತ್ರವನ್ನು ನೀಡಿದ ಮೇರೆಗೆ ಬ್ಯಾಂಕು ಆಗಸ್ಟ್ 2022 ರಿಂದ ಮೆ॥ ಸರಸ್ವತ್ ಇನ್‌ಫೋಟೆಕ್ ಪ್ರೈ ಲಿ., ರವರ ಸ್ವಿಫ್ಟ್‌ಕೋರ್ ಸಾಫ್ಟ್‌ವೇರ್ ಅನ್ನು (Swiftcore Software by M/s. Saraswat Infotech Pvt. Ltd.) ಬಳಸಲಾಗುತ್ತಿದೆ. ಮುಂದೆ ಬದಲಾವಣೆ ಮಾಡಬಾರದೆಂಬುದು ನಮ್ಮ ಉದ್ದೇಶ, ಒಂದು ವೇಳೆ ಬದಲಾವಣೆ ಅನಿವಾರ್ಯವಾದರೆ ಪ್ರತಿಷ್ಠಿತ ಮೆ॥ ಇನ್ಫೋಸಿಸ್ ಸಂಸ್ಥೆಯವರ ಸಾಫ್ಟ್‌ವೇರ್ ಆಗಲಿ ಅಥವಾ ಬ್ಯಾಂಕಿಗೆ ಹೊಂದಿಕೆಯಾಗುವ ಬೇರಾವುದೇ ಒಳ್ಳೆಯ ಸಾಫ್ಟ್‌ವೇರ್ ತರುವುದಕ್ಕೆ ಪ್ರಯತ್ನಿಸೋಣವೆಂದರು.

ಸದಸ್ಯರಾದ ಪ್ರೊ. ಸಿ.ಕೆ. ಲಕ್ಷ್ಮೀನಾರಾಯಣ ಗುಪ್ತ ಸದಸ್ಯತ್ವ ಸಂಖ್ಯೆ 11285 ರವರು ಮಾತನಾಡಿ, 52ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳಲ್ಲಿನ ಪುಟ ಸಂಖ್ಯೆ 21 ರಲ್ಲಿ ಓಪನ್ ಮೆಂಬರ್‌ಶಿಪ್ ನೀಡುತ್ತಿದ್ದು, ಸಾಲ ಪಡೆಯುವವರಿಗೆ ಮಾತ್ರ ಸದಸ್ಯತ್ವ ನೀಡುವುದಾಗಿ ತಿಳಿಸಲಾಗಿದೆ. ಓಪನ್ ಮೆಂಬರ್‌ಶಿಪ್ ನೀಡುವುದು ತುಂಬಾ ಡೇಂಜರ್ ಆದ್ದರಿಂದ ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಬೇಕೆಂದು ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಮಾತನಾಡಿ, ಓಪನ್ ಮೆಂಬರ್‌ಶಿಪ್ ನೀಡುತ್ತಿರುವುದಿಲ್ಲ. ಸಾಲ ಪಡೆಯಲು ಅರ್ಹರಿರುವ ಸದಸ್ಯರಿಗೆ ಮಾತ್ರ ಸದಸ್ಯತ್ವ ನೀಡುತ್ತಿರುವುದರಿಂದ ಯಾವುದೇ ತೊಂದರೆಗಳು ಉದ್ಭವಿಸುವುದಿಲ್ಲವೆಂದರು.

2022–2023ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳಲ್ಲಿನ ಎಲ್ಲಾ ವಿಷಯಗಳನ್ನು ಅಂಗೀಕರಿಸಬಹುದೆಂದು ಸದಸ್ಯರಾದ ಶ್ರೀ ವಿಶ್ವನಾಥ್ ವಿ. ಸದಸ್ಯತ್ವ ಸಂಖ್ಯೆ 7195 ರವರು ಒಪ್ಪಿಗೆ ಸೂಚಿಸಿ, ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರು ಅನುಮೋದಿಸಿದ ಮೇರೆಗೆ ಸಭೆಯು 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

**6. 2022–2023ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಓದಿ ಅಂಗೀಕರಿಸುವುದು ಮತ್ತು ಮುಂದಿನ ವರ್ಷದ ಕಾರ್ಯಯೋಜನೆಗೆ ಅನುಮೋದನೆ ನೀಡುವುದು:**

ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ ಕೆ. ಸದಸ್ಯತ್ವ ಸಂಖ್ಯೆ 105293 ರವರು ಮಾತನಾಡಿ, ನಾವು ಯಾವುದೇ ಅರ್ಜಿಗಳನ್ನು ಸಲ್ಲಿಸುವಾಗ ನಮ್ಮ ಇತ್ತೀಚಿನ ಭಾವಚಿತ್ರಗಳನ್ನು ಹಾಕಬೇಕಾಗಿರುವುದು ಕಡ್ಡಾಯವಾಗಿರುತ್ತದೆ.

ಆದರೆ ವಾರ್ಷಿಕ ವರದಿ ಪುಸ್ತಕದ ಮೊದಲ ಪುಟದಲ್ಲಿ ಆಡಳಿತ ಮಂಡಳಿಯವರ ಭಾವಚಿತ್ರಗಳು ಮುದ್ರಿತವಾಗಿದ್ದು, ಅದರಲ್ಲಿ ಹೆಚ್ಚಿನವರ ಭಾವಚಿತ್ರಗಳು ತುಂಬಾ ಹಳೆಯದಾಗಿದೆ. ತಮ್ಮೆಲ್ಲರ ಲೇಟೆಸ್ಟ್ ಫೋಟೋಗಳನ್ನು ಹಾಕುವುದರಿಂದ ಇಂತಹ ಇಳಿ ವಯಸ್ಸಿನಲ್ಲೂ ನಿರ್ದೇಶಕರುಗಳು ತುಂಬಾ ಚೈತನ್ಯ ಪುರುಷರಾಗಿ ಕೆಲಸ ಮಾಡುತ್ತಿರುವುದನ್ನು ಸದಸ್ಯರು ಮಚ್ಚಿಕೊಳ್ಳುತ್ತಾರೆ. ಆದ್ದರಿಂದ ದಯವಿಟ್ಟು ಮುಂದಿನ ವರ್ಷದಿಂದ ಲೇಟೆಸ್ಟ್ ಫೋಟೋಗಳನ್ನು ಹಾಕಬೇಕೆಂದು ತಿಳಿಸಿದರು.

ಸದಸ್ಯರಿಗೆ ಲಘು ಉಪಹಾರದ ವ್ಯವಸ್ಥೆಯನ್ನು ಕಲ್ಪಿಸಿದ್ದು, ಸದರಿ ಹಾಲ್‌ನಲ್ಲಿ ಅವಕಾಶಕ್ಕಿಂತ ಎರಡು ಪಟ್ಟು ಜನರಿದ್ದು, ಒಬ್ಬರು ಬಿಟ್ಟ ಉಸಿರನ್ನು ಮತ್ತೊಬ್ಬರು ಪಡೆಯುತ್ತಿದ್ದಾರೆ. ಈಗಾಗಲೇ "ನಿಫಾ" ಮುಂತಾದ ಹಲವಾರು ವೈರಸ್‌ಗಳು ಹರಡುತ್ತಿರುವುದರಿಂದ ಊಟದ ಹಾಲ್‌ನಲ್ಲಿ ಕೆಲವು ಎಗ್ಸಾಸ್ಟ್ ಫ್ಯಾನ್‌ಗಳನ್ನು ಅಳವಡಿಸುವ ಮೂಲಕ ವಾತಾವಣದಲ್ಲಿ ಒಳ್ಳೆಯ ಉತ್ತಮ ಗಾಳಿ ವ್ಯವಸ್ಥೆಯನ್ನು ಕಲ್ಪಿಸುವಂತೆ ಸರ್ವಸದಸ್ಯರ ಆರೋಗ್ಯದ ದೃಷ್ಟಿಯಿಂದ ಸಲಹೆ ನೀಡಿದರು.

ವಾರ್ಷಿಕ ವರದಿ ಪುಟ ಸಂಖ್ಯೆ 3 ರಲ್ಲಿ ಮಾನ್ಯ ಸದಸ್ಯರು ಗುರುತಿನ ಚೀಟಿ ಪಡೆಯದೆ ಇದ್ದಲ್ಲಿ ಹಾಗೂ ಹಳೆಯ ಗುರುತಿನ ಚೀಟಿ ಹೊಂದಿದ್ದಲ್ಲಿ, ಹೊಸ ಗುರುತಿನ ಚೀಟಿಯನ್ನು ಪಡೆಯಲು ಸೂಚಿಸಿರುತ್ತೀರಿ. ನಾವು ತುಂಬಾ ಹಳೆಯ ಸದಸ್ಯರಾಗಿದ್ದು, ಸದಸ್ಯರಾದಾಗ ಗುರುತಿನ ಚೀಟಿಯನ್ನು ಪಡೆಯಲಾಗಿದ್ದು, ಈಗ ಅದರ ವ್ಯಾಲಿಡಿಟಿ ಮುಗಿದು ಹೋಗುತ್ತದೆಯಾ? ಬ್ಯಾಂಕಿನ ಯಾವ ಸದಸ್ಯರು ಹೊಸ ಗುರುತಿನ ಚೀಟಿಯನ್ನು ಪಡೆಯಬೇಕೆಂಬುದನ್ನು ವಿವರವಾಗಿ ತಿಳಿಸುವಂತೆಯೂ ಹಾಗೂ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಸದಾಗಿ ಪಡೆಯಲು ಅಥವಾ ಹಳೆಯದನ್ನು ಬದಲಾವಣೆ ಮಾಡಿಕೊಳ್ಳಲು ಸದಸ್ಯರಿಗೆ ಇತ್ತೀಚಿನ ಭಾವಚಿತ್ರಗಳ ಕೇಳಿರುತ್ತೀರಿ, ಆದ್ದರಿಂದ ತಾವುಗಳೂ ಸಹ ಲೇಟೆಸ್ಟ್ ಫೋಟೋಗಳನ್ನು ನೀಡಿದ್ದಲ್ಲಿ, ಮುಂದೆ ಯಾರೂ ಸಹ ಈ ಬಗ್ಗೆ ಕಾಮೆಂಟ್ ಮಾಡಲು ಅವಕಾಶವಿರುವುದಿಲ್ಲವೆಂದರು.

ಮಹಾಸಭೆಯಲ್ಲಿ ಬ್ಯಾಂಕಿನ ಆಡಳಿತ ವಿಷಯದಲ್ಲಿ ಯಾವುದಾದರೂ ಚರ್ಚಿಸತಕ್ಕ ವಿಷಯವಿದ್ದರೆ 5 ದಿನಗಳ ಮುಂಚಿತವಾಗಿ ವಿಷಯವನ್ನು ಲಿಖಿತವಾಗಿ ಸಲ್ಲಿಸಲು ಸೂಚಿಸಿರುತ್ತೀರಿ, ಮಹಾಸಭೆಯಲ್ಲಿ ಮಾತನಾಡಬೇಕಾದರವರಿಗೆ ತಾಂತ್ರಿಕವಾಗಿ ಇದರಿಂದ ತೊಂದರೆಯಾಗುತ್ತದೆ ಹಾಗೂ ಇದು ತುಂಬಾ ಹಳೆಯ ಪದ್ದತಿಯಾಗಿರುವುದರಿಂದ ದಯವಿಟ್ಟು ಇದನ್ನು ತೆಗೆಯಬೇಕೆಂಬುದು ಅವರ ವೈಯಕ್ತಿಕ ಸಲಹೆಯೆಂದರು.

ಡಿವಿಡೆಂಡ್ ಘೋಷಿಸಿದ ದಿನಾಂಕದಿಂದ 3 ವರ್ಷದ ಒಳಗಾಗಿ ಪಡೆಯದಿದ್ದರೆ ಆಪದ್ಧನ ನಿಧಿಗೆ ವರ್ಗಾಯಿಸುವುದಾಗಿ ತಿಳಿಸಿರುವಿರಿ, ಹೀಗೆ ವರ್ಗಾಯಿಸುವ ಮೊತ್ತವನ್ನು ನಮೂದಿಸುವುದರ ಜೊತೆಗೆ ಮಹಾಸಭೆಯಲ್ಲಿ ಸಹ ತಿಳಿಸಬೇಕೆಂದು ಹೇಳಿ, 13 ವರ್ಷಗಳಿಂದ ಡಿವಿಡೆಂಡ್ ಪಡೆದಿರುವುದಿಲ್ಲವೆಂದು ತಿಳಿಸಿ, ಖಾತೆ ಹೊಂದಿರುವ ಸದಸ್ಯರಿಗೆ ನಗದಾಗಿ ಡಿವಿಡೆಂಡ್ ಪಡೆಯುವುದು ತೊಂದರೆಯಾಗುವುದರಿಂದ ಸದಸ್ಯರ ಹೆಸರುಗಳಿಗೆ ಡಿ.ಡಿ. ಮಾಡಿ ಅವರ ವಿಳಾಸಗಳಿಗೆ ಕಳಿಸಬೇಕೆಂದು ಸೂಚಿಸಿ, ಅವರ ಆರ್.ಡಿ. ಖಾತೆ ಚುಕ್ತವಾಗದ ಬಗ್ಗೆ ವಿವರಿಸಿದರು.

ಇದಕ್ಕೆ ಸದಸ್ಯರಾದ ಶ್ರೀ ಎನ್.ಕೆ. ಹರೀಶ್, ಶ್ರೀ ಸತ್ಯನಾರಾಯಣ ಕೆ. ರವರು ಪ್ರತಿಕ್ರಿಯಿಸಿ ಮಾತನಾಡಿ, ಸದಸ್ಯರು ಷೇರು ಹಣದ ಮೇಲಿನ ಡಿವಿಡೆಂಡ್ ಪಡೆಯಲು ಮೂರು ವಿಧಾನಗಳನ್ನು ಮುದ್ರಿಸಿ ತಿಳಿಸಿರುತ್ತಾರೆ. ಸದಸ್ಯರು ಅವರ ಅನುಕೂಲಕ್ಕೆ ತಕ್ಕಂತೆ ಪಡೆಯಬಹುದೆಂದರು.

ಸದಸ್ಯರ ಪ್ರಶ್ನೆಗಳಿಗೆ ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ರವರು ಉತ್ತರಿಸುತ್ತಾ, ಶ್ರೀ ಸದಾನಂದಶಾಸ್ತ್ರಿ ಕೆ. ರವರ ಸಲಹೆ–ಸೂಚನೆಗಳನ್ನು ಗಮನಿಸಲಾಗುವುದೆಂದು ತಿಳಿಸಿದರು.

ಸದಸ್ಯರಾದ ಪ್ರೊ. ಸಿ.ಕೆ. ಲಕ್ಷ್ಮೀನಾರಾಯಣ ಗುಪ್ತ ಸದಸ್ಯತ್ವ ಸಂಖ್ಯೆ 11285 ರವರು ಮಾತನಾಡಿ, ವಾರ್ಷಿಕ ವರದಿ ಪುಟ ಸಂಖ್ಯೆ 64 ರಲ್ಲಿ 2021–2022ನೇ ವರ್ಷದಲ್ಲಿ ಎನ್.ಪಿ.ಎ. ಜಾಸ್ತಿಯಾದ ಕಾರಣ ರೂ. 788.59 ಲಕ್ಷಗಳ ನಷ್ಟವಾಗಿದ್ದು, 2022–2023ನೇ ಸಾಲಿಗೆ ಕೇವಲ ರೂ. 37.04 ಲಕ್ಷಗಳ ಲಾಭ ಗಳಿಸಿದ್ದು, ಬ್ಯಾಂಕು ಡಿವಿಡೆಂಡ್ ನೀಡುವ ಬಗ್ಗೆ ಏನೇನು ಕ್ರಮಗಳನ್ನು ಕೈಗೊಂಡಿದೆಯೆಂಬುದನ್ನು ತಿಳಿಸಬೇಕು.

ಎನ್.ಪಿ.ಎ. ಹೆಚ್ಚಾದ ಕಾರಣ ಬ್ಯಾಂಕು ನಷ್ಟ ಹೊಂದಿದ್ದು, ಇದನ್ನು ಒಪ್ಪಿಕೊಳ್ಳೋಣ, ಬೇರೆ ಬ್ಯಾಂಕುಗಳು ಶೇ. 10, ಶೇ. 15 ರಂತೆ ಡಿವಿಡೆಂಡ್ ನೀಡುತ್ತಿದ್ದಾರೆ. ನಮ್ಮ ಬ್ಯಾಂಕಿನಲ್ಲಿ ಯಾವ ರೀತಿ ಡಿವಿಡೆಂಡ್ ನೀಡುತ್ತೀರಾ, ನಷ್ಟವನ್ನು ಸರಿದೂಗಿಸಿ ಲಾಭಗಳಿಸಲು ಕ್ಯಾಬಿನೆಟ್ (ಆಡಳಿತ ಮಂಡಲಿ) ಯಾವ ರೀತಿ ಮುಂದಾಲೋಚನಾ ಕ್ರಮಗಳನ್ನು ಕೈಗೊಳ್ಳಲಾಗಿದೆ? ಕ್ರಿಯಾಸಮಿತಿಗಳ ಮುಂದಿನ ಕಾರ್ಯಯೋಜನೆಗಳೇನು ? ಎಂಬುದನ್ನು ಸಭೆಗೆ ವಿವರಿಸಬೇಕೆಂದರು.

ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಡಾ॥ ಕೆ.ಎಂ. ರಂಗಧಾಮ ಶೆಟ್ಟಿಯವರು ಸುದೀರ್ಘವಾಗಿ ಸೇವೆ ಸಲ್ಲಿಸಿದ್ದು, ಈಗ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಬ್ಯಾಂಕನ್ನು ಉತ್ತಮವಾಗಿ ಮುನ್ನಡೆಸುತ್ತಿದ್ದು, ಇನ್ನೂ ಉತ್ತಮವಾದ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ನೀಡಿ, ಬ್ಯಾಂಕಿನ ಗೋಲ್ಡನ್ ಜ್ಯೂಬಿಲಿಯನ್ನು (ಸುವರ್ಣ ಮಹೋತ್ಸವ) ಯಾವ ರೀತಿ ಮಾಡುತ್ತೀರಾ ? ಎಂದು ಪ್ರಶ್ನಿಸಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು, ಸದಸ್ಯರಾದ ಪ್ರೊ. ಸಿ.ಕೆ. ಲಕ್ಷ್ಮೀನಾರಾಯಣ ಗುಪ್ತ ರವರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಬ್ಯಾಂಕಿನ ಹಿರಿಯ ಸದಸ್ಯರಾದ ಪ್ರೊ. ಸಿ.ಕೆ. ಲಕ್ಷ್ಮೀನಾರಾಯಣ ಗುಪ್ತ ರವರು ನಮ್ಮ ಮೇಲಿಟ್ಟಿರುವ ಭರವಸೆಗಳನ್ನು ಸ್ವಾಗತಿಸುತ್ತೇನೆಂದು ತಿಳಿಸಿ, ಬ್ಯಾಂಕನ್ನು ಉಳಿಸಿ ಬೆಳೆಸಲು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದಾಗಿ ಕೇಳಿದ್ದಾರೆ. ನಮ್ಮ ಆಡಳಿತ ಮಂಡಲಿ ಆಯ್ಕೆಯಾಗಿ ಬಂದ ಕೂಡಲೇ ಕೋವಿಡ್–19 ಆಕ್ರಮಿಸಿ ಬಂದು ಸುಮಾರು 4 ವರ್ಷಗಳಿಂದ ದೇಶ, ಪ್ರಪಂಚದ ಆರ್ಥಿಕತೆಯ ಮೇಲೆ ಎಂತಹ ಗಾಢ ಪರಿಣಾಮ ಬೀರಿದೆಯೆಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಕೋವಿಡ್–19ರ ಪರಿಣಾಮ ಸದಸ್ಯರ ಮೇಲೆ ಯಾವಾಗ ಬೀರಿತೋ ಅದು ಬ್ಯಾಂಕಿನ ಮೇಲೂ ಬೀರಿದೆ, ಇದೇ ಕಾರಣದಿಂದ ಬ್ಯಾಂಕಿನ 3 ಮಹಾಸಭೆಗಳನ್ನು ವರ್ಚುಯೆಲ್ ಮೀಟಿಂಗ್ ಮೂಲಕ ನಡೆಸಲಾಗಿದ್ದು, ಇದು ಬ್ಯಾಂಕಿನ ಸದಸ್ಯರ ಆರೋಗ್ಯ ದೃಷ್ಟಿಯಿಂದ ಒಳ್ಳೆಯದಾಗುವುದರ ಜೊತೆಗೆ ಮಹಾಸಭೆಯ ಖರ್ಚುಗಳು 3 ವರ್ಷಗಳಲ್ಲಿ ಸುಮಾರು 40 ರಿಂದ 45 ಲಕ್ಷಗಳು ಕಡಿಮೆಯಾಯಿತು.

ಯಾವುದೇ ಸದಸ್ಯರು ಹಣವನ್ನು ಹೂಡಿಕೆ ಮಾಡಲು, ವ್ಯವಹರಿಸಲು ಬ್ಯಾಂಕಿನ ಸದೃಢತೆಯನ್ನು ಎನ್.ಪಿ.ಎ. ಮೂಲಕ ಅಳೆಯುವುದರಿಂದ ನಮ್ಮ ಆಡಲಿತ ಮಂಡಲಿಯು ಇತ್ತ ಕಡೆ ಗಮನ ಹರಿಸಿ, **'ಕೇಂದ್ರೀಕೃತ ಸಾಲ ವಸೂಲಾತಿ ತಂಡ (CRT - Centralised Recovery team)'** ವನ್ನು ರಚಿಸಿ, ಅದರ ಮೂಲಕ ಹಗಲು ರಾತ್ರಿಯೆನ್ನದೆ ಸಾಲ ವಸೂಲಾತಿ ಮಾಡಿದ ಪರಿಣಾಮ ನಾವು ಬಂದಾಗ ಇದ್ದ ಹೆಚ್ಚಿನ ಪರ್ಸನಲ್ ಲೋನ್‌ಗಳ ಎನ್.ಪಿ.ಎ. ಮೊತ್ತವು ಈಗ ಕಡಿಮೆಯಾಗಿದ್ದು, ಇದು ಒಂದು ಬ್ಯಾಂಕಿನ

ಅಭಿವೃದ್ಧಿಯ ಚಿಹ್ನೆಯಾಗಿದೆ. ಬ್ಯಾಂಕಿನಲ್ಲಿ ಆಗುತ್ತಿದ್ದ ಅಧಿಕ ಖರ್ಚು ವೆಚ್ಚಗಳನ್ನು ತಗ್ಗಿಸುವ ಸಲುವಾಗಿ ಕಾಚರಕನಹಳ್ಳಿ ಶಾಖೆಯನ್ನು ರೂ. 59,800–00 ಬಾಡಿಗೆ ಕಟ್ಟಡದಿಂದ ರೂ. 35,000–00 ಗಳ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಬ್ಯಾಂಕಿನ ಹಳೇ ಕಲ್ಲು ಕಟ್ಟಡವನ್ನು ಮಾರಾಟ ಮಾಡಿ, ಬ್ಯಾಂಕಿನ ಎರಡು–ಮೂರು ಶಾಖೆಗಳಿಗೆ ಸ್ವಂತ ಕಟ್ಟಡವನ್ನು ಹೊಂದುವುದರ ಮೂಲಕ ಬಾಡಿಗೆ ಖರ್ಚುಗಳನ್ನು ತಗ್ಗಿಸಲು ಉದ್ದೇಶಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ **Risk Based Internal Audit** ಅನ್ನು ಇಡೀ ಕರ್ನಾಟಕದಲ್ಲಿ ಅಳವಡಿಸಿಕೊಂಡಿರುವುದರಲ್ಲಿ ನಮ್ಮ ಬ್ಯಾಂಕು ಪ್ರಥಮವಾಗಿದೆ. ವೆಚ್ಚಗಳನ್ನು ಇನ್ನೆಲ್ಲಿಯಾದರೂ ಉಳಿಸಬಹುದಾ ? ಎಂದು ಆಲೋಚಿಸಿ, ಸಿಬ್ಬಂದಿ ಸೇವಾ ನಿಯಮವನ್ನು ಇಲಾಖೆಯಿಂದ ಅನುಮೋದಿಸಿಕೊಂಡು ತಂದು, ಸಹಕಾರಿ ಬ್ಯಾಂಕುಗಳಲ್ಲಿ ಮೊದಲ ಬಾರಿಗೆ ಬ್ಯಾಂಕಿನ ನೌಕರರ **ಸ್ವಯಂ ಇಚ್ಛಾ ನಿವೃತ್ತಿ (Voluntary Retirement)** ಯೋಜನೆಯನ್ನು ಅಳವಡಿಸಿದ ಮೇರೆಗೆ ಏಳು (7) ಸಿಬ್ಬಂದಿಗಳು ಈ ಯೋಜನೆಯಡಿ ನಿವೃತ್ತಿ ಹೊಂದಿದ ಪರಿಣಾಮ ವಾರ್ಷಿಕ ಸುಮಾರು ರೂ. 50.00 ಲಕ್ಷ ಸಿಬ್ಬಂದಿ ವೆಚ್ಚಗಳು ಕಡಿಮೆಯಾಗುತ್ತಿದೆ. ಮೊದಲು 138 ಸಿಬ್ಬಂದಿಗಳಿದ್ದು ಇಂದಿಗೆ ಕೇವಲ 99 ಸಿಬ್ಬಂದಿಗಳಿಗೆ ಇಳಿಕೆಯಾಗಿದ್ದರೂ ಸಹ ಅವರಿಂದಲೇ ಕಾರ್ಯ ನಿರ್ವಹಣೆ ಮಾಡುತ್ತಿರುವುದೂ ಸಹ ಖರ್ಚುವೆಚ್ಚಗಳನ್ನು ಕಡಿಮೆ ಮಾಡಲು ಇಟ್ಟಿರುವ ಮತ್ತೊಂದು ಹೆಜ್ಜೆಯಾಗಿದೆ.

ಎನ್.ಪಿ.ಎ. ಕಡಿಮೆ ಮಾಡವ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ವಿವರಿಸುತ್ತಾ, ನಮ್ಮ ಆಡಳಿತ ಮಂಡಲಿಯು ಸಾಲ ವಸೂಲಿಗೆ ಯಾವುದೇ ಹಿಂಜರಿಕೆ ತೋರದೆ ಎಲ್ಲಾ ರೀತಿಯ ಕಾನೂನು ಕ್ರಮವನ್ನು ಕೈಗೊಂಡಿದೆ. ಇದರ ಪರಿಣಾಮ ಸುಮಾರು 16 ಸ್ಥಿರಾಸ್ತಿಗಳನ್ನು ಭೌತಿಕವಾಗಿ ಬ್ಯಾಂಕಿನ ವಶಕ್ಕೆ ಪಡೆದು ಸೀಜ್ ಮಾಡಿ ಹರಾಜು ಮಾಡಿದರೆ ಯಾರು ಸಹ ಹರಾಜಿನ ಬಿಡ್‌ನಲ್ಲಿ ಭಾಗವಹಿಸುತ್ತಿಲ್ಲ. ಸ್ಥಿರಾಸ್ತಿ ಮಾಲೀಕರು ಅಯ್ಯೋ ಎಂದು ಬಿಟ್ಟುಹೋಗಿರುವುದನ್ನು ತಾವು ಪಡೆದರೆ ಏನಾದರು ಕೆಟ್ಟಪರಿಣಾಮ ಬೀರುವುದೋ ಎಂದು ಭಾವನೆಯೂ ಇದಕ್ಕೆ ಕಾರಣವಾಗಿರಬಹುದು. ಆದರೂ 3 ಸ್ಥಿರಾಸ್ತಿಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಸಾಲ ಖಾತೆಗಳಿಗೆ ಜಮಾ ಮಾಡಲಾಗಿದೆ.

**'ರೋಗಿ ಬಯಸಿದ್ದೂ ಹಾಲು ಅನ್ನ – ವೈದ್ಯ ಹೇಳಿದ್ದೂ ಹಾಲು ಅನ್ನ'** ಎನ್ನುವಂತೆ ಸಹಕಾರಿ ಬ್ಯಾಂಕುಗಳು ಸುಮಾರು 40 ವರ್ಷಗಳಿಂದ ನಡೆಸಿದ ಹೋರಾಟದ ಒಂದು ಸ್ಕೀಂಗೆ ಕೇಂದ್ರ ಸರ್ಕಾರವು ಅನುಮತಿ ನೀಡಿದೆ. **ಕೇಂದ್ರ ಸಹಕಾರ ಸಚಿವರು, ಹಣಕಾಸು ಸಚಿವರು** ಮತ್ತು **ಆರ್.ಬಿ.ಐ. ಗೌರ್ನರ್** ಅವರುಗಳು ಸಭೆಗಳನ್ನು ನಡೆಸಿದ ನಂತರ ದೇಶದಲ್ಲಿರುವ ಸಹಕಾರಿ ಬ್ಯಾಂಕುಗಳನ್ನು ಸಶಕ್ತ ಮತ್ತು ಸದೃಢಗೊಳಿಸಲು ಆರ್.ಬಿ.ಎ. ಮೂಲಕ **'Compromise Settlements & Technical write-offs' 'ರಾಜಿ ಪರಿಹಾರ ನೀತಿ ಮತ್ತು ತಾಂತ್ರಿಕ ವಜಾ'** ಪಾಲಿಸಿಯನ್ನು ಜಾರಿಗೊಳಿಸಿದೆ. ಅದೇ ರೀತಿ ಆರ್.ಬಿ.ಐ. ನಿರ್ದೇಶನದನ್ವಯ ಬ್ಯಾಂಕಿನಲ್ಲಿ ಎನ್.ಪಿ.ಎ. ಪ್ರಮಾಣವನ್ನು ತಗ್ಗಿಸುವ ಸಲುವಾಗಿ ಮತ್ತು ಬ್ಯಾಂಕಿಗೂ ಯಾವುದೇ ತೊಂದರೆಯಾಗದಂತೆ ಕನಿಷ್ಠ ತ್ಯಾಗದೊಂದಿಗೆ, ಅಸಲಿನ ಜೊತೆಗೆ ಬಡ್ಡಿಯನ್ನು ಪಡೆಯುವ ಮೂಲಕ ಅನುತ್ಪಾದಿತ ಆಸ್ತಿಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಸದರಿ ಪಾಲಿಸಿಯನ್ನು ರಚಿಸಿ, ದಿನಾಂಕ 01.08.2023 ರಿಂದ ಅಳವಡಿಸಿಕೊಳ್ಳಲಾಗಿದ್ದು, ಬ್ಯಾಂಕಿನಲ್ಲಿ ಸುಮಾರು 22 ವರ್ಷಗಳ ಹಿಂದಿನ 2 ಸಾಲ ಖಾತೆಗಳು ಈ ಯೋಜನೆಯಡಿಯಲ್ಲಿ ಚುಕ್ತವಾಗಿದೆ.

ಹೀಗೆ ಹಲವಾರು ಕಾರ್ಯಯೋಜನೆಗಳನ್ನು ಬ್ಯಾಂಕಿನಲ್ಲಿ ಅಳವಡಿಸಿಕೊಳ್ಳಲಾಗಿದ್ದು, ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೇಕಡ 6 ಕ್ಕಿಂತ ಕಡಿಮೆ ಮಾಡುವ ಮೂಲಕ ಆರ್.ಬಿ.ಐ. ವಿಧಿಸಿರುವ ಮೇಲುಸ್ತುವಾರಿ ಕ್ರಮದಿಂದ (SAF-Supervisory Action Framework) ಹೊರಬಂದು ಮುಂದಿನ ವರ್ಷ ಸದಸ್ಯರಿಗೆ

ಖಂಡಿತವಾಗಿ ಡಿವಿಡೆಂಡ್ ನೀಡುತ್ತೇವೆಂಬ ಭರವಸೆಯನ್ನು ಆಡಳಿತ ಮಂಡಲಿಯ ಪರವಾಗಿ ಮಹಾಸಭೆಗೆ ನೀಡಿದರು.

ಬ್ಯಾಂಕಿನ **'ಸುವರ್ಣ ಮಹೋತ್ಸವ'** ವನ್ನು ಆಚರಿಸುವ ಬಗ್ಗೆ ವಿವರಿಸುತ್ತಾ, ಬ್ಯಾಂಕಿನ ಮೇಲೆ ರಿಸರ್ವ್ ಬ್ಯಾಂಕು SAF ವಿಧಿಸಿರುವುದರಿಂದ, ಖರ್ಚು ವೆಚ್ಚಗಳನ್ನು ಮಾಡಲು ಹಲವು ನಿರ್ಭಂದಗಳಿರುತ್ತವೆ. ಬ್ಯಾಂಕಿನ 'ಸುವರ್ಣ ಮಹೋತ್ಸವ'ವನ್ನು ಆಚರಿಸುವ ಸಲುವಾಗಿ ಇಲಾಖೆಯ ಆಡಳಿತಾತ್ಮಕ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಆರ್.ಬಿ.ಐ. ಗೂ ಸಹ ಪತ್ರ ಬರೆಯಲಾಗಿದೆ. ಇಲಾಖೆಯವರು ಮತ್ತೆ ಕೇಳಿರುವ ಕೆಲವು ದಾಖಲೆಗಳನ್ನು ಸಲ್ಲಿಸಬೇಕಾಗಿದ್ದು, ಬ್ಯಾಂಕನ್ನು ಮೊದಲಿಗೆ ಲಾಭದ ಹಾದಿಗೆ ತರಬೇಕಾಗಿದೆ. ಹಿಂದಿನ ಸಾಲಿನಲ್ಲಿ ರೂ. 7.89 ಕೋಟಿಗಳ ನಷ್ಟವಿದ್ದ ಬ್ಯಾಂಕನ್ನು ವರದಿ ಸಾಲಿನಲ್ಲಿ ರೂ. 37.00 ಲಕ್ಷಗಳ ಲಾಭದ ಕಡೆಗೆ ತರಲಾಗಿದ್ದು, ಸದಸ್ಯರಾದ ಪ್ರೊ. ಸಿ.ಕೆ. ಲಕ್ಷ್ಮೀನಾರಾಯಣ ಗುಪ್ತ ರವರ ಆಶಯದಂತೆ ಬ್ಯಾಂಕನ್ನು ಉಳಿಸಿ–ಬೆಳೆಸುವುದರ ಜೊತೆಗೆ ಅತ್ಯುತ್ತಮ ಬ್ಯಾಂಕಾಗಿ ಮಾಡಬೇಕೆಂಬ ಸದುದ್ದೇಶವನ್ನು ಸಹ ನಮ್ಮ ಆಡಳಿತ ಮಂಡಲಿಯು ಹೊಂದಿರುವುದರ ಜೊತೆಗೆ ಯಾವುದೇ ದುಂದುವೆಚ್ಚಗಳನ್ನು ಮಾಡದೆ, ಸದಸ್ಯರಿಗೆ ಡಿವಿಡೆಂಡ್ ನೀಡುವ ಗುರಿಯನ್ನು ಹೊಂದಲಾಗಿದೆ. ನಮ್ಮ ಈ ಆಡಳಿತ ಮಂಡಲಿಯು ಬಂದ ನಂತರ ಸದಸ್ಯರೊಂದಿಗೆ ಮುಕ್ತಭೇಟಿ ಮಾಡುತ್ತಿರುವ ಮೊದಲ ಮಹಾಸಭೆ ಇದಾಗಿದ್ದು, ಸದಸ್ಯರಿಗೆ ಡಿವಿಡೆಂಡ್ ನೀಡಲು ಸಾಧ್ಯವಾಗುತ್ತಿಲ್ಲ. ಆದ ಕಾರಣ ಮಹಾಸಭೆಗೆ ಬಂದು ಹೋಗುವ ಸನ್ಮಾನ್ಯ ಸದಸ್ಯರಿಗೆ ಕನಿಷ್ಠ ರೂ. 200–00 ಗಳ ಸಾರಿಗೆ ಭತ್ಯೆಯನ್ನಾದರೂ ನೀಡಬೇಕೆಂದು ಉದ್ದೇಶಿಸಲಾಗಿದೆ. 2019–2020ನೇ ಸಾಲಿನಲ್ಲಿ ಬ್ಯಾಂಕು ರೂ. 4.08 ಕೋಟಿಗಳ ಲಾಭಗಳಿಸಿದ್ದು, ಕೋವಿಡ್–19ರ ಹಿನ್ನೆಲೆಯಲ್ಲಿ ಡಿವಿಡೆಂಡ್ ನೀಡಬಾರದೆಂದು ಆರ್.ಬಿ.ಐ. ನಿರ್ದೇಶಿಸಿದ ಮೇರೆಗೆ ಸದರಿ ಲಾಭದಲ್ಲಿ ತೆಗೆದಿರಿಸಿದ್ದ ಡಿವಿಡೆಂಡ್ ಮೊತ್ತ ರೂ. 2.73 ಕೋಟಿಗಳನ್ನು ಡಿವಿಡೆಂಡ್ ಸಮತೋಲನ ನಿಧಿಗೆ ವರ್ಗಾವಣೆ ಮಾಡಿ ಸಾಲಿನಾಂತ್ಯಕ್ಕೆ ಸದರಿ ನಿಧಿಯಲ್ಲಿ ಈ ಮೊತ್ತವು ಮುಂದುವರಿದಿದ್ದು, ಇದರಲ್ಲಿ ಭಾಗಶಃ ಮೊತ್ತವನ್ನು ಬಳಸಿಕೊಂಡು, ಸ್ಮರಣ ಸಂಚಿಕೆಯ ಜಾಹೀರಾತಿಗಾಗಿ ಸಂಗ್ರಹಿಸುವ ಹಣದಲ್ಲಿ ಖರ್ಚುಗಳನ್ನು ಕಳೆದು ಉಳಿಯುವ ಹಣದ ಜೊತೆಗೆ ಜ್ಯೂಬಿಲಿ ನಿಧಿಯಲ್ಲಿರುವ ಮೊತ್ತ ರೂ. 79.19 ಲಕ್ಷಗಳನ್ನು ಹೊಂದಿಸಿ, ಅತಿ ಶೀಘ್ರವಾಗಿ ಬ್ಯಾಂಕಿನ 'ಸುವರ್ಣ ಮಹೋತ್ಸವ'ವನ್ನು ಆಚರಿಸಲು ತಯಾರಿಗಳನ್ನು ನಡೆಸಲಾಗುತ್ತಿದೆ. ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಸನ್ಮಾನ್ಯ ಸದಸ್ಯರಿಗೆ ಕಾನೂನಿನ ಇತಿಮಿತಿಯೊಳಗೆ ಉತ್ತಮ ನೆನಪಿನ ಕಾಣಿಕೆಯನ್ನು ನೀಡುವ ಉದ್ದೇಶ ಹೊಂದಲಾಗಿದೆಯೆಂದು ತಿಳಿಸಿದರು.

ಮಾನ್ಯ ಸದಸ್ಯರು ಯಾವುದೇ ಗಾಳಿಮಾತು/ಊಹಾಪೋಹಗಳಿಗೆ ಮನ್ನಣೆ ನೀಡಬಾರದೆಂದು ವಿನಂತಿಸಿ, ಬ್ಯಾಂಕಿನಲ್ಲಿ ಸುಮಾರು ರೂ.200.00 ಕೋಟಿಗಳಷ್ಟು ಸರ್ಪ್ಲಸ್ ಫಂಡ್ ಇದ್ದು, ನಿಮ್ಮೆಲ್ಲರ ಠೇವಣಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಈ ರೀತಿ ಬ್ಯಾಂಕಿಗೆ ಭದ್ರಬುನಾಧಿಯನ್ನು ಹಾಕಿ ಪೋಷಿಸಿ ಬೆಳೆಸಿದ ಅಧ್ಯಕ್ಷರುಗಳಿಗೆ ಎಲ್ಲ ಸದಸ್ಯರ ಪರವಾಗಿ ಮತ್ತು ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

ಸದಸ್ಯರಾದ ಶ್ರೀ ಎನ್.ಕೆ. ಹರೀಶ್ ಸದಸ್ಯತ್ವ ಸಂಖ್ಯೆ 107961 ರವರು ಮಾತನಾಡಿ, ವಾರ್ಷಿಕ ವರದಿಯಲ್ಲಿರುವ ಎಲ್ಲಾ ಅಂಶಗಳನ್ನು ಸಭಾಧ್ಯಕ್ಷರು ತಮ್ಮ ಸ್ವಾಗತ ಭಾಷಣದಲ್ಲಿ ವಿವರಿಸಿರುವುದರಿಂದ, ವಾರ್ಷಿಕ ವರದಿಯನ್ನು ಮತ್ತೆ ಓದುವ ಅವಶ್ಯಕತೆ ಇಲ್ಲವೆಂದು ಭಾವಿಸುತ್ತಾ, ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಬ್ಯಾಂಕು ಸಾಧಿಸಿರುವ ಹಲವಾರು ಪ್ರಗತಿಯ ಬಗ್ಗೆ ವಿವರಿಸಿದ್ದಾರೆ. ಇದು ಬಾಯಿ ಮಾತಿನಲ್ಲಿ ಸಂತೋಷದ ವಿಷಯವಾದರೂ ಸದಸ್ಯರಿಗೆ ಬೇಕಾಗಿರುವ ಅಂಕಿ ಅಂಶಗಳಲ್ಲಿ ಕಾಣುತ್ತಿಲ್ಲ. ಹಲವಾರು ವರ್ಷಗಳಿಂದ ವಾರ್ಷಿಕ ವರದಿಗಳಲ್ಲಿ SAF-Supervisory Action Framework (ಮೇಲುಸ್ತುವಾರಿ ಕ್ರಮ) ಎಂಬ ಪದ

ಮುಂದುವರಿಯುತ್ತಿದೆ. ಆರ್.ಬಿ.ಐ. ಸೆಕ್ಷನ್ 30 ರಡಿಯಲ್ಲಿ ಗ್ರಾಸ್ ಎನ್.ಪಿ.ಎ. ಶೇ.10 ಕ್ಕಿಂತ ಹೆಚ್ಚಿಗೆ ಇರುವ ಬ್ಯಾಂಕುಗಳಿಗೆ SAF ಅನ್ನು ವಿಧಿಸಲಾಗುತ್ತದೆ. ಆರ್.ಬಿ.ಐ. ಬೆಂಗಳೂರು ನಗರದಲ್ಲಿರುವ ಸುಮಾರು 19 ಸಹಕಾರಿ ಬ್ಯಾಂಕುಗಳ ಮೇಲೆ SAF ಅನ್ನು ವಿಧಿಸಿದೆ. ನಂತರ ಬರುವುದು ಸೆಕ್ಷನ್ 35ಎ, ಇದರಡಿಯಲ್ಲಿ ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕು, ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕು ಮುಂತಾದವುಗಳು ಈಗಾಗಲೇ ನರಳಾಡುತ್ತಿವೆ.

ವಾರ್ಷಿಕ ವರದಿ ಪುಟ ಸಂಖ್ಯೆ 9 ರಲ್ಲಿ ನಿವ್ವಳ ಅನುತ್ಪಾದಿತ ಆಸ್ತಿಗಳು (Net NPA) ಶೇ. 19.72 ಇರುವುದು ಆರೋಗ್ಯಕರವಲ್ಲ, ನೆಟ್ ಎನ್.ಪಿ.ಎ. ಶೇ. 19.72 ಇದ್ದರೆ ನನ್ನ ಪ್ರಕಾರ ಗ್ರಾಸ್ ಎನ್.ಪಿ.ಎ. ಶೇ. 30 – ಶೇ. 32 ಇರಬಹುದು. ಸಾಲ ವಸೂಲಾತಿ ಚೆನ್ನಾಗಿ ಮಾಡುತ್ತಿರುವುದು ಸಂತೋಷದ ವಿಷಯವಾದರೂ. ಎನ್.ಪಿ.ಎ. ಹೆಚ್ಚಳ ಒಳ್ಳೆಯದಲ್ಲವೆಂದರು. ಎಲ್ಲಾ ಪಟ್ಟಣ ಸಹಕಾರಿ ಬ್ಯಾಂಕುಗಳು ತಮ್ಮ ಲಾಭದಲ್ಲಿ ಶೇಕಡವಾರು ಭಾಗವನ್ನು ಮಹಾಮಂಡಲಕ್ಕೆ ನೀಡುತ್ತಿದ್ದು, ಈ ಮಹಾಮಂಡಲವು ಯಾವುದೇ ರೀತಿ ಸಹಾಯ ಮಾಡುತ್ತಿಲ್ಲ. ಸಹಕಾರಿ ಬ್ಯಾಂಕುಗಳು ಸೆಕ್ಷನ್ 70 ರಡಿಯಲ್ಲಿ ಸಾಲ ವಸೂಲಿಗಾಗಿ ಕೇಸ್‌ಗಳನ್ನು ಹಾಕಿದರೆ. ಸುಸ್ತಿದಾರರಿಗೆ ವಕೀಲರನ್ನು ನೇಮಿಸಿಕೊಳ್ಳಲು ಅವಕಾಶ ನೀಡಿ, ಕೇಸ್‌ಗಳನ್ನು ಸುಮಾರು 10 ವರ್ಷಗಳವರೆಗೆ ಎಳೆದಾಡಿರುವ ಉದಾಹರಣೆಗಳಿವೆ. ಆದ್ದರಿಂದ ಸಾಲ ವಸೂಲಿಗೆ ರಾಮಬಾಣವಾಗಿರುವ **'ಸರ್ಫೇಸಿ ಆಕ್ಟ್–2002'** ಅಡಿಯಲ್ಲಿ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದರು.

ಹಿಂದಿನ ವರ್ಷ ಕೆಲವು ಶಾಖೆಗಳಿಂದಾಗಿ ಬ್ಯಾಂಕು ರೂ.7.89 ಕೋಟಿಗಳ ನಷ್ಟವನ್ನು ಹೊಂದಿದ್ದು, ಇದಕ್ಕೆ ಯಾರು ಕಾರಣ, ನಮ್ಮ ಬ್ಯಾಂಕು PMC ಬ್ಯಾಂಕಿನಲ್ಲಿ ರೂ.10.00 ಕೋಟಿಗಳನ್ನು ಹೂಡಿಕೆ ಮಾಡಿರುವಂತೆ ಹಲವಾರು ಬ್ಯಾಂಕುಗಳು ಹೂಡಿಕೆ ಮಾಡಿದ್ದು ತೊಂದರೆಗೆ ಸಿಲುಕಿದೆ. ಆದ್ದರಿಂದ ಹೂಡಿಕೆಗಳನ್ನು ಮಾಡುವ ಮುನ್ನ ಪೂರ್ವ ಪರಪರಿಶೀಲಿಸುವ ಸಲುವಾಗಿ ಒಳಸಮಿತಿಯನ್ನು ರಚಿಸುವುದು ಸೂಕ್ತವೆಂದು ತಿಳಿಸಿ, ಆರ್.ಬಿ.ಐ. ನಿರ್ದೇಶನದಂತೆ ಈ ಹೂಡಿಕೆಯ ನಷ್ಟಕ್ಕೆ ನಮ್ಮ ಲಾಭದಲ್ಲಿನ ಹಣವನ್ನು ತೆಗೆದಿರಿಸಿದ ಕಾರಣ ನಷ್ಟವನ್ನು ಹೊಂದಬೇಕಾಯಿತಾದರೂ, ವರದಿ ಸಾಲಿನಲ್ಲಿ ರೂ.37.00 ಲಕ್ಷಗಳ ಲಾಭ ಮಾಡಿರುವುದಕ್ಕಾಗಿ ಆಡಳಿತ ಮಂಡಲಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

1970, 1980 ಮತ್ತು 1990ರ ದಶಕದಲ್ಲಿ ದೇಶದ ಆರ್ಥಿಕತೆಯಲ್ಲಿ ಸಹಕಾರಿ ಕ್ಷೇತ್ರದ ಪಾಲು ಶೇ.35ರಷ್ಟು ಹೊಂದಲಾಗಿತ್ತಾದರೂ, ಇಂದು ಸಹಕಾರಿ ಬ್ಯಾಂಕು ಎಂದರೆ ಹೆದರುವ ಪರಿಸ್ಥಿತಿ ಬಂದಿದೆ. ಇದು ವೇದಿಕೆಯಲ್ಲಿ ಆಸೀನರಾಗಿರುವ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ.ಸಿ. ಫಾಲನೇತ್ರಪ್ಪ ರವರಿಗೂ ತಿಳಿದಿದೆ. ಕೇಂದ್ರ ಸರ್ಕಾರವು, ಸದಸ್ಯರ ಠೇವಣಿಗಳಿಗೆ DICGC ಸಂಸ್ಥೆಯ ಮೂಲಕ ರೂ.1.00 ಲಕ್ಷಗಳಿಗೆ ಇದ್ದ ವಿಮಾ ಮಿತಿಯನ್ನು ರೂ.5.00 ಲಕ್ಷಗಳಿಗೆ ಹೆಚ್ಚಿಸಿರುವುದರ ಜೊತೆಗೆ ಈ ಮೊದಲು ಲಿಕ್ವಿಡಿಟಿ ಆದ ಬ್ಯಾಂಕುಗಳ ಠೇವಣಿದಾರರಿಗೆ ಇದ್ದ ಈ ವಿಮಾ ಸೌಲಭ್ಯವನ್ನು ಮಾರ್ಪಾಡು ಮಾಡಿ, ಆರ್.ಬಿ.ಐ. ನಿಂದ ಸೆಕ್ಷನ್ 35ಎ ಅಡಿಯಲ್ಲಿ ಕ್ರಮ ಕೈಗೊಂಡ ಬ್ಯಾಂಕುಗಳ ಠೇವಣಿದಾರರಿಗೂ ಅನ್ವಯಿಸುವಂತೆ ಮಾಡಿರುವುದು ಎಲ್ಲಾ ಠೇವಣಿದಾರರಿಗೂ ತುಂಬಾ ಸಂತೋಷದ ವಿಷಯವಾಗಿದೆಯೆಂದರು.

ವಾರ್ಷಿಕ ವರದಿ ಪುಟ ಸಂಖ್ಯೆ 19ರಲ್ಲಿ "Compromise Settlements & Technical write-offs" ಪಾಲಿಸಿಯ ಬಗ್ಗೆ ತಿಳಿಸಿದ್ದು, ಇದು ಯಾವುದೇ ಹೊಸ ಪಾಲಿಸಿಯಲ್ಲ, ಹಿಂದೆ ಆರ್.ಬಿ.ಐ. ರಾಷ್ಟ್ರೀಕೃತ ಬ್ಯಾಂಕುಗಳಿಗಿರುವಂತೆ ಸಹಕಾರಿ ಬ್ಯಾಂಕುಗಳಿಗೂ ಸಹ OTS-One time Settlement ಯೋಜನೆಯನ್ನು

ಜಾರಿಗೊಳಿಸಲಾಗಿತ್ತೆಂದು ಹೇಳಿ, ಎನ್.ಪಿ.ಎ. ವರ್ಗೀಕರಣದ ಹಂತಗಳಾದ Sub-Standard Assets, Doubtful Assets ಗಳಲ್ಲಿ D-1, D-2, D-3 ಹಾಗೂ Loss Assets ಗಳ ಬಗ್ಗೆ ಸಭೆಗೆ ವಿವರಿಸಿದರು. OTSನ ಮುಂದುವರಿದ ಭಾಗವಾಗಿ ಈಗ "Compromise Settlements & Technical write-offs" ಜಾರಿಗೆ ಬಂದಿದೆ. ನಮ್ಮ ಬ್ಯಾಂಕು ಸಹ ಸದರಿ ಪಾಲಿಸಿಯನ್ನು ರಚಿಸಿ, ಅಳವಡಿಸಿಕೊಂಡಿದ್ದು, ಬ್ಯಾಂಕಿನಲ್ಲಿ "Acceptance of Deposits–Lending of Money" ಮೂಲಕ ವ್ಯವಹರಿಸಿ, ಸಾಲಗಾರರು ಪಾವತಿಸುವ ಬಡ್ಡಿ ನಮ್ಮ ವರಮಾನವಾಗುವುದರಿಂದ ಆಡಳಿತ ಮಂಡಲಿಯು ಇದರ ಬಗ್ಗೆ ಎಚ್ಚರಿಕೆಯ ಹೆಜ್ಜೆಯನ್ನು ಇರಿಸಬೇಕಾಗಿದ್ದು, ನಿರ್ದೇಶಕ ಮಂಡಲಿಯಲ್ಲಿ ಬ್ಯಾಂಕಿಂಗ್ ಅನುಭವ ಹೊಂದಿರುವ ಶ್ರೀ ಎಸ್.ಎ. ನಾಗಭೂಷಣ್ ಇದ್ದಾರೆ. ಸಲಹೆಗಾರರಾಗಿ ಆರ್.ಬಿ.ಐ. ನಿವೃತ್ತ ಅಧಿಕಾರಿ ಶ್ರೀ ಚೌಧರಿ ಇದ್ದಾರೆ. ಯೋಜನೆಯು ಯಾವುದೇ ರೀತಿ ದುರುಪಯೋಗವಾಗದಂತೆ ಅನುಭವಿ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡುವುದು ಸೂಕ್ತವಾಗಿದೆ. ಕೇವಲ ಅಸಲಿನ ಮೊತ್ತಕ್ಕೆ ಸಾಲ ಖಾತೆಗಳನ್ನು ಚುಕ್ತಮಾಡದೆ ಕನಿಷ್ಟ ಶೇ.5 ರಷ್ಟು ಬಡ್ಡಿಯನ್ನು ವಸೂಲಿ ಮಾಡಲೇಬೇಕೆಂದು ಸಲಹೆ ನೀಡಿದರು.

RBI – ಒಂದು ದೊಡ್ಡ ಆಸ್ಪತ್ರೆ ಇದ್ದಂತೆ, NPA–ಸಹಕಾರಿ ಬ್ಯಾಂಕುಗಳಿಗೆ ಹೃದಯದ ಬೇನೆ ಇದ್ದಂತೆ ಹಾಗೂ SAF–ಐ.ಸಿ.ಯು ವಾರ್ಡ್ ಇದ್ದಂತೆ. ನಮ್ಮ ಬ್ಯಾಂಕಿನ ಮೇಲೆ SAF ಇರುವುದರಿಂದ ನಾವು ಐ.ಸಿ.ಯು ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇವೆ. ಅಲ್ಲಿಂದ ಸ್ಪೆಷಲ್ ವಾರ್ಡ್‌ಗೆ, ನಂತರ ಜನರಲ್ ವಾರ್ಡ್‌ಗೆ ಮುಂದೆ ಗುಣಮುಖರಾಗಿ ಮನೆಗೆ ಮರಳಬೇಕು. ಐ.ಸಿ.ಯು ವಾರ್ಡ್‌ನಿಂದ ವೆಂಟಿಲೇಟರ್‌ಗೆ ಹೋಗುವಂತಾಗಬಾರದೆಂದು ಸೂಕ್ಷ್ಮವಾಗಿ ಎನ್.ಪಿ.ಎ. ಬಗ್ಗೆ ಉದಾಹರಣೆಯನ್ನು ನೀಡುತ್ತಾ, ವರದಿಯಲ್ಲಿ 4–5 ಕಡೆ SAF ಇರುವುದರಿಂದ ಲಾಭಾಂಶವನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಆರ್.ಬಿ.ಐ. ಸುಮಾರು 50–60 ವರ್ಷಗಳ ಇತಿಹಾಸವಿರುವ ಬ್ಯಾಂಕುಗಳ ಮೇಲೂ SAF ಹೇರಿರುವುದರಿಂದ ಡಿವಿಡೆಂಡ್ ನೀಡಲು ಸಾಧ್ಯರಾಗಿರುವುದಿಲ್ಲ. ದಯವಿಟ್ಟು ಆಡಳಿತಾತ್ಮಕ ವೆಚ್ಚಗಳನ್ನು ಕಡಿಮೆ ಮಾಡಬೇಕೆಂದು ತಿಳಿಸುತ್ತಾ, ವರದಿಯ ಪುಟ ಸಂಖ್ಯೆ 21 ರಲ್ಲಿರುವಂತೆ ಸುಮಾರು 6 ಶಾಖೆಗಳು ನಷ್ಟದಲ್ಲಿರುವುದನ್ನು ಉಲ್ಲೇಖಿಸಿ ಮಾತನಾಡುತ್ತಾ, ನಾಗರಭಾವಿ ಶಾಖೆಯಲ್ಲಿ ಯಾವಾಗ ಭೇಟಿ ನೀಡಿದರೂ ಇಬ್ಬರು ಅಥವಾ ಮೂರು ಗ್ರಾಹಕರಿರುತ್ತಾರೆ. ಆದ್ದರಿಂದ ಸದರಿ ಶಾಖೆಯನ್ನು ವಿಜಯನಗರ ಶಾಖೆಗೆ ವಿಲೀನಗೊಳಿಸುವುದು ಸೂಕ್ತವೆಂದು ವೈಯಕ್ತಿಕ ಸಲಹೆ ನೀಡಿ, ಆಡಳಿತ ಮಂಡಲಿಯು ಪರಿಶೀಲಿಸುವಂತೆ ಕೋರಿದರು.

ಸದಸ್ಯರಾದ ಶ್ರೀ ಸದಾನಂದ ಶಾಸ್ತ್ರಿ ಕೆ. ಸದಸ್ಯತ್ವ ಸಂಖ್ಯೆ 105293 ರವರು ಮಾತನಾಡುತ್ತಾ, ಸಭೆಯಲ್ಲಿ ಉಪಾಧ್ಯಕ್ಷರು ಮಾತನಾಡುತ್ತಾ, ಹಲವು ಸ್ಥಿರಾಸ್ತಿಗಳನ್ನು ಮಾರಾಟಕ್ಕೆ ಇಟ್ಟಿದ್ದು, ಕೇವಲ 3 ಸ್ಥಿರಾಸ್ತಿಗಳು ಮಾರಾಟವಾಗಿರುವುದಾಗಿ ತಿಳಿಸಿದ್ದಾರೆ. ಯಾವುದೇ ಬ್ಯಾಂಕಿನಲ್ಲೂ ಹರಾಜು ಮಾಡುವ ಸ್ಥಿರಾಸ್ತಿಗಳನ್ನು ಖರೀದಿಸಲು ಯಾರೂ ಸಹ ಮುಂದೆ ಬರುವುದಿಲ್ಲ. ಕಾರಣ, ಅವರು ಮಾಡಿದ ಪಾಪ ನಮಗೇಕೆ ಎಂಬ ಭಾವನೆ ತಲೆಯಲ್ಲಿ ಹೊಕ್ಕಿರುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು ಹರಾಜು ನಡೆಸುವಂತೆಯೂ, ಹಾಗೂ ವೇದಿಕೆಯಲ್ಲಿ ಹೇಳುವ ಯಾವುದೇ ಘೋಷಣೆಗಳು ಘೋಷಣೆಗಳಾಗುವುದಿಲ್ಲ. ಬದಲಿಗೆ ಪುಸ್ತಕದಲ್ಲಿ ದಾಖಲಿಸಬೇಕೆಂದು ಸಲಹೆ ನೀಡಿದರು.

ವಾರ್ಷಿಕ ವರದಿ ಪುಟ ಸಂಖ್ಯೆ 9 ರಲ್ಲಿರುವ ಅಂಕಿ ಅಂಶಗಳನ್ನು ಗಮನಿಸಿದಾಗ ಠೇವಣಿಗಳು, ಸಾಲ ಮುಂಗಡಗಳು, ದುಡಿಯುವ ಬಂಡವಾಳ ಮತ್ತು ಒಟ್ಟು ವ್ಯವಹಾರಗಳು ಕಡಿಮೆಯಾಗಿರುತ್ತದೆ ಆದರೆ ನಿರ್ವಹಣಾ ಲಾಭದ ಹೆಚ್ಚಳ ಮತ್ತು ರೂ. 7.89 ಕೋಟಿಗಳ ನಷ್ಟದಿಂದ ರೂ. 37.00 ಲಕ್ಷಗಳ ಲಾಭದೆಡೆಗೆ ತಲುಪಿರುವುದು ಸಮರ್ಥನೀಯ ವಿಷಯವಾಗಿದೆ. ಒಂದು ಬ್ಯಾಂಕಿನ ಶಾಪ ಆದ್ರೆ –

ಇನ್ನೊಂದು ಬ್ಯಾಂಕಿನ ವರದಾನ ಎಂಬುದನ್ನು ಅರಿತು ಹತ್ತಿರದಲ್ಲಿ ತೊಂದರೆಗೆ ಒಳಗಾದ ಎರಡು ಬ್ಯಾಂಕಿನ ಠೇವಣಿದಾರರನ್ನು ಭೇಟಿಮಾಡಿ, ನಮ್ಮ ಬ್ಯಾಂಕಿನಲ್ಲಿ ಠೇವಣಿ ಮಾಡಿಸುವಂತೆ ಕ್ರಮ ಕೈಗೊಂಡಿದ್ದರೆ ಠೇವಣಿಗಳು ಕುಸಿಯುತ್ತಿರಲಿಲ್ಲ, ಆಪದ್ಧನದ ಬಗ್ಗೆ ತಿಳಿಸಿದ್ದೀರಿ, ಅದರಿಂದ ಬ್ಯಾಂಕಿನ ಸದೃಢತೆಯನ್ನು ಕಾಣಬಹುದೇ ಹೊರತು ಅದನ್ನು ಯಾರು ಮುಟ್ಟುವಂತಿಲ್ಲ. DICGC ವಿಮಾ ಸಂಸ್ಥೆಗೆ ಪಾವತಿ ಬಗ್ಗೆ ಪುಟ 13 ರಲ್ಲಿ ವಿವರಿಸಿದ್ದು, ರೂ. 28.96 ಲಕ್ಷಗಳನ್ನು ಪಾವತಿಸಿರುವುದಾಗಿ ತಿಳಿಸಿದ್ದೀರಿ. DICGC ವಿಮಾ ಸಂಸ್ಥೆಯಲ್ಲಿ ಇರುವ ಒಳ್ಳೆಯ ದಾರಿಯಷ್ಟೇ ಕಠಿಣ ಬೇಲಿಯೂ ಇರುತ್ತದೆ. ಸದರಿ ವಿಮಾ ಸಂಸ್ಥೆಗೆ ಪಾವತಿಸಬೇಕಾದ ಪ್ರೀಮಿಯಂ ಮೊತ್ತದಲ್ಲಿ ಒಂದು ರೂಪಾಯಿ ವ್ಯತ್ಯಾಸವಿದ್ದರೂ ಅವರು ಠೇವಣಿಗಳನ್ನು ಮರಳಿಸುವುದಿಲ್ಲ, ಇದರಿಂದ ಇಡೀ ಠೇವಣಿದಾರರ ಸಮೂಹಕ್ಕೆ ತೊಂದರೆಯಾಗುವುದರಿಂದ ಆಡಳಿತ ಮಂಡಲಿಯು ಈ ಬಗ್ಗೆ ತುಂಬಾ ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು. ಪುಟ 21 ರಲ್ಲಿ ಶಾಖೆಗಳು ನಷ್ಟದಲ್ಲಿರುವುದರಿಂದ ಸದಸ್ಯರ ಸಲಹೆಯಂತೆ ಶಾಖೆಗಳನ್ನು ವಿಲೀನಗೊಳಿಸುವುದರಿಂದ ಖರ್ಚುಗಳು ಕಡಿಮೆಯಾಗಿ ಲಾಭಗಳಿಸಬಹುದು. ಯಾರದೇ ಪ್ರಚೋದನೆಗಳಿಗೆ ಒಳಗಾಗಿ ಶಾಖೆಗಳನ್ನು ತೆರೆಯಬಾರದೆಂದು ಕಳಕಳಿಯ ಮನವಿ ಮಾಡಿದರು. ಪುಟ 28 ರಲ್ಲಿ ಮಂಡಲಿ ಸದಸ್ಯರಿಗೆ ಸಂಭಾವನೆ ಎಂದಿರುವುದನ್ನು ನಿರ್ದೇಶಕರು ಮತ್ತು ಮಂಡಲಿ ಸದಸ್ಯರಿಗೆ ಸಂಭಾವನೆ ಎಂದು ಮಾರ್ಪಾಡುಗೊಳಿಸುವುದರ ಜೊತೆಗೆ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪಟ್ಟಿಯನ್ನು ನೀಡಿರುವಂತೆ ಬ್ಯಾಂಕಿನ Chronic defaulters / wilful defaulters ಪಟ್ಟಿಯನ್ನು ಸಹ ಹಾಕಿದರೆ ಅವರಿಗೆ ಅವಮಾನವಾಗುತ್ತದೆಂಬ ಅಂಜಿಕೆಯಿಂದಲಾದರೂ ಸಾಲಗಳನ್ನು ಕಟ್ಟುವುದರಿಂದ ಸಾಲ ವಸೂಲಾಗುತ್ತದೆಂದು ಸಲಹೆ ನೀಡಿ, ಗ್ರಾಹಕ ಸೇವೆ ಸರಿಯಾಗಿದ್ದರೆ ಮಾತ್ರ ಗ್ರಾಹಕರು ಹುಡುಕಿಕೊಂಡು ಬರುತ್ತಾರೆ. ಮಹಾರಾಷ್ಟ್ರದಲ್ಲಿ ಸರಳತೆ ನೀಡಿದ ಪರಿಣಾಮದಿಂದ ಸುಮಾರು 257 ಸಹಕಾರಿ ಬ್ಯಾಂಕುಗಳು ಮುಚ್ಚಲಾಗಿದೆ. ಬ್ಯಾಂಕಿನಲ್ಲಿ Unclaimed deposits ಎಷ್ಟು ಇಡುತ್ತೀರಾ ಅಷ್ಟೂ ಡೇಂಜರಸ್ ಆಗಿರುವುದರಿಂದ ಶೀಘ್ರವಾಗಿ ಅವುಗಳನ್ನು ಕ್ಲಿಯರ್ ಮಾಡಬೇಕೆಂದು ಅವರ ಮೆಚ್ಯುರಿಟಿ ಆಗಿರುವ ಆರ್.ಡಿ. ಖಾತೆಯ ಉದಾಹರಣೆ ನೀಡಿದರು.

ಸದಸ್ಯರಾದ ಶ್ರೀ ಸಿ.ಎಲ್. ರಾಮಸಂಜೀವ ಸದಸ್ಯತ್ವ ಸಂಖ್ಯೆ 105427 ರವರು ಮಾತನಾಡಿ, ಮಹಾಸಭೆಯಲ್ಲಿ ಎಲ್ಲರೂ ವಿಷಯಗಳನ್ನು ತಿಳಿದುಕೊಳ್ಳಲು ಮೂಲ ಫೌಂಡೇಷನ್ ಅಂದರೆ ಅದು ವಿದ್ಯೆ, ಬ್ಯಾಂಕಿನಲ್ಲಿ ಸಿಬ್ಬಂದಿ ವರ್ಗದವರಿಗೆ ಈಗಿನ ಟೆಕ್ನಿಕಲ್ ಲಾಂಗ್ವೇಜ್ / ಟೆಕ್ನಿಕಲ್ ಎಜುಕೇಷನ್ ನೀಡಿದರೆ ಮಾತ್ರ ಸಂಸ್ಥೆಯನ್ನು ಸುಗಮವಾಗಿ ಮುನ್ನಡೆಸಬಹುದು. ಶೀಘ್ರವಾಗಿ ಸಹಕಾರಿ ಬ್ಯಾಂಕುಗಳು ಟೇಕ್ ಓವರ್ ಆಗುವ ಸಂಭವವಿದ್ದು, ನಾವು ಬೇರೆಯವರ ಹತ್ತಿರ ಹೋಗುವ ಬದಲು ಅವರೇ ನಮ್ಮ ಬಳಿಗೆ ಬರುವಂತೆ ಅಗತ್ಯವಿರುವ ಎಲ್ಲಾ ಸವಲತ್ತುಗಳನ್ನು ಸಿದ್ದಪಡಿಸಿಕೊಂಡಿರಬೇಕೆಂದು ವ್ಯಕ್ತಿಗತವಾಗಿ ಮನವಿ ಮಾಡಿದರು.

ಸದಸ್ಯರ ಪ್ರಶ್ನೆಗಳಿಗೆ ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ರವರು ಉತ್ತರಿಸುತ್ತಾ, ಸದಸ್ಯರಾದ ಶ್ರೀ ಎನ್.ಕೆ. ಹರೀಶ್ ರವರು ಬ್ಯಾಂಕಿಂಗ್ ಸಂಬಂಧಿಸಿದ ಹಲವಾರು ಉತ್ತಮವಾದ ಅಂಶಗಳನ್ನು ಸಭೆಯಲ್ಲಿ ವಿವರಿಸಿರುವುದು ಸ್ವಾಗತಾರ್ಹ. ಅವುಗಳಲ್ಲಿ ಪ್ರಮುಖವಾದ ಕೆಲವು ಅಂಶಗಳ ಬಗ್ಗೆ ಸಭೆಗೆ ವಿವರಿಸುತ್ತಾ, ಸೆಕ್ಷನ್ – 35 ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ ಬ್ಯಾಂಕಿನ ಬಗ್ಗೆ ತಿಳಿಸಿದರೆ, ಸೆಕ್ಷನ್ – 35ಎ AID-All Inclusive Directives ಬಗ್ಗೆ ತಿಳಿಸುತ್ತದೆ. ಬ್ಯಾಂಕಿನ ನೆಟ್ ಎನ್.ಪಿ.ಎ. ಶೇ. 19.72 ಇದ್ದು, ವಾರ್ಷಿಕ ವರದಿಯ ಪುಟ ಸಂಖ್ಯೆ 18 ರಲ್ಲಿ ಗ್ರಾಸ್ ಎನ್.ಪಿ.ಎ. ಶೇ. 34.17 ಎಂದು ನೀಡಲಾಗಿದೆ. ಹಿಂದಿನ ವರ್ಷ ನೆಟ್ ಎನ್.ಪಿ.ಎ. ಶೇ. 20.24 ಇದ್ದು, ಶೇ. 19.72 ಕ್ಕೆ ಇಳಿಸಲಾಗಿದೆ.

ಸಹಕಾರಿ ಬ್ಯಾಂಕುಗಳು, ಮಹಾಮಂಡಳದಲ್ಲಿ ಸೆಕ್ಷನ್ 70 / ನಿಯಮ 441 ರಡಿಯಲ್ಲಿ ಸಾಲ ವಸೂಲಿಗಾಗಿ ಕೇಸ್‌ಗಳನ್ನು ದಾಖಲಿಸಿರುತ್ತವೆ. ಇದಕ್ಕೆ ಸುಮಾರು ಶೇ. 1.00 ರಂತೆ ಫೀ ಸಹ ಪಾವತಿಸಿರುತ್ತೇವೆ. ಅಲ್ಲಿ ನಮಗೆ ರಿಲೀಫ್ (ಪರಿಹಾರ) ನೀಡಬೇಕು. ಆದರೆ ನಾವು 2013 ರಲ್ಲಿ ದಾವೆ ಹೂಡಿದ್ದು 10 ವರ್ಷಗಳಾದರೂ ಇನ್ನೂ ಅವಾರ್ಡ್ ನೀಡಿರುವುದಿಲ್ಲ. ಸಾಲಗಾರರು ಹಲವು ನ್ಯಾಯಾಲಯಗಳಿಗೆ ಹೋದ ಕಾರಣ ಇನ್ನೂ ತೀರ್ಮಾನವಾಗಿಲ್ಲ. ವಕೀಲರು ಅನಾವಶ್ಯಕವಾಗಿ ಮುಂದೂಡಿ, ಹೆಚ್ಚಿನ ಕಾಲಾವಕಾಶ ಪಡೆದು ದಾವೆಗಳನ್ನು ಮುನ್ನಡೆಸುವುದರಿಂದ, ಸದಸ್ಯರು ಹೇಳಿದಂತೆ ಸರ್ಫೇಸಿ ಆಕ್ಟ್ ಬ್ಯಾಂಕುಗಳಿಗೆ ರಾಮಬಾಣವಿದ್ದಂತೆ. ಕಳೆದ ವರ್ಷ ನಾವು **'ಸರ್ಫೇಸಿ ಆಕ್ಟ್-2002'** ಅಡಿಯಲ್ಲಿ 48 ಸ್ಥಿರಾಸ್ತಿಗಳನ್ನು ಬಹಿರಂಗ ಹರಾಜು ನಡೆಸಿದ್ದೆವು, 16 ಸ್ಥಿರಾಸ್ತಿಗಳನ್ನು ಬ್ಯಾಂಕು ಭೌತಿಕವಾಗಿ ವಶಕ್ಕೆ ಪಡೆದು ಹರಾಜು ನಡೆಸಿದ್ದರೂ ಹರಾಜಿನಲ್ಲಿ ಬಿಡ್ಡರ್‌ಗಳು ಭಾಗವಹಿಸುತ್ತಿಲ್ಲ. ಅವರದ್ದು ಅರ್ಧಬೆಲೆಗೆ ಪಡೆಯುವ ಮನೋಭಿಲಾಷೆ, ಆದರೆ ಬ್ಯಾಂಕಿಗೆ ಕನಿಷ್ಠ 80 ಪರ್ಸೆಂಟ್ ಬಂದರೆ ಮಾರಾಟ ಮಾಡಿ, ಸಾಲ ಖಾತೆಯನ್ನು ಚುಕ್ತ ಮಾಡುವುದು ಬ್ಯಾಂಕಿನ ಮುಖ್ಯ ಉದ್ದೇಶವಾಗಿದ್ದು, 48 ಸ್ಥಿರಾಸ್ತಿಗಳ ಹರಾಜಿನಲ್ಲಿ ಕೇವಲ 3 ಸ್ಥಿರಾಸ್ತಿಗಳನ್ನು ಮಾತ್ರ ಮಾರಾಟ ಮಾಡಲು ಸಾಧ್ಯವಾಗಿದೆ. 40 ವರ್ಷಗಳ ನಿರಂತರ ಹೋರಾಟದ ನಂತರ ಕೇಂದ್ರ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕುಗಳಿಗೆ ನೀಡಿರುವಂತೆ ನಮಗೂ ಸಹ Compromise Settlement ಗೆ ಅಧಿಕಾರ ನೀಡಿದೆ. ಹಿಂದೆ OTS ಅನ್ನು ಕೆ.ಸಿ.ಎಸ್. ಆಕ್ಟ್ 1959 ಸೆಕ್ಷನ್ 27ಎನ್(6) ಅಡಿಯಲ್ಲಿ ಮಹಾಸಭೆಯಲ್ಲಿ ಮಂಡಿಸಿ ತಮ್ಮ ಅನುಮತಿ ಪಡೆದು ಅನಂತರ ರಿಜಿಸ್ಟ್ರಾರ್ ರವರಿಗೆ ಕಳಿಸಿ, ಅವರಿಂದ ಅನುಮತಿ ಪಡೆದು ಮಾಡಲಾಗುತ್ತಿತ್ತು. ರಿಜಿಸ್ಟ್ರಾರ್ ರವರಿಗೆ ರೂ. 20.00 ಲಕ್ಷದವರೆಗೆ ಮಾತ್ರ ಅಧಿಕಾರವಿದ್ದು, ಇನ್ನು ಹೆಚ್ಚಿನ ಮೊತ್ತವಿದ್ದರೆ ಸೆಕ್ರೇಟ್ರಿಯೆಟ್‌ಗೆ ಕಳಿಸಿ ಅನುಮತಿ ಪಡೆಯಬೇಕಾಗಿತ್ತು. ಇದು ಹೆಚ್ಚಿನ ಸಮಯವಾಗುತ್ತಿದ್ದರಿಂದ ನಾವು ಹೋಗುತ್ತಿರಲಿಲ್ಲ. ನಮ್ಮನ್ನು ಬ್ಯಾಂಕ್ ಎಂದು ಪರಿಗಣಿಸಿದ್ದಾರೆ. ಸರ್ಫೇಸಿ ಆಕ್ಟ್ ನಮಗೂ ಅನ್ವಯಿಸುತ್ತಿರುವ ಬಗ್ಗೆ National Fedration, State Federation ಗಳಿಗೆ ನಿರಂತವಾಗಿ ಮನವಿ ಸಲ್ಲಿಸಿದ ಮೇರೆಗೆ ಕೇಂದ್ರ ಸರ್ಕಾರವು ಪಾರ್ಲಿಮೆಂಟ್‌ನಲ್ಲಿ B.R. Act 1949 read with U/s. 56 ಅಡಿಯಲ್ಲಿ ದೇಶದ ಎಲ್ಲಾ ಬ್ಯಾಂಕುಗಳಿಗೂ "Compromise Settlements & Technical write offs" ಪಾಲಿಸಿಯನ್ನು ಹಣಕಾಸಿನ ಪರಿಸ್ಥಿತಿಗಳಿಗನುಗುಣವಾಗಿ ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದಾರೆ. ಅದರಂತೆ ನಮ್ಮ ಬ್ಯಾಂಕಿನಲ್ಲೂ ದಿನಾಂಕ 01.08.2023 ರಿಂದ ಅಳವಡಿಸಿಕೊಳ್ಳಲಾಗಿದೆ. ಶ್ರೀ ಎನ್.ಕೆ. ಹರೀಶ್ ರವರು ತಿಳಿಸಿರುವಂತೆ ಮನಬಂದಂತೆ ಬಳಸಲು ಸಾಧ್ಯವಿಲ್ಲ. ಬ್ಯಾಂಕಿನ ಹಿತದೃಷ್ಟಿಯಿಂದ ಕನಿಷ್ಟ ತ್ಯಾಗದೊಂದಿಗೆ, **ಕಾಸ್ಟ್ ಆಫ್ ಫಂಡ್** ಲೆಕ್ಕಾಚಾರ ಮಾಡಿ ಮುನ್ನಡೆಯುತ್ತೇವೆ. ಒಂದೊಂದು ಸಾಲ ಖಾತೆಗಳ ಹಿನ್ನಲೆ ಒಂದೊಂದು ತರಹ ಇದ್ದು, ಆ ಖಾತೆಗೆ ತಕ್ಕಂತೆ ಕ್ರಮಗಳನ್ನು ನಿರ್ಧರಿಸಿ, ಬ್ಯಾಂಕಿಗೆ ಹೆಚ್ಚಿನ ನಷ್ಟವಾಗದಂತೆ ವಸೂಲಿಗೆ ಕ್ರಮವಿಡಲಾಗುವುದು. ಸಾಲ ವಸೂಲಾತಿಯಲ್ಲಿಯೂ ಸಹ ನಾವು ಯಾವುದೇ ಮೃದುಧೋರಣೆಯನ್ನು ಅನುಸರಿಸುವುದಿಲ್ಲ ಹಾಗೂ ಇದರಲ್ಲಿ ಎಲ್ಲಾ ಖಾತೆಗಳು ಬರುವುದಿಲ್ಲ. ಶೇ. 100 ರಷ್ಟು Provision ಮಾಡಲಾಗಿರುವ Doubtful ಮತ್ತು Loss Assets ನಲ್ಲಿರುವ ಖಾತೆಗಳನ್ನು ಮಾತ್ರ ತೆಗೆದುಕೊಳ್ಳಲಿದ್ದು, ಬ್ಯಾಲೆನ್ಸ್‌ಶೀಟ್ ಕ್ಲೀನ್ ಆಗುವುದರಿಂದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇದನ್ನು ಪ್ರತಿವರ್ಷ ಮಾಡುತ್ತಿದ್ದು, ಸಹಕಾರಿ ಬ್ಯಾಂಕುಗಳಿಗೆ ಈಗ ಅವಕಾಶ ಕಲ್ಪಿಸಿದ್ದಾರೆ ನಮ್ಮ ಬ್ಯಾಂಕಿನಲ್ಲಿ 2001 ರಲ್ಲಿ ಸಾಲ ನೀಡಿದ್ದು, ಸಾಲಗಾರರು, ಜಾಮೀನುದಾರರು, ನಿಧನರಾಗಿರುವ, ಪತ್ತೆ ಇರದಂತಹ ಸುಮಾರು 80 ಪರ್ಸನಲ್ ಲೋನ್‌ಗಳನ್ನು ಈ ಯೋಜನೆಯಡಿಯಲ್ಲಿ ಈಗಾಗಲೇ ಚುಕ್ತ ಮಾಡಲಾಗಿದೆ. ಸ್ಥಿರಾಸ್ತಿ ಸಾಲಗಳಲ್ಲಿ ಆರ್.ಬಿ.ಐ. ನಿರ್ದೇಶನದಂತೆ ಸ್ಥಿರಾಸ್ತಿಯ Current Reliasable Value / Government Value (GLR) ಗೆ ಕಡಿಮೆ ಇಲ್ಲದಂತೆ, ಅಸಲು ಮೊತ್ತದ ಜೊತೆಗೆ ಬಡ್ಡಿಯನ್ನು ಪಡೆಯಲು ಯೋಜಿಸಿದ್ದು Minimum Sacrifice - Maximum Benefits ರಂತೆ ಬ್ಯಾಂಕು ಕನಿಷ್ಟ ತ್ಯಾಗದೊಂದಿಗೆ

ಜಾರಿಗೊಳಿಸಿರುವುದರಿಂದ Bad money convert into good money ಆಗುವುದಲ್ಲದೆ Balance Sheet ನಲ್ಲಿ Profit ಏರಿಕೆಯಾಗುತ್ತದೆ. ಈ ಬಗ್ಗೆ ಆಡಳಿತ ಮಂಡಲಿಯ ತೀರ್ಮಾನವೇ ಅಂತಿಮವಾಗಿರುತ್ತದೆಂದು ತಿಳಿಸಿ, ಅರ್ಹ ಸುಸ್ತಿದಾರರು / ಜಾಮೀನುದಾರರು ಬ್ಯಾಂಕನ್ನು ಸಂಪರ್ಕಿಸಿ ತಮ್ಮ ಸಾಲಗಳನ್ನು ಮರುಪಾವತಿ ಮಾಡುವಂತೆ ತಿಳಿಸಿ, ಆ ಮೂಲಕ ದಿನಾಂಕ 31.3.2024ರ ಒಳಗೆ ಬ್ಯಾಂಕು SAF ನಿಂದ ಹೊರಬರಬೇಕೆಂದು ಆಲೋಚಿಸಿದ್ದೇವೆ. ಶ್ರೀ ಎನ್.ಕೆ. ಹರೀಶ್ ರವರು ತಿಳಿಸಿದಂತೆ Gross NPA 10% ಗಿಂತ ಜಾಸ್ತಿ ಇದ್ದರೆ SAF ಹಾಕುತ್ತಿದ್ದರು, ಈಗ ಬದಲಾವಣೆಯಾಗಿದ್ದು, Net NPA 10% ಗಿಂತ ಜಾಸ್ತಿ ಇದ್ದರೆ CRAR 9% ಗಿಂತ ಕಡಿಮೆ ಇದ್ದರೆ SAF ಹಾಕುತ್ತಿರುವುದರಿಂದ ಬ್ಯಾಂಕುಗಳಿಗೆ ತೊಂದರೆಗಳು ಹೆಚ್ಚಾಗುತ್ತಿದೆ. ನಮ್ಮ ಬ್ಯಾಂಕಿನ CRAR 21.94% ಇದ್ದರೂ Net NPA 19.72% ಇದ್ದು 10% ಒಳಗೆ ಬಂದು SAF ನಿಂದ ಪಾರಾಗಬೇಕಾಗಿದೆ. ನಮ್ಮಲ್ಲಿರುವ 1200 ಸಾಲ ಖಾತೆಗಳಲ್ಲಿ ಎನ್.ಪಿ.ಎ. ಇರುವುದು ರೂ. 69.00 ಕೋಟಿಗಳು ಮಾತ್ರವಾಗಿದ್ದು, ಈ ಪೈಕಿ "Compromise Settlements & Technical write offs" ಅಡಿಯಲ್ಲಿ ಸುಮಾರು 25–30 ಕೋಟಿಗಳಷ್ಟು ಎನ್.ಪಿ.ಎ. ಕಡಿಮೆ ಮಾಡುವ ಮೂಲಕ SAF ಎಂಬ ICU ವಾರ್ಡ್ ನಿಂದ ಗುಣಮುಖರಾಗಿ ಹೊರಬಂದು, ಸಂತೋಷದಿಂದ ಮನೆಗೆ ಮರಳುವ ಮೂಲಕ ಮುಂದಿನ ವರ್ಷ ಡಿವಿಡೆಂಡ್ ಘೋಷಿಸುವ ಗುರಿಯನ್ನು ಹೊಂದಲಾಗಿದ್ದು, ಆಡಳಿತಾತ್ಮಕ ವೆಚ್ಚಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದೇ ದಿನದಲ್ಲಿ 4–5 ಸಭೆಗಳನ್ನು ನಡೆಸಲಾಗುತ್ತಿದ್ದು, ಯಾವುದೇ ದುಂದುವೆಚ್ಚಗಳನ್ನು ಮಾಡುತ್ತಿಲ್ಲವೆಂದರು.

ಸದಸ್ಯರಾದ ಶ್ರೀ ಸದಾನಂದ ಶಾಸ್ತ್ರಿ ಕೆ. ರವರು ತಿಳಿಸಿದಂತೆ ಸ್ಥಿರಾಸ್ತಿಗಳ ಹರಾಜಿನಲ್ಲಿ ಬಿಡ್‌ದಾರರು ಭಾಗವಹಿಸುವುದಿಲ್ಲ. ಅರ್ಧಬೆಲೆಗೆ ಮಾರಲೂ ಸಾಧ್ಯವಿಲ್ಲ ಕನಿಷ್ಠ 80 ಆದರೂ ಬಂದರೆ ಕ್ರಮವಿಡಬಹುದು. ಆಸಕ್ತಿಯುಳ್ಳ ಸದಸ್ಯರು ಬ್ಯಾಂಕಿಗೆ ಬಂದರೆ ಸ್ಥಿರಾಸ್ತಿಗಳ ಪಟ್ಟಿಯನ್ನು ನೀಡುತ್ತೇವೆ. ತಾವಾಗಲಿ ಅಥವಾ ತಮ್ಮ ಯಾರಾದರೂ ಸ್ನೇಹಿತರಿದ್ದರೆ ಸ್ಥಿರಾಸ್ತಿಗಳ ಮಾರಾಟಕ್ಕೆ ಸಹಕರಿಸುವ ಮೂಲಕ ಬ್ಯಾಂಕಿಗೆ ಸಹಾಯ ಮಾಡಬೇಕು. ಬ್ಯಾಂಕಿಗೆ ಗೈಡ್ ಲೈನ್ ಮೊತ್ತ ಬಂದರೂ ಮಾರಾಟಕ್ಕೆ ಕ್ರಮವಿಡಬಹುದು. ನಾವು ಠೇವಣಿಗಳಿಗೆ ಶೇ. 7.25 ರಂತೆ ಬಡ್ಡಿ ನೀಡುತ್ತಿದ್ದು, ಬೇರೆ ಬ್ಯಾಂಕುಗಳು ಇನ್ನೂ ಹೆಚ್ಚಿಗೆ ನೀಡುತ್ತಿದ್ದರೂ ನಮ್ಮಲ್ಲಿ ಠೇವಣಿಗಳಿಡುತ್ತಿದ್ದಾರೆಂದರೆ ಠೇವಣಿದಾರರಿಗೆ ನಮ್ಮ ಮೇಲಿರುವ ನಂಬಿಕೆಯಾಗಿದೆ. ಅಂತಹ ಉತ್ತಮ ಠೇವಣಿದಾರರನ್ನು ಇಂದು ಸನ್ಮಾನಿಸಲಾಗುತ್ತಿದೆ. DICGC ಸಂಸ್ಥೆಗೆ ಪಾವತಿಸುವ ಮೊತ್ತವನ್ನು ಲೆಕ್ಕಾಚಾರ ಮಾಡಿ 6 ತಿಂಗಳು ಮುಂಚಿತವಾಗಿ ಪಾವತಿಸುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ. 10 ವರ್ಷಗಳ ಕಾಲ ಯಾವುದೇ ವ್ಯವಹಾರಗಳಿಲ್ಲದ ಖಾತೆಗಳನ್ನು DEAF ಅಕೌಂಟ್‌ಗೆ ವರ್ಗಾಯಿಸುತ್ತಿದ್ದು, ಇದರಲ್ಲಿ ರೂ. 2.10 ಕೋಟಿಗಳಿದ್ದು, ಸದಸ್ಯರನ್ನು / ಗ್ರಾಹಕರನ್ನು ಎಲ್ಲಾ ರೀತಿಯಲ್ಲಿ ಭೇಟಿ ಮಾಡಲು ಪ್ರಯತ್ನಿಸಿದ ನಂತರವೇ ವರ್ಗಾಯಿಸಲಾಗಿದೆ. ಈ ಬಗ್ಗೆ ಶಾಖೆಗಳಲ್ಲಿ, ವೆಬ್‌ಸೈಟ್ ನಲ್ಲಿ ಪ್ರಚಾರ ಮಾಡಲಾಗಿದ್ದು, ಈಗ ಆರ್.ಬಿ.ಐ. ವೆಬ್‌ಸೈಟ್ ನಲ್ಲಿಯೂ ಸಹ DEAF ಅಕೌಂಟ್‌ಗಳ ಬಗ್ಗೆ ಪರಿಶೀಲಿಸಬಹುದಾಗಿದೆ. ಸಿಬ್ಬಂದಿ ಸೇವೆಯ ಬಗ್ಗೆ ಆಡಳಿತ ಮಂಡಲಿಯು ಎಚ್ಚರಿಕೆಯ ಕ್ರಮವಿಟ್ಟು ಹಾಲಿ ತಾವು ವ್ಯವಹರಿಸುವ ಪದ್ಮನಾಭನಗರ ಶಾಖೆಯಲ್ಲಿ ವ್ಯವಸ್ಥಾಪಕರನ್ನೊಳಗೊಂಡಂತೆ ಸಂಪೂರ್ಣ ಸಿಬ್ಬಂದಿಗಳನ್ನು ಬದಲಾವಣೆಗೊಳಿಸಿದೆಯೆಂದರು.

ಶ್ರೀ ಎನ್.ಕೆ. ಹರೀಶ್ ರವರು ಸಲಹೆ ನೀಡಿರುವಂತೆ, ಶಾಖೆಗಳನ್ನು ವಿಲೀನಗೊಳಿಸುವ ಬಗ್ಗೆ ಬ್ಯಾಂಕು ಸಹ ಆಲೋಚಿಸುತ್ತಿದ್ದು, ಆರ್.ಬಿ.ಐ. ರವರು ಸಹ ಕೊನೆಯ 2–3 ಶಾಖೆಗಳನ್ನು ಇತರೆ ಶಾಖೆಗಳೊಂದಿಗೆ ವಿಲೀನಗೊಳಿಸುವಂತೆ ಸಲಹೆ ನೀಡಿರುತ್ತಾರೆ. ಇದರಿಂದ ಬ್ಯಾಂಕಿನ ವ್ಯವಹಾರಗಳಿಗೆ ಯಾವುದೇ

ತೊಂದರೆಗಳಾಗುವುದಿಲ್ಲ. ಖರ್ಚುವೆಚ್ಚಗಳು ಕಡಿಮೆಯಾಗುತ್ತವೆ. ಬ್ಯಾಂಕಿನ ಸುವರ್ಣ ಮಹೋತ್ಸವದ ನಂತರ ಈ ಬಗ್ಗೆ ಕ್ರಮವಿಡಲು ಯೋಜಿಸಿದ್ದು, ಪ್ರಸ್ತುತ ಯಾವುದೇ ಹೊಸ ಖಾತೆಗಳನ್ನು ತೆರೆಯುವ ಉದ್ದೇಶವನ್ನು ಹೊಂದಿರುವುದಿಲ್ಲವೆಂದು ಸಭೆಗೆ ವಿವರಿಸಿದರು. ಬ್ಯಾಂಕು 2 ಸ್ವಂತ ಕಟ್ಟಡಗಳನ್ನು ಹೊಂದಿದ್ದು, ಬ್ಯಾಂಕಿನ ಆಡಳಿತ ಕಛೇರಿಯ ಎದುರುಗಡೆ ಇರುವ ಕಲ್ಲು ಕಟ್ಟಡವನ್ನು ಮಾರಾಟ ಮಾಡಿ, 2–3 ಶಾಖೆಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದುವ ಉದ್ದೇಶದಿಂದ ಹಿಂದಿನ ಮಹಾಸಭೆಯಲ್ಲಿ ವಿಷಯವನ್ನು ಮಂಡಿಸಿ ತಮ್ಮಗಳ ಅನುಮತಿ ಪಡೆದು ಪ್ರಸ್ತಾವನೆಯನ್ನು RBI/ಇಲಾಖೆಗೆ ಸಲ್ಲಿಸಿದ್ದು, ಅವರು ಕೇಳಿರುವ ಹೆಚ್ಚುವರಿ ದಾಖಲೆಗಳನ್ನು ಸಹ ಸಲ್ಲಿಸಿ ಪತ್ರ ವ್ಯವಹಾರಗಳನ್ನು ನಡೆಸಲಾಗುತ್ತಿದೆಯೆಂದು ಸಭೆಗೆ ವಿವರಿಸಿದರು.

ಸದಸ್ಯರುಗಳ ಪ್ರಶ್ನೆಗಳಿಗೆ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿ ಯವರು ಮತ್ತು ಹಾಲಿ ಬ್ಯಾಂಕಿನಲ್ಲಿ ಪೂರ್ಣ ಸಮಯದ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರು ಸಮರ್ಪಕವಾಗಿ ಉತ್ತರಿಸಿದ್ದು, 2022–2023ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಅಂಗೀಕರಿಸಬಹುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗೆ ಅನುಮೋದನೆ ನೀಡಬಹುದೆಂದು ಸದಸ್ಯರಾದ ಶ್ರೀ ಎನ್.ಕೆ. ಹರೀಶ್ ಸದಸ್ಯತ್ವ ಸಂಖ್ಯೆ 107961 ರವರು ಸೂಚಿಸಿದಾಗ ಇದನ್ನು ಮತ್ತೊಬ್ಬ ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**7) 2022–2023ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಆಡಳಿತ ಮಂಡಲಿಯ ಅನುಪಾಲನಾ ವರದಿಯೊಂದಿಗೆ ಪರಿಶೀಲಿಸಿ ಅಂಗೀಕರಿಸುವುದು:**

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಸಭೆಯಲ್ಲಿ ವಿಷಯವನ್ನು ಮಂಡಿಸುತ್ತಾ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 33 ರಿಂದ 63 ರವರೆಗೆ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಪ್ರತ್ಯೇಕವಾದ ಬಿಳಿ ಹೊದಿಕೆಯ ಪುಸ್ತಕದಲ್ಲಿ ಪುಟ ಸಂಖ್ಯೆ 30 ರಿಂದ 143 ರವರೆಗೆ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಅನುಪಾಲನಾ ವರದಿಯನ್ನು ಮುದ್ರಿಸಲಾಗಿದ್ದು, ಸನ್ಮಾನ್ಯ ಸದಸ್ಯರುಗಳು ಇವುಗಳನ್ನು ಪರಿಶೀಲಿಸಿ ಅಂಗೀಕರಿಸಬೇಕಾಗಿ ಕೋರಿ ವರದಿಯನ್ನು ಓದಲು ಮುಂದಾದರು. ಆಗ ಸಭೆಯಲ್ಲಿದ್ದ ಹಲವಾರು ಸದಸ್ಯರುಗಳು ಎದ್ದು ನಿಂತು ಮಾತನಾಡಿ, ಮುದ್ರಿತ ಲೆಕ್ಕ ಪತ್ರಗಳು ಮತ್ತು ಆಡಳಿತ ಮಂಡಲಿಯ ಅನುಪಾಲನಾ ವರದಿಯು ಎಲ್ಲರ ಬಳಿ ಇರುವುದರಿಂದ ಓದುವುದು ಬೇಡ ಚರ್ಚೆಗೆ ತೆಗೆದುಕೊಳ್ಳುವಂತೆ ಸೂಚಿಸಿದರು.

ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರು ಮಾತನಾಡಿ, ಲೆಕ್ಕಪರಿಶೋಧಕರ ವರದಿ, ಪುಟ ಸಂಖ್ಯೆ 39ರ ಕ್ರಮ ಸಂಖ್ಯೆ 4 ರಲ್ಲಿ 48 ಎನ್.ಪಿ.ಎ. ಖಾತೆಗಳ ಮೊತ್ತ ರೂ. 24.38 ಕೋಟಿಗಳಿಗೆ ಹರಾಜು ಪ್ರಕ್ರಿಯೆ ನಡೆಸಿರುವುದಾಗಿ ತಿಳಿಸಲಾಗಿದ್ದು, ಸಾಲ ಸರಿಯಾಗಿ ಮರುಪಾವತಿಸಿಲ್ಲವೆಂದರೆ ಅದಕ್ಕೆ ಯಾರು ಜವಾಬ್ದಾರಿ ? ತಾವು ಸಾಲ ನೀಡುವಾಗ ಅವರ ಆದಾಯ, ಮರುಪಾವತಿ ಸಾಮರ್ಥ್ಯಗಳನ್ನು ಸರಿಯಾಗಿ ಪರಿಶೀಲಿಸಿರುವುದಿಲ್ಲ, ಸಾಲಗಾರರಿಗೆ ಅವರ ಮರುಪಾವತಿ ಸಾಮರ್ಥ್ಯ ಇರುವಷ್ಟು ಮಾತ್ರ ಸಾಲ ನೀಡಬೇಕು, ಹೆಚ್ಚು ನೀಡಿದರೆ ವಸೂಲಿಗೆ ತೊಂದರೆಯಾಗುತ್ತದೆ.

ಪುಟ 46 ರಲ್ಲಿ ಸಹಕಾರ ಸಂಘಕ್ಕೆ / ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು ಕ್ರಮವಿಡಲು ಸೂಚಿಸಿರುತ್ತಾರೆ ಎಂದು ಇರುತ್ತದೆ. ಸರಿಯಾಗಿ ಸಾಲ ವಸೂಲಾತಿ ಮಾಡಿರುವುದಿಲ್ಲ ಕಾರಣ ಏಕೆಂಬ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕೆಂದರು.

ಪುಟ 79 ರಲ್ಲಿ ಸುಸ್ತಿ ಸಾಲಗಳ ಮೇಲೆ ದಾವಾ ಕ್ರಮ ಜರುಗಿಸಿರುವ ಬಗ್ಗೆ ವಿವರಿಸಿದ್ದು, 1124 ಸುಸ್ತಿ ಸಾಲಗಳ ಪೈಕಿ 714 ಪ್ರಕರಣಗಳಿಗೆ ಮಾತ್ರ ಕಾನೂನು ಕ್ರಮವಿಟ್ಟಿದ್ದು, ಉಳಿದ 410 ಪ್ರಕರಣಗಳಿಗೆ ಏಕೆ ಕ್ರಮವಿಟ್ಟಿಲ್ಲವೆಂದು ತಿಳಿಸಬೇಕು. ಆಡಳಿತ ಮಂಡಲಿಯವರು ಸಮಜಾಯಿಷಿಯಲ್ಲಿ ಸರಿಯಾಗಿ ಉತ್ತರಿಸದಿರುವ ಕಾರಣ ಈ ಬಗ್ಗೆ ಮಹಾಸಭೆಗೆ ಸರಿಯಾಗಿ ವಿವರಿಸಬೇಕು ಹಾಗೂ ಮುಂದಿನ ವರ್ಷವಾದರೂ ಸಾಲ ವಸೂಲಾತಿಯನ್ನು ಸರಿಯಾಗಿ ಮಾಡಿ ಬ್ಯಾಂಕು ಲಾಭ ಗಳಿಸಿ ಸದಸ್ಯರಿಗೆ ಡಿವಿಡೆಂಡ್ ನೀಡಬೇಕೆಂಬುದು ನನ್ನ ಅನಿಸಿಕೆಯೆಂದರು.

ಪುಟ ಸಂಖ್ಯೆ 83 ರ ಕ್ರಮ ಸಂಖ್ಯೆ 4 ರಲ್ಲಿ ಬ್ಯಾಂಕು ಕಾಲಕಾಲಕ್ಕೆ ಸಾಲಗಾರರಿಂದ ದೃಢೀಕರಣ ಪಡೆಯುತ್ತಿಲ್ಲವೆಂದು ಲೆಕ್ಕ ಪರಿಶೋಧಕರು ತಿಳಿಸಿದ್ದು, ಸಮಜಾಯಿಷಿಯಲ್ಲಿ ಕಂಡಿಕೆ ಸಂಖ್ಯೆ 11(2) ಎಂದು ನೀಡಿದ್ದು, ಸಾಮಾನ್ಯ ಸದಸ್ಯರು ಇದನ್ನು ಹುಡುಕುವುದಾದರೂ ಹೇಗೆಂದು ಪ್ರಶ್ನಿಸಿ, ದಯವಿಟ್ಟು ಕಂಡಿಕೆ ಸಂಖ್ಯೆ ಜೊತೆಗೆ ಪುಟ ಸಂಖ್ಯೆಯನ್ನೂ ಸಹ ನಮೂದಿಸುವಂತೆ ಸಲಹೆ ನೀಡಿ, ಕ್ರಮ ಸಂಖ್ಯೆ 6 ರಲ್ಲಿ ಸಿಬಿಲ್ ವರದಿ ಪಡೆಯದಿರುವ ಬಗ್ಗೆ ತಿಳಿಸಿದ್ದು, ಸಮಜಾಯಿಷಿಯಲ್ಲಿ ಕಳೆದ ಸಾಲಿನಲ್ಲಿಯೇ ಗಮನಿಸಿದ್ದು, ಪಾಲಿಸಲಾಗುತ್ತಿದೆ ಎಂಬುದಾಗಿ ತಿಳಿಸಿರುವಿರಿ. ಆದರೆ ಹೋದ ವರ್ಷವೇ ಹೇಳಿದ್ದರೂ ಅದನ್ನು ಈ ವರ್ಷವೂ ಏಕೆ ಪಾಲಿಸುತ್ತಿಲ್ಲವೆಂದು ಪ್ರಶ್ನಿಸಿದರು.

ಪುಟ ಸಂಖ್ಯೆ 89ರ ಕ್ರಮ ಸಂಖ್ಯೆ 10 ರಲ್ಲಿ ದಿನಾಂಕ 31.3.2023 ಕ್ಕೆ ಮುದ್ರಣ ಮತ್ತು ಲೇಖನ ಸಾಮಗ್ರಿ ದಾಸ್ತಾನನ್ನು ಪರಿಶೀಲಿಸಿ ದೃಢೀಕರಿಸಿರುವುದಿಲ್ಲ ಎಂದು ಲೆಕ್ಕ ಪರಿಶೋಧಕರು ವರದಿ ನೀಡಿದ್ದು, ಸಮಜಾಯಿಷಿಯಲ್ಲಿ ಮಾಡುತ್ತಿರುವುದಾಗಿ ತಿಳಿಸಿರುತ್ತೀರಿ. ಮಾಡಿದ್ದರೆ ಲೆಕ್ಕ ಪರಿಶೋಧಕರು ಏಕೆ ಆಕ್ಷೇಪಣೆ (Objection) ಮಾಡುತ್ತಿದ್ದರು. ಇದರಿಂದ ಮಾಡುತ್ತಿಲ್ಲವೆಂಬುದಾಗಿ ತಿಳಿಯುತ್ತಿದೆಯೆಂದರು.

ಪುಟ ಸಂಖ್ಯೆ 104 ರಲ್ಲಿ DAY END PROCESS ಬಗ್ಗೆ ತಿಳಿಸಿದ್ದು, NPA ವರ್ಗೀಕರಣ ಲಭ್ಯವಾಗುತ್ತಿಲ್ಲವೆಂದು ತಿಳಿಸಿದ್ದಾರೆ. ಬ್ಯಾಂಕಿನಲ್ಲಿ ಇಡೀ ದಿನ ನಡೆಸುವ ಎಲ್ಲಾ ವ್ಯವಹಾರಗಳು ಸಂಜೆ ನಡೆಸುವ DAY END PROCESS ನಿಂದ ಲಭ್ಯವಾಗುತ್ತದೆ. ಇದು ಬ್ಯಾಂಕಿನ ವ್ಯವಹಾರಗಳಲ್ಲಿ ಅತಿ ಮುಖ್ಯವಾಗಿದ್ದು, ಸಣ್ಣಪುಟ್ಟ ಸೊಸೈಟಿಗಳೇ ಸರಿಯಾಗಿ ಮಾಡುತ್ತಿರುವಾಗ 52 ವರ್ಷಗಳ ನಮ್ಮ ಬ್ಯಾಂಕಿನಲ್ಲಿ ಏಕೆ ಸಾಧ್ಯವಾಗುತ್ತಿಲ್ಲ. ಕೂಡಲೇ ಸಾಫ್ಟ್‌ವೇರ್‌ನಲ್ಲಿರುವ ತೊಂದರೆಗಳನ್ನು ಸರಿಪಡಿಸಿಕೊಂಡು, ದೈನಂದಿನ DAY END PROCESS ಅನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಆಶಿಸಿದರು.

ಪುಟ ಸಂಖ್ಯೆ 107ರ ಕ್ರಮ ಸಂಖ್ಯೆ 36 ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳಡಿಯಲ್ಲಿ ಸಾಲ ಮಂಜೂರು ಮಾಡುವಾಗ ಸಾಲಗಾರರ ಆದಾಯ ದಾಖಲಾತಿಗಳು, ಸಾಲ ಮಂಜೂರಾತಿಯ ಸಾಮರ್ಥ್ಯ, ಆದಾಯ ತೆರಿಗೆ ದಾಖಲಾತಿಗಳು ಮತ್ತು ಇತರೆ ಆರ್ಥಿಕ ತಃಖ್ತೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾಲ ಮಂಜೂರು ಮಾಡಲು ಸೂಚಿಸಿದ್ದಾರೆ. ಆದರೆ ಸಮಜಾಯಿಷಿಯಲ್ಲಿ ಮಾಡಲಾಗುತ್ತಿದೆಯೆಂದು ತಿಳಿಸಿರುವಿರಿ, ಮಾಡಿದ್ದರೆ ಲೆಕ್ಕಪರಿಶೋಧಕರು ಏಕೆ ಈ ರೀತಿ ವರದಿ ನೀಡುತ್ತಿದ್ದರು ? ಸಾಲ ನೀಡುವಾಗ ಸಾಲ ವಿಭಾಗದ ಸಿಬ್ಬಂದಿ, ಶಾಖಾ ವ್ಯವಸ್ಥಾಪಕರು, ಪ್ರಧಾನ ವ್ಯವಸ್ಥಾಪಕರು ಹಾಗೂ ಸಾಲ ಮಂಜೂರಾತಿ ಉಪಸಮಿತಿ ಹೀಗೆ ಎಲ್ಲಾ ಕಡೆಗಳಲ್ಲಿ ಪರಿಶೀಲಿಸಿದ ನಂತರ ಆಡಳಿತ ಮಂಡಲಿಗೆ ಅರ್ಜಿಗಳು ಬಂದು ಸಾಲ ಮಂಜೂರು ಆಗುತ್ತದೆ. ಸಾಮರ್ಥ್ಯಕ್ಕಿಂತ ಹೆಚ್ಚು ಸಾಲಗಳನ್ನು ನೀಡುವುದರಿಂದ ಸಾಲ ಕಂತುಗಳನ್ನು ಮರುಪಾವತಿಸಲು ಸಾಧ್ಯವಾಗದೆ ಎನ್.ಪಿ.ಎ. ಏರಿಕೆಯಾಗಿ ಲಾಭ ಕಡಿಮೆಯಾಗಿ ಡಿವಿಡೆಂಡ್ ನೀಡಲು ಸಾಧ್ಯವಾಗುತ್ತಿಲ್ಲವೆಂದರು.

ಸದಸ್ಯರ ಪ್ರಶ್ನೆಗಳಿಗೆ ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ಅವರು ಉತ್ತರಿಸುತ್ತಾ, ಸಮಜಾಯಿಷಿಯಲ್ಲಿ ಕಂಡಿಕೆ ಸಂಖ್ಯೆಯ ಜೊತೆಗೆ ಪುಟ ಸಂಖ್ಯೆ ನಮೂದಿಸುವಂತೆ ತಿಳಿಸಿದ್ದು, ಮುಂದಿನ ಸಾಲಿನಿಂದ ನಮೂದಿಸುವುದಾಗಿ ತಿಳಿಸಿ, ಬ್ಯಾಂಕಿನ ಕಾನೂನು ಪಾಲನೆಯಲ್ಲಿ ಯಾವುದೇ ರೀತಿಯ ಉಲ್ಲಂಘನೆಯಾಗಿರುವುದಿಲ್ಲ. ಸಾಫ್ಟ್‌ವೇರ್‌ನಲ್ಲಿ ಇದ್ದ ಹಲವಾರು ತೊಂದರೆಗಳನ್ನು ಸರಿಪಡಿಸಿಕೊಳ್ಳಲಾಗಿದ್ದು, DAY END PROCESS ಕಾರ್ಯಗಳು ನಡೆಯುತ್ತಿದ್ದು, ಎನ್.ಪಿ.ಎ. Automatic Generate ಆಗುತ್ತಿಲ್ಲ. ಇದರ ಬಗ್ಗೆ ಇರುವ ತೊಂದರೆಗಳನ್ನು ಈ ಮಾಸಾಂತ್ಯದೊಳಗೆ ಸರಿಪಡಿಸಿಕೊಡುವುದಾಗಿ ತಿಳಿಸಿದ್ದಾರೆ. ಇದು ಬ್ಯಾಂಕಿಗೆ ಅತಿ ಮುಖ್ಯವಾಗಿರುವುದರಿಂದ ನಾವೂ ಸಹ ಹಿಂಬಾಲಿಕೆ ಕ್ರಮವಿಟ್ಟಿರುತ್ತೇವೆ. ಮುಂದಿನ ತಿಂಗಳ ಮೊದಲ ವಾರದಲ್ಲಿ ಆರ್.ಬಿ.ಐ. ಪರಿವೀಕ್ಷಣೆಗೆ ಬರುತ್ತಿದ್ದು, ಶೀಘ್ರವಾಗಿ ಸರಿಪಡಿಸಿಕೊಳ್ಳಲಾಗುವುದೆಂದರು. ಸಾಲ ಮಂಜೂರು ಮಾಡುವಾಗ ಎಲ್ಲಾ ಹಂತಗಳಲ್ಲಿ ಪರಿಶೀಲಿಸಿ ಸಾಲ ಮಂಜೂರು ಮಾಡಲಾಗುತ್ತಿದೆ. ಪ್ರಸ್ತುತ ಆಡಳಿತ ಮಂಡಲಿ ಬಂದ ನಂತರ ಮಂಜೂರು ಮಾಡಿರುವ ಯಾವುದೇ ಸಾಲಗಳು ಎನ್.ಪಿ.ಎ. ಆಗಿರುವುದಿಲ್ಲವೆಂದ ಮೇಲೆ ಪರಿಶೀಲಿಸಲಾಗುತ್ತಿದೆಯೆಂಬುದು ಅರ್ಥವಾಗುತ್ತದೆ. ಲೆಕ್ಕಪರಿಶೋಧಕರು ಹಳೆಯ ಸಾಲ ಖಾತೆಗಳನ್ನು ಪರಿಶೀಲಿಸಿ ಇಂತಹ ವರದಿ ಬಂದಿರುತ್ತದೆ. ಆರ್.ಬಿ.ಐ. ನಿರ್ದೇಶನದಂತೆ ರೂ. 10.00 ಲಕ್ಷಗಳಿಗೆ ಮೇಲ್ಪಟ್ಟ ಸಾಲಗಳಿಗೆ ಕಡ್ಡಾಯವಾಗಿ ಐ.ಟಿ. ರಿಟರ್ನ್ಸ್ ಮತ್ತು ಸಿಬಿಲ್ ವರದಿಗಳನ್ನು ಪಡೆಯಲಾಗುತ್ತಿದೆ. ಒಂದು ಸಲ ಸಾಲ ನೀಡುವಾಗ ಸಿಬಿಲ್ ವರದಿ ಪಡೆದು ಅದೇ ಸಾಲಗಾರರಿಗೆ ಹೆಚ್ಚುವರಿ ಸಾಲ ವಿತರಿಸುವಾಗ ಪಡೆದಿಲ್ಲವೆಂದು ವರದಿ ನೀಡಿರುವುದು ವಿಜಯನಗರ ಶಾಖೆಯ ಒಂದು ಸಾಲ ಖಾತೆಗೆ ಕಳೆದ ಸಾಲಿನಲ್ಲಿ ಅನುಪಾಲನೆ ನೀಡಿದ್ದು, ಈ ವರ್ಷವೂ ಅದೇ ಖಾತೆಯನ್ನು ಪರಿಶೀಲಿಸಿರುವುದರಿಂದ ಅದು ಪುನರಾವರ್ತನೆಯಾಗಿದೆ. ಈಗ ಸಿಬಿಲ್ ಇಲ್ಲದೆ ಯಾವುದೇ ಸಾಲ ನೀಡಲಾಗುತ್ತಿಲ್ಲವೆಂದು ತಿಳಿಸಿ ಆಡಿಟ್ ವರದಿಯ ಎಲ್ಲಾ ಸೂಚನೆಗಳನ್ನು ಗಮನಿಸಿದ್ದು, ಅನುಪಾಲನಾ ವರದಿಯನ್ನು ನೀಡಲಾಗಿದ್ದು, ಯಾವುದೇ ಉಲ್ಲಂಘನೆಯಾಗಿರುವುದಿಲ್ಲ.

ಆಡಳಿತ ಮಂಡಲಿಯವರು ಸೂಕ್ತ ರೀತಿಯಲ್ಲಿ ಅನುಪಾಲನಾ ವರದಿಯನ್ನು ಮತ್ತು ಸಮಜಾಯಿಷಿಯನ್ನು ನೀಡಿರುವುದರಿಂದ ಹಾಗೂ ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಗಳನ್ನು ಒದಗಿಸಿರುವುದರಿಂದ 2022-2023ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು, ಆಡಳಿತ ಮಂಡಲಿಯ ಅನುಪಾಲನಾ ವರದಿಯನ್ನು ಅಂಗೀಕರಿಸಬಹುದೆಂದು ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರು ಸೂಚಿಸಿದಾಗ ಇದನ್ನು ಮತ್ತೊಬ್ಬ ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ ಕೆ. ಸದಸ್ಯತ್ವ ಸಂಖ್ಯೆ 105293 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**8) 2023-2024ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಲು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಪೂರ್ವಾನುಮತಿಗಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರಸ್ತಾವನೆ ಸಲ್ಲಿಸಿರುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ರವಿ .ಕೆ ರವರು ವಿಷಯವನ್ನು ಮಂಡಿಸುತ್ತಾ, ಕೇಂದ್ರ ಸರ್ಕಾರವು ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ ಕಲಂ 30ರಲ್ಲಿ ತಿದ್ದುಪಡಿ ತಂದಿರುವ ಪ್ರಕಾರ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಸುತ್ತೋಲೆ ಸಂಖ್ಯೆ DOS.CO.ARG/SEC.01/08.91.001/2021-22, ದಿನಾಂಕ 27-04-2021 ರಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕದ ಬಗ್ಗೆ ವಿವರವಾಗಿ

ನಮೂದಿಸಿದ್ದು, ಅದರಂತೆ ದಿನಾಂಕ 31-05-2023 ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ 2023-2024ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆ ನಡೆಸುವ ಸಲುವಾಗಿ ಬ್ಯಾಂಕಿಗೆ ಸಲ್ಲಿಸಲಾಗಿದ್ದ [1] Babu & Badat, [2] Shashidara& Mamatha ಮತ್ತು [3] Nath Associates ಸಂಸ್ಥೆಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಬ್ಯಾಂಕಿನ ಪತ್ರ ಸಂಖ್ಯೆ. No.SSCB/214/2023-24ರಂತೆ ದಿನಾಂಕ 14-07-2023 ರಂದು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ಸಲ್ಲಿಸಲಾಗಿದೆ ಮತ್ತೆ ದಿನಾಂಕ 25-08-2023 ರಂದು ಆರ್.ಬಿ.ಐ. ಹಲವು ದಾಖಲೆಗಳನ್ನು ಕೇಳಿದ್ದು, ಅವುಗಳನ್ನು ಸಹ ಸಲ್ಲಿಸಲಾಗಿದೆ. ಲೆಕ್ಕಪರಿಶೋಧಕರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗೊಳಪಟ್ಟು ನೇಮಕವನ್ನು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(1) ರನ್ವಯ ಮತ್ತು ಬ್ಯಾಂಕಿನ ಬೈಲಾ ಸಂಖ್ಯೆ 39(1)(xix) ಅನ್ವಯ ಸದರಿಯವರಿಗೆ ಲೆಕ್ಕಪರಿಶೋಧನಾ ಶುಲ್ಕ ಪಾವತಿಸಲು ಮಂಜೂರಾತಿ ನೀಡಬೇಕಾಗಿ ಕೋರಿದರು.

ಮುಂದುವರಿದು, ಭಾರತೀಯ ರಿಸರ್ವ್ ಬ್ಯಾಂಕ್ ಸದರಿ ಲೆಕ್ಕಪರಿಶೋಧಕರ ಅನುಮತಿಯನ್ನು ನಿರಾಕರಿಸಿದಲ್ಲಿ ಅಥವಾ ಒಂದು ವೇಳೆ ಸದರಿ ಸಂಸ್ಥೆಯವರು ಲೆಕ್ಕಪರಿಶೋಧನೆಗೆ ಒಪ್ಪದಿದ್ದಲ್ಲಿ, ಇವರ ಬದಲಿಗೆ ಇಲಾಖೆಯ ಪಟ್ಟಿಯಲ್ಲಿ ಹೆಸರಿಸಿರುವವರಲ್ಲಿ ಬೇರೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕಿಗೆ ಮತ್ತೊಮ್ಮೆ ಪೂರ್ವಾನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಹಾಗೂ ಅವರಿಗೆ ವೃತ್ತಿ ಶುಲ್ಕವನ್ನು ಪಾವತಿಸಲು ಅಧಿಕಾರವನ್ನು ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಸದಾನಂದ ಶಾಸ್ತ್ರಿ. ಕೆ. ಸದಸ್ಯತ್ವ ಸಂಖ್ಯೆ 105293 ರವರು ಸೂಚಿಸಿ, ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ 2023-2024ನೇ ಸಾಲಿನ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ಈ ಗಾಗಲೇ ಬ್ಯಾಂಕಿಗೆ ಬಂದಿರುವ ಮೂರು ಸಂಸ್ಥೆಗಳ ಪ್ರಸ್ತಾವನೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ಸಲ್ಲಿಸಲಾಗಿದ್ದು, ಈ ಮೂರು ಸಂಸ್ಥೆಗಳ ಪೈಕಿ ಆರ್.ಬಿ.ಐ. ಸೂಚಿಸುವ ಲೆಕ್ಕಪರಿಶೋಧನಾ ಸಂಸ್ಥೆಯನ್ನು ನೇಮಿಸಿಕೊಳ್ಳಲು ಮತ್ತು ಸದರಿಯವರಿಗೆ ಲೆಕ್ಕ ಪರಿಶೋಧನಾ ಶುಲ್ಕವನ್ನು ಪಾವತಿಸಲು ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಸದರಿ ಲೆಕ್ಕಪರಿಶೋಧಕರ ಅನುಮತಿಯನ್ನು ನಿರಾಕರಿಸಿದಲ್ಲಿ, ಇಲ್ಲವೇ ಒಂದು ವೇಳೆ ಅನುಮತಿ ದೊರೆತ ಸಂಸ್ಥೆಯವರು ಲೆಕ್ಕಪರಿಶೋಧನೆ ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ತಮ್ಮ ಪ್ರಸ್ತಾವನೆಯನ್ನು ಹಿಂಪಡೆದು ಲೆಕ್ಕಪರಿಶೋಧನೆಗೆ ಒಪ್ಪದಿದ್ದಲ್ಲಿ, ಇವರ ಬದಲಿಗೆ ಇಲಾಖೆಯ ಪಟ್ಟಿಯಲ್ಲಿ ಹೆಸರಿಸಿರುವವರಲ್ಲಿ ಬೇರೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕಿಗೆ ಮತ್ತೊಮ್ಮೆ ಪೂರ್ವಾನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಹಾಗೂ ಅವರಿಗೆ ವೃತ್ತಿ ಶುಲ್ಕವನ್ನು ಪಾವತಿಸಲು ಆಡಳಿತ ಮಂಡಲಿಗೆ ಅಧಿಕಾರ ನೀಡಲಾಯಿತು.

**9) 2022-2023ನೇ ಸಾಲಿನ ವ್ಯಯದ ಪಟ್ಟಿಯನ್ನು ಪರಿಶೀಲಿಸುವುದು ಹಾಗೂ ವ್ಯಯದ ಪಟ್ಟಿಯಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳಿಗೆ ಅನುಮೋದನೆ ನೀಡುವುದು ಮತ್ತು 2023-2024ನೇ ಸಾಲಿಗೆ ಮುಂಗಡ ಪತ್ರ ಹಾಗೂ 2024-2025ನೇ ಸಾಲಿಗೆ ತಾತ್ಕಾಲಿಕ ಮುಂಗಡ ಪತ್ರವನ್ನು ಮಂಜೂರು ಮಾಡುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಸತ್ಯಮೂರ್ತಿಯವರು ವಿಷಯವನ್ನು ಮಂಡಿಸುತ್ತಾ, ಆಡಳಿತ ಮಂಡಲಿಯ ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 25 ಮತ್ತು 26ರಲ್ಲಿ ವಿಷಯವನ್ನು ಮತ್ತು ಪುಟ 65 ಮತ್ತು 66 ರಲ್ಲಿ ವಿವರವಾಗಿ ಮುದ್ರಿತವಾಗಿರುವ ಅಂಕಿ ಅಂಶಗಳನ್ನು ಸಭೆಯ ಮುಂದೆ ಮಂಡಿಸಿ, 2022-

2023ನೇ ಸಾಲಿಗೆ ಮಂಜೂರು ಮಾಡಿದ ಆಯ–ವ್ಯಯ ಪಟ್ಟಿಯ ರೀತ್ಯಾ ಕಾನೂನು, ವೃತ್ತಿ ವೆಚ್ಚ ಮತ್ತು ದಾವಾ ಹಾಗೂ ಅಮಲ್ಜಾರಿ ವೆಚ್ಚ ಬಾಬ್ತಿನಲ್ಲಿ ಹೊರತುಪಡಿಸಿ ಉಳಿದ ಎಲ್ಲಾ ಬಾಬ್ತುಗಳಲ್ಲಿ ಮಂಜೂರಾತಿಯ ಮಿತಿಯಲ್ಲಿಯೇ ವೆಚ್ಚಗಳನ್ನು ನಿರ್ವಹಿಸಲಾಗಿದೆ. ಸದರಿ ಬಾಬ್ತಿಗೆ 2022–2023ನೇ ಸಾಲಿಗೆ ರೂ.58,00,000–00 ಮಂಜೂರಾಗಿದ್ದು, ಎನ್.ಪಿ.ಎ. ಮೊತ್ತವನ್ನು ಕಡಿಮೆ ಮಾಡುವ ಸಲುವಾಗಿ ತೆಗೆದುಕೊಂಡ ಸಾಲ ವಸೂಲಾತಿ ಕ್ರಮಗಳಿಗೆ ಸಾಲಿನಾಂತ್ಯಕ್ಕೆ ರೂ.64,95,441–50 ಗಳು ಖರ್ಚಾಗಿ, ರೂ.6,95,441–50 ಹೆಚ್ಚಿಗೆ ಖರ್ಚಾಗಿರುತ್ತದೆ. ಈ ವೆಚ್ಚವು ಅನಿವಾರ್ಯವಾಗಿರುವುದರಿಂದ ಮತ್ತು ಕ್ರಮಬದ್ಧವಾಗಿರುವುದರಿಂದ ಈ ಹೆಚ್ಚುವರಿ ವೆಚ್ಚಕ್ಕೆ ಮಾನ್ಯ ಸದಸ್ಯರು ಅನುಮೋದನೆಯನ್ನು, 2023–2024ನೇ ಸಾಲಿನ ಮುಂಗಡಪತ್ರಕ್ಕೆ ಮಂಜೂರಾತಿಯನ್ನು ಹಾಗೂ 2024–2025ನೇ ಸಾಲಿಗೆ ತಾತ್ಕಾಲಿಕ ಮುಂಗಡ ಪತ್ರಕ್ಕೂ ಮಂಜೂರಾತಿ ನೀಡಬೇಕಾಗಿ ವಿನಂತಿಸಿ, ಈ ಕೆಳಕಂಡಂತೆ ಓದಲು ಮುಂದಾದಾಗ ಸದಸ್ಯರಾದ ಶ್ರೀ ಗೋಡಪ್ಪ ತೋಟಗೆರೆ ಸದಸ್ಯತ್ವ ಸಂಖ್ಯೆ 110071 ರವರು ಮಾತನಾಡಿ, ನಮ್ಮಗಳ ಬಳಿ ವಾರ್ಷಿಕ ವರದಿ ಪುಸ್ತಕವು ಇರುವುದರಿಂದ ನಾವೇ ಓದಿಕೊಳ್ಳುತ್ತೇವೆ, ಓದುವುದು ಬೇಡವೆಂದು ತಿಳಿಸಿದರು.

(ರೂ. ಗಳಲ್ಲಿ)

| ಕ್ರ. ಸಂ. | ವಿವರ | 2022–2023ನೇ ಸಾಲಿನ ಆಯ–ವ್ಯಯ<br>2022–23ನೇ ಸಾಲಿಗೆ ಮಂಜೂರಾದದ್ದು | 2022–23ನೇ ಸಾಲಿಗೆ ಖರ್ಚಾದದ್ದು | ಹೆಚ್ಚಿಗೆ ಖರ್ಚಾದದ್ದು | 2023–2024ನೇ ಸಾಲಿಗೆ ವ್ಯಯದ ಪಟ್ಟಿ ಮಂಜೂರಾತಿಗಾಗಿ | 2024–2025ನೇ ಸಾಲಿಗೆ ತಾತ್ಕಾಲಿಕ ವ್ಯಯದ ಪಟ್ಟಿ ಮಂಜೂರಾತಿಗಾಗಿ |
|---|---|---|---|---|---|---|
| 1. | ಕಟ್ಟಡ ಖರೀದಿ ಹಾಗೂ ನಿರ್ಮಾಣ, ವಾಹನ, ಪೀಠೋಪಕರಣ ಹಾಗೂ ಗಣಕಯಂತ್ರಗಳು | 3,50,00,000–00 | 4,54,590–86 | – | 3,50,00,000–00 | 3,50,00,000–00 |
| 2. | ಸಂಬಳ ಮತ್ತು ಸಂಭಾವನೆಗಳು | 10,00,00,000–00 | 8,23,19,880–00 | – | 10,50,00,000–00 | 12,00,00,000–00 |
| 3. | ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ ಮತ್ತು ವಿಮಾ ಕಂತು | 1,89,00,000–00 | 1,65,50,750–84 | – | 1,90,00,000–00 | 1,75,00,000–00 |
| 4. | ಮುದ್ರಣ, ಲೇಖನ ಸಾಮಾಗ್ರಿಗಳು ಮತ್ತು ಪ್ರಚಾರ ವೆಚ್ಚಗಳು | 18,00,000–00 | 14,64,380–51 | – | 17,00,000–00 | 18,00,000–00 |
| 5. | ವಾರ್ಷಿಕ ಮಹಾಸಭೆ ಮತ್ತು ಇತರೆ ಸಭೆ ಖರ್ಚು | 45,00,000–00 | 20,10,429–14 | – | 45,00,000–00 | 65,00,000–00 |
| 6. | ಅಂಚೆ ಮತ್ತು ದೂರವಾಣಿ ವೆಚ್ಚಗಳು | 10,00,000–00 | 5,42,840–00 | – | 9,00,000–00 | 10,00,000–00 |

| | | | | | |
|---|---|---|---|---|---|
| 7. ಸಾರಿಗೆ ಮತ್ತು ಪ್ರಯಾಣ ವೆಚ್ಚಗಳು | 30,00,000–00 | 23,70,042–00 | – | 28,00,000–00 | 32,00,000–00 |
| 8. ವಾರ್ಷಿಕ ನಿರ್ವಹಣೆ, ಕಛೇರಿ ನಿರ್ವಹಣೆ ಹಾಗೂ ವಿಶೇಷ ಸಮಾರಂಭಗಳ ವೆಚ್ಚ | 1,50,00,000–00 | 93,10,557–10 | – | 1,50,00,000–00 | 1,50,00,000–00 |
| 9. ಸಾದಿಲ್ವಾರು | 13,00,000–00 | 12,41,897–90 | – | 15,00,000–00 | 18,00,000–00 |
| 10. ಲೆಕ್ಕ ಪರಿಶೋಧನಾ ಶುಲ್ಕ, ಸವಕಳಿ ಇತ್ಯಾದಿ | | | | | |
| ಅ) ಲೆಕ್ಕ ಪರಿಶೋಧನಾ ಶುಲ್ಕ | 15,00,000–00 | 9,61,308–00 | – | 13,00,000–00 | 15,00,000–00 |
| ಆ) ಪೀಠೋಪಕರಣಗಳ ಮೇಲೆ ಸವಕಳಿ | 50,00,000–00 | 41,58,805–36 | – | 40,00,000–00 | 40,00,000–00 |
| ಇ) ವಾರ್ಷಿಕ ವಂತಿಕೆಗಳು | 3,00,000–00 | 1,43,600–00 | – | 3,00,000–00 | 3,00,000–00 |
| ಈ) ಸಾಲ ವಸೂಲಿ ಮತ್ತು ಬ್ಯಾಂಕ್ ಚಾರ್ಜ್ | 21,00,000–00 | 19,33,284–88 | – | 25,00,000–00 | 21,00,000–00 |
| ಉ) ಕಾನೂನು, ವೃತ್ತಿ ವೆಚ್ಚ ಮತ್ತು ದಾವಾ ಹಾಗೂ ಅಮಲ್ಜಾರಿ ವೆಚ್ಚ | 58,00,000–00 | 64,95,441–50 | 6,95,441–50 | 70,00,000–00 | 73,00,000–00 |
| 11. ಠೇವಣಿಗಳ ಮೇಲೆ ಕೊಡಬಹುದಾದ ಬಡ್ಡಿ/ ಕಮೀಷನ್ | 34,18,00,000–00 | 28,59,06,178–73 | – | 29,65,00,000–00 | 27,80,00,000–00 |
| | 50,20,00,000–00 | 41,54,09,395–96 | 6,95,441–50 | 46,20,00,000–00 | 46,00,00,000–00 |
| 12. ಆದಾಯ ತೆರಿಗೆ | 1,80,00,000–00 | 8,00,000–00 | – | 1,80,00,000–00 | 1,00,00,000–00 |
| **ಒಟ್ಟು** | **52,00,000–00** | **41,62,09,395–96** | **–** | **48,00,00,000–00** | **47,00,00,000–00** |

**2023–2024ನೇ ಸಾಲಿನಲ್ಲಿ ಬರಬಹುದಾದ ನಿವ್ವಳ ಲಾಭ ಹಾಗೂ 2024–2025ನೇ ಸಾಲಿನ ತಾತ್ಕಾಲಿಕ ನಿವ್ವಳ ಲಾಭ**

(ರೂ.ಗಳಲ್ಲಿ)

| ಕ್ರ. ಸಂ. | | ವಿವರ | 2023–2024 ಮೊಬಲಗು | 2024–2025 ಮೊಬಲಗು |
|---|---|---|---|---|
| 1. | ಅ) | ಸಾಲಗಳ ಮೇಲೆ ಬರಬಹುದಾದ ಬಡ್ಡಿ | 39,00,00,000–00 | 29,00,00,000–00 |
| | | ಬಡ್ಡಿ ರಿಯಾಯಿತಿ | 1,00,00,000–00 | 1,00,00,000–00 |
| | | | 38,00,00,000–00 | 28,00,00,000–00 |
| | ಆ) | ಸಂಚಯಗಳ ಮೇಲೆ ಬರಬಹುದಾದ ಬಡ್ಡಿ | 15,00,00,000–00 | 17,00,00,000–00 |
| | ಇ) | ಇತರೆ ಮೂಲಗಳಿಂದ | 5,00,00,000–00 | 5,00,00,000–00 |
| | | ಒಟ್ಟು ಆದಾಯಗಳು | 58,00,00,000–00 | 50,00,00,000–00 |
| 2. | | ವ್ಯಯದ ಪಟ್ಟಿ ರೀತ್ಯಾ | 46,20,00,000–00 | 46,00,00,000–00 |
| 3. | | ಉಳಿಯಬಹುದಾದ ನಿವ್ವಳ ಲಾಭ (ತೆರಿಗೆ ಮೊದಲು) | 11,80,00,000–00 | 4,00,00,000–00 |
| 4. | | ತೆರಿಗೆ | 1,80,00,000–00 | 1,00,00,000–00 |
| 5. | | ತೆರಿಗೆ ನಂತರದ ನಿವ್ವಳ ಲಾಭ | **10,00,00,000–00 | 3,00,00,000–00 |

****ಕ್ರೋಢಿಕೃತ ನಿವ್ವಳ ಲಾಭ ರೂ. 2.00 ಕೋಟಿ**

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜರವರು ಮಾತನಾಡಿ, ಸದರಿ ಸಾಲಿನಲ್ಲಿ ಬ್ಯಾಂಕಿನ ಎನ್.ಪಿ.ಎ. ಮೊತ್ತವನ್ನು ಕಡಿಮೆ ಮಾಡುವ ಉದ್ದೇಶದಿಂದ ದೊಡ್ಡ ಮೊತ್ತದ ಸಾಲ ಖಾತೆಗಳ ಮೇಲೆ ಸೆಕ್ಷನ್ 70ರಡಿ ತೆಗೆದುಕೊಂಡ ವಸೂಲಾತಿ ಕ್ರಮಗಳಿಂದಾಗಿ, ದಾವಾ ಹಾಗೂ ಅಮಲ್ಜಾರಿ ವೆಚ್ಚ ಅಧಿಕವಾಗಿ ಪಾವತಿಸಿರುವುದರ ಜೊತೆಗೆ ಸಲಹೆಗಾರರುಗಳಾದ ನಾನು, ಐ.ಟಿ. ಸಲಹೆಗಾರರು ಮತ್ತು ಶ್ರೀ ಯುತ ಪಿ.ಎಲ್. ಚೌಧರಿಯವರ ಮಾಸಿಕ ಸಂಭಾವನೆಗಳು, ಪ್ಯಾನಲ್ ವಕೀಲರಿಗೆ ಪಾವತಿಸುವ ವೃತ್ತಿ ಶುಲ್ಕಗಳು ಸೇರಿ ರೂ.6,95,441–50 ಹೆಚ್ಚಿಗೆ ಖರ್ಚಾಗಿರುತ್ತದೆ. ದಾವಾ ಹಾಗೂ ಅಮಲ್ಜಾರಿ ವೆಚ್ಚಗಳನ್ನು ಈಗ ಬ್ಯಾಂಕು ಭರಿಸಿದ್ದರೂ ಸಹ ಮುಂದೆ ಸುಸ್ತಿದಾರರಿಂದ ವಸೂಲಿ ಮಾಡಲಾಗುವುದೆಂದು ತಿಳಿಸಿ ಅನುಮೋದಿಸುವಂತೆ ಕೋರಿದರು..

ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ .ಕೆ ಸದಸ್ಯತ್ವ ಸಂಖ್ಯೆ 105293 ರವರು ಮಾತನಾಡಿ, ಕಾನೂನು, ವೃತ್ತಿ ವೆಚ್ಚ ಮತ್ತು ದಾವಾ ಹಾಗೂ ಅಮಲ್ಜಾರಿ ವೆಚ್ಚ ಬಾಬ್ತಿನಲ್ಲಿ 2022–2023ನೇ ಸಾಲಿಗೆ ರೂ.58,00,000–00 ಮಂಜೂರಾಗಿದ್ದು, ಸಾಲಿನಾಂತ್ಯಕ್ಕೆ ಸದರಿ ಬಾಬ್ತಿನಡಿ ರೂ.64,95,441–50 ಗಳು ಖರ್ಚಾಗಿ ರೂ.6,95,441–50 ಗಳು ಹೆಚ್ಚಿಗೆ ಖರ್ಚಾಗಿರುತ್ತದೆ. ಈ ಹೆಚ್ಚಿನ ಖರ್ಚಿಗೆ ಆಡಳಿತ ಮಂಡಲಿಯವರು ನೀಡಿರುವ ಸಮಜಾಯಿಷಿಕೆ ಸರಿ ಇರುವುದರಿಂದ ಅನುಮೋದನೆ ನೀಡಬಹುದು ಮತ್ತು 2023–2024ನೇ ಸಾಲಿನ ಮುಂಗಡ ಪತ್ರಕ್ಕೆ ಹಾಗೂ 2024–2025ನೇ ಸಾಲಿನ ತಾತ್ಕಾಲಿಕ ಮುಂಗಡ ಪತ್ರಕ್ಕಾಗಿ ಮಂಡಿಸಿರುವ ಕಾರಣವನ್ನು ಸಮರ್ಪಕವಾಗಿ ತಿಳಿಸಿರುವುದರಿಂದ ಮಂಜೂರಾತಿ ನೀಡಬಹುದೆಂದು ಸೂಚಿಸಿದ ಮೇರೆಗೆ ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ಮತ್ತು ಸದಸ್ಯರಾದ ಶ್ರೀ ಮಹೇಂದ್ರ ಕುಮಾರ್ .ವಿ.ಕೆ. ಸದಸ್ಯತ್ವ ಸಂಖ್ಯೆ 11608 ರವರುಗಳು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು.

**10) 2022–2023ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮಾಡುವ ಬಗ್ಗೆ:**

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ವಿಷಯವನ್ನು ಸಭೆಯಲ್ಲಿ ಮಂಡಿಸುತ್ತಾ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 26ರಲ್ಲಿ ಮುದ್ರಿತವಾಗಿರುವುದನ್ನು ತಿಳಿಸಿ, ಬ್ಯಾಂಕಿನ ವ್ಯಾವಹಾರಿಕ ಲಾಭ ರೂ.5.76 ಕೋಟಿಗಳಿದ್ದು, ವರದಿ ಸಾಲಿನಲ್ಲಿ ಅನುತ್ಪಾದಿತ ಆಸ್ತಿಗಳು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ವರ್ಗೀಕರಣಗೊಂಡಿದ್ದರಿಂದ ವರದಿ ಸಾಲಿನಲ್ಲಿ ರೂ.0.86 ಕೋಟಿಗಳಷ್ಟು ಎನ್.ಪಿ.ಎ. ಮೊತ್ತವನ್ನು ಕಾದಿರಿಸಲಾಗಿದೆ. ಇದರ ಜೊತೆಗೆ ನಾವು ರೂ.10.00 ಕೋಟಿಗಳ ಠೇವಣಿ ಮಾಡಿದ್ದ PMC ಬ್ಯಾಂಕು ತೊಂದರೆಗೆ ಒಳಗಾದ ಕಾರಣ ಅದನ್ನು ಅನುತ್ಪಾದಿತ ಹೂಡಿಕೆಯೆಂದು ಪರಿಗಣಿಸುವಂತೆ ಆರ್.ಬಿ.ಐ. ನಿರ್ದೇಶಿಸಿರುವುದರಿಂದ ಅದಕ್ಕೂ ಸಹ ರೂ.2.40 ಕೋಟಿಗಳನ್ನು ಕಾದಿರಿಸಬೇಕಾಯಿತು ಹಾಗೂ ಸರ್ಕಾರಿ ಭದ್ರತೆಗಳ ಮೇಲಿನ ಸವಕಳಿಗಾಗಿ ರೂ.2.05 ಕೋಟಿಗಳಷ್ಟು ಕಾದಿರಿಸಿರುವ ಎಲ್ಲಾ ಕಾರಣಗಳಿಂದಾಗಿ ರೂ.5.31 ಕೋಟಿಗಳಷ್ಟು ಅವಕಾಶ ಕಲ್ಪಿಸಿದರ ಜೊತೆಗೆ ರೂ.0.08 ಕೋಟಿಗಳ ಆದಾಯ ತೆರಿಗೆ ಪಾವತಿಸಿದ ನಂತರ ರೂ.0.37 ಕೋಟಿಗಳು ಬ್ಯಾಂಕಿನ ನಿವ್ವಳ ಲಾಭವಾಗಿರುತ್ತದೆ.

ಬ್ಯಾಂಕಿನ ಬೈಲಾ ಸಂಖ್ಯೆ 105 ರನ್ವಯ "ನಿವ್ವಳ ಲಾಭವನ್ನು ವಿಂಗಡಣೆ ಮಾಡುವುದಕ್ಕೆ ಮುಂಚೆ, ಹಿಂದಿನ ವರ್ಷದ ಅಥವಾ ವರ್ಷಗಳಲ್ಲಿನ ಕ್ರೋಢೀಕೃತ ನಷ್ಟವನ್ನು ಈ ನಿವ್ವಳ ಲಾಭದಲ್ಲಿ ವಜಾ ಮಾಡಿ ಉಳಿದ ಲಾಭವನ್ನು ಮಾತ್ರ ವಿಭಜನೆ ಮಾಡತಕ್ಕದ್ದು". ಇದರನ್ವಯ 2021–2022ನೇ ಸಾಲಿನಲ್ಲಿ ಬ್ಯಾಂಕು ರೂ.7.89 ಕೋಟಿಗಳ ನಷ್ಟವನ್ನು ಅನುಭವಿಸಿದ್ದು, 2022–2023ನೇ ಸಾಲಿನಲ್ಲಿ ಬ್ಯಾಂಕು ರೂ.0.37 ಕೋಟಿಗಳ ನಿವ್ವಳ ಲಾಭಗಳಿಸಿದ್ದರೂ, ಹಿಂದಿನ ಸಾಲಿನ ನಷ್ಟವನ್ನು ಕಳೆದು ಸಾಲಿನಾಂತ್ಯಕ್ಕೆ ರೂ.7.52 ಕೋಟಿಗಳ ಕ್ರೋಢೀಕೃತ ನಿವ್ವಳ ನಷ್ಟವನ್ನು ಹೊಂದಿರುವುದರಿಂದ ಲಾಭವನ್ನು ವಿಂಗಡಣೆ ಮಾಡಲು ಸಾಧ್ಯವಿರುವುದಿಲ್ಲ. ಆದ ಕಾರಣ ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸಿರುವುದಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕ್ ತನ್ನಪತ್ರ ಸಂಖ್ಯೆ DCBS(BG)No.1662/09.01.144/2018–2019 ದಿನಾಂಕ 23–01–2019ರ ಮೂಲಕ ಬ್ಯಾಂಕಿನ ಮೇಲೆ ಮೇಲುಸ್ತುವಾರಿ ಕ್ರಮ (SAF-Supervisory Action Framework)ವನ್ನು ಜಾರಿಗೊಳಿಸುವ ಮೂಲಕ ಹಲವಾರು ನಿರ್ದೇಶನಗಳನ್ನು ನೀಡಿರುತ್ತದೆ. ತದ ನಂತರ ಪತ್ರ ಸಂಖ್ಯೆ DOS(UCB)(BG)(SAF) No.75550/12.07.144/2021–22 ದಿನಾಂಕ 22–07–2021ರ ನಿರ್ದೇಶನದನ್ವಯ ಬ್ಯಾಂಕಿನಲ್ಲಿ ನಿವ್ವಳ ಎನ್.ಪಿ.ಎ. ಶೇಕಡ 10 ಕ್ಕಿಂತ ಹೆಚ್ಚಿಗೆ ಇರುವುದರಿಂದ ಡಿವಿಡೆಂಡ್ ಘೋಷಣೆ ಮಾಡದಿರಲು ನಿರ್ದೇಶಿಸಿರುತ್ತದೆಂದು ವಿವರಿಸಿ, ವರದಿ ಸಾಲಿನಲ್ಲಿ ಬ್ಯಾಂಕು ಲಾಭಗಳಿಸದೇ ಇರುವುದರಿಂದ ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸಿರುವುದಿಲ್ಲವೆಂದು ವಿವರಗಳನ್ನು ಸಭೆಯ ಮುಂದೆ ಮಂಡಿಸಿ, ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸದಿರುವುದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.

ಸಭೆಯಲ್ಲಿ ವಿಷಯವನ್ನು ಚರ್ಚಿಸಿ, ಬ್ಯಾಂಕು 2022–2023ನೇ ಸಾಲಿನಲ್ಲಿ ರೂ.5.76 ಕೋಟಿಗಳ ವ್ಯಾವಹಾರಿಕ ಲಾಭ ಗಳಿಸಿದ್ದರೂ ಸಹ, ಅನುತ್ಪಾದಿತ ಆಸ್ತಿಗಳು ಮತ್ತು ಅನುತ್ಪಾದಿತ ಹೂಡಿಕೆಗಳಿಗಾಗಿ ರೂ.5.31 ಕೋಟಿಗಳಷ್ಟು ಅವಕಾಶ ಕಲ್ಪಿಸಿದರ ಜೊತೆಗೆ ರೂ.0.08 ಕೋಟಿಗಳ ಆದಾಯ ತೆರಿಗೆ ಪಾವತಿಸಿದ ನಂತರ ರೂ.0.37 ಕೋಟಿಗಳ ನಿವ್ವಳ ಲಾಭ ಗಳಿಸಿದ್ದರೂ, ಹಿಂದಿನ ಸಾಲಿನ ನಷ್ಟವನ್ನು ಕಳೆದು ಸಾಲಿನಾಂತ್ಯಕ್ಕೆ ರೂ.7.52 ಕೋಟಿಗಳ ಕ್ರೋಢೀಕೃತ ನಿವ್ವಳ ನಷ್ಟ ಉಂಟಾಗಿರುವುದರಿಂದ 2022–2023ನೇ ಸಾಲಿಗೆ ಯಾವುದೇ ನಿವ್ವಳ ನಫೆ ವಿಲೇವಾರಿ ಮಾಡದಿರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಬ್ಯಾಂಕು ನಿವ್ವಳ ನಷ್ಟ ಹೊಂದಿರುವುದರಿಂದ ಆಡಳಿತ ಮಂಡಲಿಯು ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸದೆ ಇರುವುದನ್ನು ಒಪ್ಪಬಹುದೆಂದು ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ ಸದಸ್ಯತ್ವ ಸಂಖ್ಯೆ 10526 ರವರು ಒಪ್ಪಿಗೆ ಸೂಚಿಸಿದಾಗ, ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ .ಕೆ. ಸದಸ್ಯತ್ವ ಸಂಖ್ಯೆ 105293 ರವರು ಅನುಮೋದಿಸಿದ ಮೇರೆಗೆ 2022–2023ನೇ ಸಾಲಿಗೆ ಯಾವುದೇ ನಿವ್ವಳ ನಫೆ ವಿಲೇವಾರಿಯನ್ನು ಮಾಡದಂತೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**11) ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ಪರಿಶೀಲಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಲ್. ವೆಂಕಟಾಚಲಪತಿಯವರು ವಿಷಯವನ್ನು ಮಂಡಿಸಿ, ವಿವರಣೆಯನ್ನು ನೀಡುತ್ತಾ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 10 ಮತ್ತು 11 ರಲ್ಲಿ ವಿವರಣೆಗಳನ್ನು ನೀಡಲಾಗಿರುತ್ತದೆ. ಅದರಂತೆ ವರದಿ ಸಾಲಿನಾರಂಭದಲ್ಲಿ ಒಟ್ಟು ಸದಸ್ಯರ ಸಂಖ್ಯೆ 36622 ಇದ್ದು, ವರದಿ ಸಾಲಿನಲ್ಲಿ 253 ಸದಸ್ಯರು ಹೊಸದಾಗಿ ನೊಂದಣಿಯಾಗಿದ್ದು, 784 ಸದಸ್ಯರು ತಮ್ಮ ಸದಸ್ಯತ್ವವನ್ನು ರದ್ದು ಪಡಿಸಿಕೊಂಡಿದ್ದು ಸಾಲಿನಾಂತ್ಯಕ್ಕೆ 36091 ಸದಸ್ಯರಿರುತ್ತಾರೆ. ಸದಸ್ಯತ್ವವನ್ನು ರದ್ದು ಪಡಿಸಿದವರಲ್ಲಿ ಕೆಲವರು ದೈವಾಧೀನರಾಗಿದ್ದು, ಇನ್ನು ಕೆಲವರು ಷೇರು ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಂಡ ಕ್ರಮಗಳಿಂದಾಗಿ ಹಾಗೂ ಮತ್ತೆ ಕೆಲವರು ಅನಿವಾರ್ಯ ಕಾರಣಗಳಿಂದ ತಮ್ಮ ಸದಸ್ಯತ್ವವನ್ನು ರದ್ದುಪಡಿಸಿಕೊಂಡಿರುತ್ತಾರೆಂದು ತಿಳಿಸಿ, ಬ್ಯಾಂಕಿನಲ್ಲಿ ಸಾಲ ಸೌಲಭ್ಯ ಪಡೆಯುವವರಿಗೆ ಮಾತ್ರ ಸದಸ್ಯತ್ವ ನೀಡುತ್ತಿದ್ದು, ವರದಿಸಾಲಿನಲ್ಲಿ ಸಾಲ ಮಂಜೂರಾತಿ ಮಾಡಿರುವ 253 ಸದಸ್ಯರಿಗೆ ಮಾತ್ರ ಸದಸ್ಯತ್ವ ನೀಡಿರುವ ಕಾರಣ ಷೇರು ಬಂಡವಾಳವು ಆರಂಭದ ರೂ.16.28 ಕೋಟಿಗಳಿಂದ ರೂ.15.97 ಕೋಟಿಗಳಿಗೆ ಕುಸಿದಿದ್ದು, ಷೇರು ಸಂಗ್ರಹಣೆಯಲ್ಲಿ ಸುಮಾರು ರೂ.0.31 ಕೋಟಿಗಳಷ್ಟು ಕಡಿಮೆಯಾಗಿದೆಯೆಂದು ವಿವರಿಸಿ, ಸನ್ಮಾನ್ಯ ಸದಸ್ಯರು ಪರಿಶೀಲಿಸಬೇಕೆಂದು ಕೋರಿದರು.

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜರವರು ಮಾತನಾಡಿ, ಬ್ಯಾಂಕಿನಲ್ಲಿ ಸಾಲ ನೀಡಲು ಇನ್ನೂ ಸುಮಾರು ರೂ.155.00 ಕೋಟಿಗಳಷ್ಟು ಹೆಚ್ಚುವರಿ ಮೊತ್ತವಿರುವುದರಿಂದ, ಸನ್ಮಾನ್ಯ ಸದಸ್ಯರುಗಳು ಸಾಲದ ಪ್ರಸ್ತಾವನೆಗಳನ್ನು ತರುವಂತೆ ಹಾಗೂ ಇತರರನ್ನು ಬ್ಯಾಂಕಿಗೆ ಪರಿಚಯಿಸುವ ಮೂಲಕ ಸದಸ್ಯತ್ವ, ಷೇರು ಹಣ ಮತ್ತು ಸಾಲ ಮತ್ತು ಮುಂಗಡಗಳ ಹೆಚ್ಚಳಕ್ಕೆ ಸಹಕರಿಸಬೇಕೆಂದು ವಿನಂತಿಸಿದರು.

ಸದಸ್ಯರಾದ ಶ್ರೀ ಗೋಡಪ್ಪ ತೋಟಗೆರೆ ಸದಸ್ಯತ್ವ ಸಂಖ್ಯೆ 110071 ರವರು ಈ ವಿವರವು ಬ್ಯಾಂಕಿನ ದಾಖಲೆಗಳಲ್ಲಿ ಇರುವುದನ್ನೇ ನೀಡಿರುವುದರಿಂದ ಮತ್ತು ಲೆಕ್ಕಪರಿಶೋಧಕರೂ ಸಹ ಇದನ್ನು ದೃಢಪಡಿಸಿರುವುದರಿಂದ ಈ ವಿವರವನ್ನು ಒಪ್ಪಬಹುದೆಂದು ಸೂಚಿಸಿದ ಮೇರೆಗೆ ಸದಸ್ಯರಾದ ಶ್ರೀ ಮಹೇಂದ್ರ ಕುಮಾರ್ ವಿ.ಕೆ. ಸದಸ್ಯತ್ವ ಸಂಖ್ಯೆ 11608 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**12) ನಿರ್ದೇಶಕ ಮಂಡಲಿ ಸದಸ್ಯರಿಗೆ ಮತ್ತು ಪದಾಧಿಕಾರಿಗಳಿಗೆ 2022–2023ನೇ ಸಾಲಿನಲ್ಲಿ ನೀಡಿರುವ ಸಂಭಾವನೆ, ಪ್ರಯಾಣ ಹಾಗೂ ದಿನಭತ್ಯೆಯ ಮೇಲಿನ ವರದಿಯನ್ನು ಪರಿಶೀಲಿಸುವುದು:**

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ವಿಷಯವನ್ನು ಸಭೆಯಲ್ಲಿ ಮಂಡಿಸುತ್ತಾ, ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರ ಸೇವೆಯು ಗೌರವಯುತವಾದುದಾರರೂ, ನಿರ್ದೇಶಕರುಗಳು ಸಭೆಗಳಿಗೆ

ಹಾಜರಾದಾಗ ಅಥವಾ ನಿರ್ದೇಶಕರಾಗಿ ಬ್ಯಾಂಕಿನ ಯಾವುದೇ ಕೆಲಸಗಳನ್ನು ನಿರ್ವಹಿಸಿದಾಗ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ಬ್ಯಾಂಕಿನ ಬೈಲಾ ಸಂಖ್ಯೆ 53ರಲ್ಲಿ ನಿಗದಿಪಡಿಸಿರುವ ಅನ್ವಯ ನಿರ್ದೇಶಕರುಗಳು ಸಭಾಭತ್ಯೆ, ದಿನ ಭತ್ಯೆ ಹಾಗೂ ಪ್ರವಾಸಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಇದರನ್ವಯ 2022–2023ನೇ ಸಾಲಿನಲ್ಲಿ ಈ ಬಾಬ್ತಿನಡಿ ರೂ.10.81 ಲಕ್ಷಗಳಷ್ಟು ವೆಚ್ಚ ಮಾಡಲಾಗಿರುತ್ತದೆ. ವರದಿ ಸಾಲಿನಲ್ಲಿ ಆಡಳಿತ ಮಂಡಲಿ ಮತ್ತು ಇತರೆ ಉಪ ಸಮಿತಿಗಳು ಒಟ್ಟಾರೆಯಾಗಿ ವಿವಿಧ 66 ಸಭೆಗಳನ್ನು ನಡೆಸಿದ್ದು, ಇದರ ಜೊತೆಗೆ ಭದ್ರತಾ ಸಾಲಗಳ ಪ್ರಸ್ತಾವನೆಗಳಿಗೆ ಆಧಾರವಾಗಿ ನೀಡಿರುವ ಸ್ಥಿರಾಸ್ತಿ ಮತ್ತು ಕೈಗಾರಿಕೆಗಳಿಗೆ ಆಡಳಿತ ಮಂಡಲಿ ಸದಸ್ಯರು ಭೇಟಿ ನೀಡಿ ಪರಿವೀಕ್ಷಣೆ ನಡೆಸುತ್ತಿದ್ದು, ಈ ಸಂಬಂಧ ಭತ್ಯೆಗಳನ್ನು ನೀಡಲಾಗಿದ್ದು, ಇದಕ್ಕೆ ಮಾನ್ಯ ಸದಸ್ಯರುಗಳು ಅನುಮತಿ ನೀಡಬೇಕೆಂದು ಕೋರಿದರು.

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ಅವರು ಮಾತನಾಡಿ, ಒಂದೇ ದಿನ ನಾಲ್ಕೈದು ಸಭೆಗಳನ್ನು ನಡೆಸಲಾಗುತ್ತಿದ್ದು ಒಂದೇ ಕನ್ವೆಯನ್ಸ್ ನೀಡುವ ಮೂಲಕ ವೆಚ್ಚಗಳನ್ನು ಕಡಿಮೆ ಮಾಡಲಾಗುತ್ತಿದೆಯೆಂದು ವಿವರಿಸಿದರು.

ಸದಸ್ಯರಾದ ಶ್ರೀ ಮಹೇಂದ್ರ ಕುಮಾರ್ ವಿ.ಕೆ. ಸದಸ್ಯತ್ವ ಸಂಖ್ಯೆ 11608 ರವರು ಒಪ್ಪಿಗೆ ಸೂಚಿಸಿ ಸದಸ್ಯರಾದ ಶ್ರೀ ಗೋಡಪ್ಪ ತೋಟಗೆರೆ ಸದಸ್ಯತ್ವ ಸಂಖ್ಯೆ 110071 ಮತ್ತು ಸದಸ್ಯರಾದ ಶ್ರೀ ವೀರಣ್ಣ ಸದಸ್ಯತ್ವ ಸಂಖ್ಯೆ 5029 ರವರುಗಳು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**13) ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಆಚರಿಸುವ ಬಗ್ಗೆ ಚರ್ಚಿಸುವುದು:**

ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯ ಸಾರಥಿಯವರು ವಿಷಯದ ವಿವರಣೆ ನೀಡುತ್ತಾ, ವಾರ್ಷಿಕ ವರದಿ ಪುಟ ಸಂಖ್ಯೆ 22 ರಲ್ಲಿ ತಿಳಿಸಿರುವಂತೆ, ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಈ ಹಿಂದೆಯೇ ಆಚರಿಸಬೇಕಾಗಿದ್ದು, ಕೋವಿಡ್–19ರ ಹಿನ್ನಲೆಯಲ್ಲಿ ಆಚರಿಸಲು ಸಾಧ್ಯವಾಗಿರುವುದಿಲ್ಲ. ಸುವರ್ಣ ಮಹೋತ್ಸವವನ್ನು ಆಚರಿಸಲು ನಮ್ಮ ಆಡಳಿತ ಮಂಡಲಿಗೆ ಅವಕಾಶ ದೊರೆತಿರುವುದು ನಮಗೆ ದೊರೆತಿರುವ ಒಂದು ಒಳ್ಳೆ ಅವಕಾಶವೆಂದು ಭಾವಿಸಲಾಗಿದ್ದು ಎಲ್ಲ ತಯಾರಿಗಳನ್ನು ಮಾಡಲಾಗುತ್ತಿದೆ. ಇಲಾಖೆ ಮತ್ತು ಆರ್.ಬಿ.ಐ. ನೊಂದಿಗೆ ಪತ್ರ ವ್ಯವಹಾರಗಳನ್ನು ನಡೆಸಲಾಗಿದ್ದು, ಅನುಮತಿ ದೊರೆಯುವ ಆಶಾಭಾವನೆ ಹೊಂದಿದ್ದೇವೆ. ಸಾಲ ಮಂಜೂರು ಮಾಡುವ ಬಗ್ಗೆ ಕೆಲವು ಸದಸ್ಯರು ಸಲಹೆಗಳನ್ನು ನೀಡಿರುವಂತೆ ನಮ್ಮ ಆಡಳಿತ ಮಂಡಲಿಯೂ ಸಹ 2 ಕೋಟಿಗಳನ್ನು ಮೀರಿ ಸಾಲ ನೀಡಬಾರದೆಂದು ಸೀಲಿಂಗ್ ಹಾಕಿಕೊಂಡಿದ್ದೇವೆ. ನಮ್ಮ ಈ ಆಡಳಿತ ಮಂಡಲಿ ಮಂಜೂರು ಮಾಡಿರುವ ಯಾವುದೊಂದು ಸಾಲ ಖಾತೆಯೂ ಸಹ ಎನ್.ಪಿ.ಎ. ಆಗಿಲ್ಲವೆಂದು ತಿಳಿಸಲು ನಮಗೆ ಹೆಮ್ಮೆಯ ಮತ್ತು ಸಂತೋಷದ ವಿಷಯವಾಗಿದೆ. ಹಿಂದಿನ ಸಾಲಗಳನ್ನು ವಸೂಲಿ ಮಾಡಲು ನಾವು ಎಲ್ಲಾ ರೀತಿಯ ಕಾನೂನು ಕ್ರಮಗಳನ್ನು ಕೈಗೊಂಡಿದ್ದು, ನ್ಯಾಯಾಲಯಗಳಿಗೆ ಓಡಾಡುತ್ತಿದ್ದೇವೆ. ನ್ಯಾಯಾಲಯಗಳೂ ಸಹ ಸಹಕಾರಿ ಬ್ಯಾಂಕುಗಳಿಗೆ ಸರಿಯಾದ ರೀತಿ ಸಹಕರಿಸಿದರೆ ಯಾವುದೇ ಸಹಕಾರಿ ಬ್ಯಾಂಕುಗಳು ಮುಳುಗುವುದಿಲ್ಲವೆಂದು ನ್ಯಾಯಾಲಯದ ಒಂದು ತೀರ್ಪನ್ನು ಸಭೆಗೆ ವಿವರಿಸಿ, ಇಷ್ಟೆಲ್ಲಾ ಕಷ್ಟಗಳ ನಡುವೆಯೂ ಲಾಭ ತರುವುದಕ್ಕೆ ಶ್ರಮಿಸುತ್ತಿರುವುದಾಗಿ ತಿಳಿಸಿ, ದೊಡ್ಡ ಮೊತ್ತದ ಸ್ಥಿರಾಸ್ತಿ ಸಾಲಗಳನ್ನು ನೀಡುವ ಮೊದಲು ಎರಡು ಮೌಲ್ಯ ಮಾಪಕರುಗಳಿಂದ ಸ್ಥಿರಾಸ್ತಿಗಳ ಮೌಲ್ಯಮಾಪನವನ್ನು ಮಾಡಿಸುವುದರ ಜೊತೆಗೆ, ಇಬ್ಬರು ಪ್ಯಾನಲ್ ವಕೀಲರುಗಳಿಂದ ಕಾನೂನು ಅಭಿಪ್ರಾಯಗಳನ್ನು ಪಡೆಯುತ್ತಿದ್ದು, ಹಿಂದೆ ಆಗಿರುವ ಯಾವುದೇ ತೊಂದರೆಗಳು ಮುಂದೆ ಆಗಬಾರದೆಂದು ಎಲ್ಲವನ್ನೂ ಕೂಲಂಕುಷವಾಗಿ ಪರಿಶೀಲಿಸಲಾಗುತ್ತಿದ್ದು, ಯಾವುದೇ ಬ್ಯಾಡ್ ಲೋನ್ ನೀಡುತ್ತಿಲ್ಲವಾದ್ದರಿಂದಲೇ ಒಂದು ಖಾತೆಯೂ ಸಹ ಎನ್.ಪಿ.ಎ. ಆಗಿರುವುದಿಲ್ಲ.

ಯಾವುದೇ ಒಂದು ಸಂಸ್ಥೆಯನ್ನು ಹುಟ್ಟು ಹಾಕಿದ **ಸಂಸ್ಥಾಪಕರಿಗೆ** ಅದರ **25ನೇ ವರ್ಷದ ಬೆಳ್ಳಿ ಹಬ್ಬ** ಆಚರಿಸಲು ಅವಕಾಶ ಸಿಗುವುದು ಅಪರೂಪ, ಆದರೆ ನಮ್ಮ ಬ್ಯಾಂಕಿನ ಸಂಸ್ಥಾಪಕರಾದ ಡಾ: ಕೆ.ಎಂ. ರಂಗಧಾಮ ಶೆಟ್ಟಿಯವರಿಗೆ ಬೆಳ್ಳಿಹಬ್ಬದ ನಂತರ 50ನೇ ವರ್ಷದ **ಸುವರ್ಣ ಮಹೋತ್ಸವವನ್ನೂ** ಸಹ ಆಚರಿಸಲು ಅವಕಾಶ ದೊರೆತಿರುವುದು ನಮ್ಮೆಲ್ಲರಿಗೂ ಹೆಚ್ಚಿನ ಸಂತೋಷದ ವಿಷಯವಾಗಿರುವುದರಿಂದ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಅತಿ ಶೀಘ್ರವಾಗಿ ಪ್ಯಾಲೇಸ್ ಗ್ರೌಂಡ್‌ನಲ್ಲಿ ವಿಜೃಂಭಣೆಯಿಂದ ಆಚರಿಸಬೇಕೆಂಬುದು ಆಡಳಿತ ಮಂಡಲಿಯ ಅಭಿಲಾಷೆಯಾಗಿದ್ದು, ಈ ಬಗ್ಗೆ ರೂಪು ರೇಷೆಗಳನ್ನು ಸಹ ಸಿದ್ಧಪಡಿಸಲಾಗುತ್ತಿದೆಯೆಂದು ತಿಳಿಸಿ, ಅವಶ್ಯವಿರುವ **"ಸುವರ್ಣ ಮಹೋತ್ಸವ ಉಪಸಮಿತಿ"** ಮತ್ತು **"ಸ್ಮರಣ ಸಂಚಿಕೆ ಉಪಸಮಿತಿ"** ಗಳನ್ನೂ ಸಹ ರಚಿಸಲಾಗಿದ್ದು ಕಾರ್ಯನಿರತವಾಗಿದ್ದೇವೆ.

ಬ್ಯಾಂಕಿನ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಹೊರತರುವ ಸ್ಮರಣ ಸಂಚಿಕೆಯ ಜಾಹೀರಾತಿಗಾಗಿ ಸಾರ್ವಜನಿಕರಿಂದ/ಸಂಘ ಸಂಸ್ಥೆಗಳಿಂದ ಹಣ ಸಂಗ್ರಹಿಸಿ, ಖರ್ಚು–ವೆಚ್ಚಗಳನ್ನು ಮಾಡಿದ ನಂತರ ಹೆಚ್ಚುವರಿಯಾಗಿ ಉಳಿಯುವ ಹಣವನ್ನು ಸುವರ್ಣ ಮಹೋತ್ಸವದ ಆಚರಣೆಗೆ ಉಪಯೋಗಿಸಿಕೊಳ್ಳಲು ಮತ್ತು ಜ್ಯೂಬಿಲಿ ನಿಧಿಯಲ್ಲಿರುವ ಮೊತ್ತ ರೂ.79.19 ಲಕ್ಷಗಳನ್ನು ಬಳಸಿಕೊಳ್ಳಲು ತಾತ್ಕಾಲಿಕ ಆಯ ವ್ಯಯ ಪಟ್ಟಿಯೊಂದಿಗೆ, ಸಂಬಂಧಿಸಿದ ಅಗತ್ಯ ದಾಖಲೆ ಪತ್ರಗಳೊಂದಿಗೆ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಆಚರಿಸಲು ಇಲಾಖೆಯಿಂದ ಆಡಳಿತಾತ್ಮಕ ಅನುಮತಿಗಾಗಿ ಪತ್ರ ವ್ಯವಹಾರ ನಡೆಸಲಾಗಿದೆ. ಇಲಾಖೆಯವರು ಮತ್ತೆ ಕೇಳಿರುವ ಕೆಲವು ದಾಖಲಾತಿಗಳಲ್ಲಿ ಒಂದಾದ ಸುವರ್ಣ ಮಹೋತ್ಸವದ ಆಚರಣೆಗೆ ಸಂಬಂಧಿಸಿದಂತೆ ಹಿಂದಿನ ವಾರ್ಷಿಕ ಮಹಾಸಭೆ/ಆಡಳಿತ ಮಂಡಲಿ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳ ಪ್ರತಿಗಳನ್ನು ಒದಗಿಸಬೇಕಾಗಿರುವುದರಿಂದ ಇಂದಿನ ವಾರ್ಷಿಕ ಮಹಾಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗಿದ್ದು, ಸನ್ಮಾನ್ಯ ಸದಸ್ಯರು ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಆಚರಿಸಲು ಅನುಮತಿ ನೀಡಬೇಕೆಂದು ಕೋರಿದರು.

ಮುಂದುವರಿದು, ಸ್ಮರಣ ಸಂಚಿಕೆಯ ಜಾಹೀರಾತಿಗಾಗಿ ಸಂಗ್ರಹಿಸುವ ಹಣದಲ್ಲಿ ಖರ್ಚುಗಳನ್ನು ಕಳೆದು ಉಳಿಯುವ ಹಣದ ಜೊತೆಗೆ ಜ್ಯೂಬಿಲಿ ನಿಧಿಯಲ್ಲಿರುವ ಮೊತ್ತ ರೂ.79.19 ಲಕ್ಷಗಳನ್ನು ಹೊಂದಿಸಿ, ಸುವರ್ಣ ಮಹೋತ್ಸವ ಸಮಾರಂಭವನ್ನು ಆಚರಿಸಲು ಹಣದ ಕೊರತೆಯಾಗುವುದರಿಂದ ವರದಿ ಸಾಲಿನಾಂತ್ಯಕ್ಕೆ **"ಡಿವಿಡೆಂಡ್ ಸಮತೋಲನ ನಿಧಿ"** ಯಲ್ಲಿರುವ ಮೊತ್ತ ರೂ.2.73 ಕೋಟಿಗಳಲ್ಲಿ ಭಾಗಶ: ಮೊತ್ತವನ್ನು ಬಳಸಿಕೊಂಡು ಸುವರ್ಣ ಮಹೋತ್ಸವ ಆಚರಿಸಲು ಮತ್ತು ಈ ಬಗ್ಗೆ ಇಲಾಖೆಯೊಂದಿಗೆ/ ಆರ್.ಬಿ.ಐ. ನೊಂದಿಗೆ ಪತ್ರ ವ್ಯವಹಾರ ನಡೆಸಿ ಅನುಮತಿ ಮತ್ತು ಮಂಜೂರಾತಿ ಪಡೆಯಲು ಮಹಾ ಸಭೆಯು ಅನುಮತಿ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಸದಾನಂದ ಶಾಸ್ತ್ರಿ ಕೆ. ಸದಸ್ಯತ್ವ ಸಂಖ್ಯೆ 105293 ರವರು ಬ್ಯಾಂಕಿನ ಸುವರ್ಣ ಮಹೋತ್ಸವದ ನೆನಪಿನ ಕಾಣಿಕೆಯನ್ನು ಯಾವ ರೀತಿ ವಿತರಣೆ ಮಾಡಲಾಗುತ್ತದೆಂಬ ಬಗ್ಗೆ ವಿವರಿಸಬೇಕೆಂದು ತಿಳಿಸಿದಾಗ, ಉಪಾಧ್ಯಕ್ಷರು ಮಾತನಾಡಿ, ಬ್ಯಾಂಕಿನ" ಸುವರ್ಣ ಮಹೋತ್ಸವ" ದ ಅಂಗವಾಗಿ ಎಲ್ಲಾ ಸದಸ್ಯರಿಗೆ ಕಾನೂನಿನ ಇತಿಮಿತಿಯೊಳಗೆ ಉತ್ತಮ" ನೆನಪಿನ ಕಾಣಿಕೆ" ಯನ್ನು ನೀಡುವ ಉದ್ದೇಶ ಹೊಂದಲಾಗಿದೆ. ಒಂದು ವೇಳೆ ಸದಸ್ಯರು ಸುವರ್ಣ ಮಹೋತ್ಸವದ ಸಮಾರಂಭಕ್ಕೆ ಬರಲು ಸಾಧ್ಯವಾಗದೆ ಗೈರು ಹಾಜರಾದರೂ ಸಹ ನಂತರದ ದಿನಗಳಲ್ಲಿ ನೆನಪಿನ ಕಾಣಿಕೆಯನ್ನು ಶಾಖೆಗಳಲ್ಲಿ ನಿಗದಿತ ಅವಧಿಯೊಳಗೆ ಪಡೆಯಲು ಕಾಲಾವಕಾಶವನ್ನು ನೀಡಲಾಗುವುದೆಂದು ವಿವರಿಸಿ, ಸುವರ್ಣ ಮಹೋತ್ಸವದ ಬಗ್ಗೆ ಒಂದು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುವ ಉದ್ದೇಶದ ಜೊತೆಗೆ ವೇದಿಕೆಯಿಂದ ಹಿಡಿದು ಪ್ರತಿಯೊಂದು

ಸುವರ್ಣ ಬಣ್ಣದಲ್ಲಿರುವಂತೆ ಆಚರಿಸಬೇಕೆಂಬುದು ಆಡಳಿತ ಮಂಡಲಿಯ ಆಶಯವಾಗಿದ್ದು, ದಯವಿಟ್ಟು ಪ್ರತಿಯೊಬ್ಬ ಸದಸ್ಯರೂ ಸಹಕರಿಸಬೇಕೆಂದು ಕೋರಿದರು.

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜರವರು ಸುವರ್ಣ ಮಹೋತ್ಸವ ಸಮಾರಂಭವನ್ನು ಆಚರಿಸಲು ಹಣಕಾಸಿನ ಹೊಂದಾಣಿಕೆಯನ್ನು ಸವಿವರವಾಗಿ ಸಭೆಯ ಮುಂದೆ ಮಂಡಿಸಿದ ನಂತರ, ಸದಸ್ಯರಾದ ಶ್ರೀ ಎನ್. ಮಲ್ಲಿಕಾರ್ಜುನ. ಸದಸ್ಯತ್ವ ಸಂಖ್ಯೆ 10526 ರವರು ಮಾತನಾಡಿ, ಬ್ಯಾಂಕು ಸ್ಥಾಪನೆಯಾಗಿ 50 ವರ್ಷಗಳನ್ನು ಪೂರೈಸಿರುವ ಸಂಬಂಧ ಸುವರ್ಣ ಮಹೋತ್ಸವ ಸಮಾರಂಭವನ್ನು ಆಚರಿಸುತ್ತಿರುವುದು ಸ್ವಾಗತಾರ್ಹವಾಗಿರುವುದರಿಂದ, ಇದರ ಆಚರಣೆಗೆ ಆಡಳಿತ ಮಂಡಲಿಯು ತಿಳಿಸಿರುವಂತೆ ಸ್ಮರಣ ಸಂಚಿಕೆಯ ಜಾಹೀರಾತಿನಿಂದ ಬರುವ ಹಣದ ಜೊತೆಗೆ ಜ್ಯೂಬಿಲಿ ನಿಧಿಯಲ್ಲಿರುವ ಮೊತ್ತ ರೂ.79.19 ಲಕ್ಷಗಳನ್ನು ಹೊಂದಿಸಿ, ಸುವರ್ಣ ಮಹೋತ್ಸವ ಸಮಾರಂಭವನ್ನು ಆಚರಿಸಲು ಹಣದ ಕೊರತೆಯಾಗುವುದರಿಂದ, **"ಡಿವಿಡೆಂಡ್ ಸಮತೋಲನ ನಿಧಿ"** ಯಲ್ಲಿರುವ ಮೊತ್ತ ರೂ.2.73 ಕೋಟಿಗಳಲ್ಲಿ ಭಾಗಶ: ಮೊತ್ತವನ್ನು ಬಳಸಿಕೊಂಡು ಸುವರ್ಣ ಮಹೋತ್ಸವ ಆಚರಿಸಲು ಮತ್ತು ಈ ಬಗ್ಗೆ ಇಲಾಖೆಯೊಂದಿಗೆ/ಆರ್.ಬಿ.ಐ. ನೊಂದಿಗೆ ಪತ್ರ ವ್ಯವಹಾರ ನಡೆಸಿ ಅನುಮತಿ ಮತ್ತು ಮಂಜೂರಾತಿ ಪಡೆಯಲು ಒಪ್ಪಿಗೆ ಸೂಚಿಸಿದ ಮೇರೆಗೆ ಶ್ರೀಮತಿ ಸುಜಾತ ಶೆಟ್ಟಿ ಸದಸ್ಯತ್ವ ಸಂಖ್ಯೆ 121966 ಮತ್ತು ಶ್ರೀ ಸದಾನಂದ ಶಾಸ್ತ್ರಿ .ಕೆ. ಸದಸ್ಯತ್ವ ಸಂಖ್ಯೆ 105293 ರವರುಗಳು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**14] ಮುನ್ಸೂಚನೆಯ ಮೇರೆಗೆ ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಬಹುದಾದ ವಿಷಯಗಳು:**

ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಮಾತನಾಡಿ, ಮಹಾಸಭೆಯಲ್ಲಿ ಬ್ಯಾಂಕಿನ ಆಡಳಿತ ವಿಷಯದಲ್ಲಿ ಯಾವುದಾದರೂ ಚರ್ಚಿಸತಕ್ಕ ವಿಷಯವಿದ್ದರೆ 5 ದಿನಗಳ ಮುಂಚಿತವಾಗಿ ಚರ್ಚೆಯ ವಿಷಯವನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ (ಪ್ರಭಾರ) ಲಿಖಿತ ಮೂಲಕ ತಲುಪಿಸಬೇಕೆಂದು ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 6ರಲ್ಲಿ ತಿಳಿಸಿದ್ದ ಮೇರೆಗೆ ನಿಗದಿತ ಅವಧಿಯೊಳಗೆ ಎರಡು ಲಿಖಿತ ಪತ್ರಗಳು ಬಂದಿರುವುದಾಗಿ ತಿಳಿಸಿ, ಸದರಿ ಪತ್ರಗಳನ್ನು ಸಭೆಗೆ ವಿವರಿಸಿದರು.

[1] ಶ್ರೀ ಎಂ.ಎ. ಪ್ರಕಾಶ್, ಸದಸ್ಯತ್ವ ಸಂಖ್ಯೆ 2883 ರವರು ದಿನಾಂಕ 12-09-2023 ರಂದು ಪತ್ರ ನೀಡಿ, ಭಾರತೀಯ ರಿಸರ್ವ್ ಬ್ಯಾಂಕ್ ಕೊಟ್ಟಿರುವ ಅವಕಾಶವನ್ನು ಉಪಯೋಗಿಸಿಕೊಂಡು, ನಮ್ಮ ಬ್ಯಾಂಕನ್ನು ಸಣ್ಣ ಹಣಕಾಸಿನ ಬ್ಯಾಂಕ್ (Small Finance Bank) ಆಗಿ ಪರಿವರ್ತಿಸುವ ಬಗ್ಗೆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಚರ್ಚಿಸಿ ತೀರ್ಮಾನಿಸಬೇಕೆಂದು ತಿಳಿಸಿರುತ್ತಾರೆ.

[2] ಶ್ರೀ ಎನ್.ಕೆ. ಹರೀಶ್, ಸದಸ್ಯತ್ವ ಸಂಖ್ಯೆ 107961 ರವರು ದಿನಾಂಕ 16-09-2023 ರಂದು ಮೇಲ್ ಮೂಲಕ ಪತ್ರ ರವಾನಿಸಿ, ವಾರ್ಷಿಕ ಮಹಾ ಸಭೆಯಲ್ಲಿ Previous year report, Accounts and Profit appropriation, Balance sheet ಇತ್ಯಾದಿಗಳ ಬಗ್ಗೆ ಮಾತನಾಡಲು ಮತ್ತು ಮೌಲ್ಯಯುತ ಸಲಹೆಗಳನ್ನು ನೀಡಲು ಇಚ್ಛಿಸಿರುವುದರಿಂದ ಮಾತನಾಡಲು ಅವಕಾಶವನ್ನು ಕೋರಿರುತ್ತಾರೆ.

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ಅವರು ಮಾತನಾಡಿ, ಸದಸ್ಯರಾದ ಶ್ರೀ ಎನ್.ಕೆ. ಹರೀಶ್ ರವರಿಗೆ ಮೇಲ್ ಮೂಲಕ ಉತ್ತರಿಸಲಾಗಿದ್ದು, ಹತ್ತಿರವಿರುವ ಶಾಖೆಯಲ್ಲಿ ವಾರ್ಷಿಕ ವರದಿ ಮತ್ತು ಆಡಿಟ್ ಪುಸ್ತಕವನ್ನು ಪಡೆದುಕೊಂಡು, 53ನೇ ವಾರ್ಷಿಕ ಮಹಾ

ಸಭೆಗೆ ಹಾಜರಾಗಿ ಅವರ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡುವಂತೆ ಸ್ವಾಗತಿಸಲಾಗಿದೆ. ಇಂದು ಸದರಿ ಸದಸ್ಯರು ಮಹಾಸಭೆಯಲ್ಲಿ ಹಾಜರಿದ್ದು, ಮೌಲ್ಯಯುತ ಸಲಹೆಗಳನ್ನು ನೀಡಿರುವುದರಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸದಸ್ಯರಾದ ಶ್ರೀ ಎಂ.ಎ. ಪ್ರಕಾಶ್ ರವರಿಗೂ ಸಹ ಭಾರತೀಯ ರಿಸರ್ವ್ ಬ್ಯಾಂಕು ದಿನಾಂಕ 27–11–2014 ಮತ್ತು ದಿನಾಂಕ 05–12–2019ರ ಸುತ್ತೋಲೆಯಲ್ಲಿ, ಸಹಕಾರಿ ಬ್ಯಾಂಕುಗಳನ್ನು Small Finance Bank ಆಗಿ ಪರಿವರ್ತಿಸಲು ಇರುವ ಕೆಳಕಂಡ ಷರತ್ತುಗಳು ಮತ್ತಿತರೆ ಅಂಶಗಳನ್ನು ಮೇಲ್ ಮೂಲಕ ತಿಳಿಸಲಾಗಿದೆ.

1] 100 ಕೋಟಿ ನಿವ್ವಳ ಮೌಲ್ಯ (Networth)

2] CRAR – 15%.

3] Promoter contribution – each 5%, minimum 26%.

4] Priority Sector Advance 75%.

5] 50% advance upto Rs.0.25 crores.

6] Directors fit and proper condition – 10 years experience in financial fields.

7] Promoters contribution 40% - 5 years locking period – 500 crores Networth.

ಇವುಗಳ ಜೊತೆಗೆ, ಮೊದಲು ಬ್ಯಾಂಕು FSWM (Financially Sound Well Management) ಆಗಿರಬೇಕು. ಹಾಲಿ ಬ್ಯಾಂಕಿನ Net NPA 19.72% ಇದ್ದು, Net NPA ಶೇಕಡ 3 ಕ್ಕಿಂತ ಕಡಿಮೆ ಬಂದರೆ ಪ್ರಯತ್ನಿಸಬಹುದು. 2019 ರಿಂದ ಬ್ಯಾಂಕು ಆರ್.ಬಿ.ಐ.ನ ಮೇಲುಸ್ತುವಾರಿ (SAF- Supervisory Action Framework) ಅಡಿಯಲ್ಲಿದೆ. ನಮ್ಮ ಬ್ಯಾಂಕನ್ನು ಪರಿವರ್ತಿಸಲು ಹಲವಾರು ಅನಾನುಕೂಲಗಳಿವೆ. ಹಾಲಿ ಷೇರು ಬಂಡವಾಳ ಸುಮಾರು ರೂ.15.00 ಕೋಟಿಗಳಿದ್ದು, ಇನ್ನೂ ರೂ.185.00 ಕೋಟಿ ಷೇರು ಬಂಡವಾಳವನ್ನು ಸಂಗ್ರಹಿಸಬೇಕು ಆದರೆ ಇಂದಿನ ಹಣಕಾಸು ಪರಿಸ್ಥಿತಿಯಲ್ಲಿ ಇದು ಕಷ್ಟ ಸಾಧ್ಯವಾದ್ದರಿಂದ, ಮೊದಲು SAF ನಿಂದ ಹೊರ ಬಂದು ಸನ್ಮಾನ್ಯ ಸದಸ್ಯರಿಗೆ ಡಿವಿಡೆಂಡ್ ನೀಡೋಣ, ಮುಂದೆ ಈ ಬಗ್ಗೆ ಪ್ರಯತ್ನಿಸುವುದಾಗಿ ತಿಳಿಸಲಾಗಿದೆಯೆಂದು ವಿವರಿಸಿದರು.

ಸದಸ್ಯರಾದ ಶ್ರೀ ಶ್ರೀಕಾಂತ ಪೈ ಸದಸ್ಯತ್ವ ಸಂಖ್ಯೆ 14376 ರವರು ಮಾತನಾಡಿ, ನಾನು 25 ವರ್ಷಗಳ ಹಿಂದೆ ಸದಸ್ಯನಾಗಿದ್ದು, 4–5 ವರ್ಷಗಳಿಂದ ಡಿವಿಡೆಂಡ್ ನೀಡುತ್ತಿಲ್ಲ. ಕರೋನ ಹೋಗಿದ್ದು, ಹಲವಾರು ಬ್ಯಾಂಕುಗಳು ಸದಸ್ಯರಿಗೆ ಡಿವಿಡೆಂಡ್ ನೀಡುತ್ತಿದ್ದಾರೆ. ನಮ್ಮ ಬ್ಯಾಂಕು ಈ ವರ್ಷ ಲಾಭ ಗಳಿಸಿರುವುದರಿಂದ ಎಲ್ಲಾ ಸದಸ್ಯರ ಪರವಾಗಿ ಈ ವರ್ಷದಿಂದಲೇ ಡಿವಿಡೆಂಡ್ ನೀಡುವಂತೆ ವಿನಂತಿಸಿ, ಡಿವಿಡೆಂಡ್ ನೀಡಬಾರದೆಂಬ ಬಗ್ಗೆ ಆರ್.ಬಿ.ಐ. ಆದೇಶವಿದೆಯಾ? ಎಂದು ಪ್ರಶ್ನಿಸಿದರು.

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ರವರು ಮಾತನಾಡಿ, ಡಿವಿಡೆಂಡ್ ಬಗ್ಗೆ ಈಗಾಗಲೇ ವಿವರಿಸಲಾಗಿದೆ. ಮೂರು ವರ್ಷಗಳಿಂದ ಡಿವಿಡೆಂಡ್ ನೀಡದಿರುವುದು ನಮಗೂ ಗೊತ್ತಿದೆ. 2020ರಲ್ಲಿ ಡಿವಿಡೆಂಡ್‌ಗಾಗಿ ರೂ.2.73 ಕೋಟಿ ಹಣ ತೆಗೆದಿರಿಸಲಾಗಿದ್ದು, ಆರ್.ಬಿ.ಐ. ನಿರ್ದೇಶನದ ಮೇರೆಗೆ ಡಿವಿಡೆಂಡ್ ನೀಡಿರುವುದಿಲ್ಲ. SAF ನಿಂದ ಹೊರಬರದೆ ಡಿವಿಡೆಂಡ್ ನೀಡಲು ಸಾಧ್ಯವಿಲ್ಲ. ಹಾಗೆಯೇ ನಷ್ಟವಿರುವಾಗಲೂ ಸಹ ಡಿವಿಡೆಂಡ್ ನೀಡಲು ಸಾಧ್ಯವಿಲ್ಲ. ಈ ವರ್ಷ ರೂ.37.00 ಲಕ್ಷ ಲಾಭವಿದ್ದರೂ ಸಹ ಕ್ರೋಢೀಕೃತ ನಿವ್ವಳ ನಷ್ಟ ರೂ.7.52 ಕೋಟಿಗಳಿರುವುದರಿಂದ ಸಾಧ್ಯವಿಲ್ಲ.

ಲಾಭ ಇದ್ದು, SAF ಇದ್ದರೂ RBI ಅನುಮತಿ ಪಡೆದು 5 ರಿಂದ 10 ಪರ್ಸೆಂಟ್ ಡಿವಿಡೆಂಡ್ ನೀಡಬಹುದು. ಈ ರೀತಿ ಎರಡು ಸಲ ನೀಡಿರುತ್ತೇವೆ. ಮುಂದಿನ ವರ್ಷ ಡಿವಿಡೆಂಡ್ ನೀಡಲು ಕ್ರಮವಿಡಲಾಗುವುದೆಂದರು.

ಸದಸ್ಯರಾದ ಶ್ರೀ ಸತ್ಯನಾರಾಯಣ .ಕೆ ಸದಸ್ಯತ್ವ ಸಂಖ್ಯೆ 18795 ರವರು ಮಾತನಾಡಿ, ಕೋವಿಡ್ ಸಂಕಷ್ಟ ಕಳೆದು ನಾವೆಲ್ಲರೂ ಸೇರಲು ಅವಕಾಶ ಮಾಡಿಕೊಟ್ಟ ಭಗವಂತನಿಗೆ ಧನ್ಯವಾದಗಳನ್ನು ಸಮರ್ಪಿಸುತ್ತಾ, ಇಡೀ ಪ್ರಪಂಚಕ್ಕೆ, ದೇಶಕ್ಕೆ, ರಾಜ್ಯಕ್ಕೆ ಹಾಗೂ ಪ್ರತಿಯೊಬ್ಬರಿಗೂ ತೊಂದರೆಗಳಾಗಿದ್ದು, ಆರ್ಥಿಕವಾಗಿ ಸಾಮಾಜಿಕವಾಗಿ ಎಲ್ಲ ರೀತಿಯಲ್ಲೂ ಅದೋಗತಿಗೆ ಇಳಿದಿದ್ದ ಸಮಯದಲ್ಲಿ ದೇಶದ ನಾಯಕರು ಹೇಗೆ ದೇಶವನ್ನು ಕಾಪಾಡಿದರೋ, ಅದೇ ರೀತಿ ನಮ್ಮ ಬ್ಯಾಂಕನ್ನು ಸಂಸ್ಥಾಪಕರು, ಅಧ್ಯಕ್ಷರಾದ ಡಾ; ಕೆ.ಎಂ. ರಂಗಧಾಮ ಶೆಟ್ಟಿಯವರು ಕಾಪಾಡಿರುವುದರಿಂದ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು. ಒಂದೆರಡು ತಿಂಗಳುಗಳ ಹಿಂದೆ ಒಳ್ಳೆಯ ವ್ಯಕ್ತಿಗಳು ಸ್ಥಾಪಿಸಿ ಸದೃಢವಾಗಿದ್ದ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕು ಇಂದು ಅದೋಗತಿಗೆ ಇಳಿದಿದೆಯೆಂದರೆ ಯಾವ ಮಟ್ಟಕ್ಕೆ ಸಹಕಾರಿ ಬ್ಯಾಂಕುಗಳ ಪರಿಸ್ಥಿತಿ ಬಂದಿದೆಯೆಂದು ಅರ್ಥ  ಮಾಡಿಕೊಳ್ಳಬೇಕಾಗಿದೆಯೆಂದರು.

ಈ ಹೊಸ ಆಡಳಿತ ಮಂಡಲಿ ಬಂದ ನಂತರ ಮಂಜೂರು ಮಾಡಿರುವ ಯಾವುದೇ ಸಾಲ ಖಾತೆಗಳೂ ಸಹ ಎನ್.ಪಿ.ಎ. ಆಗಿರುವುದಿಲ್ಲವೆಂದು ಶ್ರೀ ಬಿ.ಆರ್. ನಾಗರಾಜ ರವರು ತಿಳಿಸಿದ್ದಾರೆ. ಉಪಾಧ್ಯಕ್ಷರೂ ಸಹ ಇದೇ ಮಾತನ್ನು ಹೇಳಿದ್ದು,  ಅವರು ಹೊಸದಾಗಿ ಬಂದಿರುವುದರಿಂದ ಅವರ ಮಾತನ್ನು ಮನ್ನಿಸಬಹುದೆನೋ, ಆದರೆ ಶ್ರೀ ಬಿ.ಆರ್. ನಾಗರಾಜ ಅವರ ಮಾತು ಒಪ್ಪಲು ಸಾಧ್ಯವಿಲ್ಲ, ಏಕೆಂದರೆ ಈಗಿನ ಆಡಳಿತ ಮಂಡಲಿ ಸದೃಢವಾಗಿದೆ, ಹೆಚ್ಚಿನ ಗಮನಹರಿಸುತ್ತಿದ್ದಾರೆಂದರೆ ಹಿಂದಿನ ಆಡಳಿತ ಮಂಡಲಿ ನಿಷ್ಪ್ರಯೋಜಕವಾಗಿತ್ತಾ? ಎಂದು ಪ್ರಶ್ನಿಸಿ ಅವರು ಗಮನ ಹರಿಸುತ್ತಿರಲಿಲ್ಲವಾ? ಅಂದಿನ ಆಡಳಿತ ಮಂಡಲಿಯಲ್ಲಿದ್ದ ಕೆಲವು ನಿರ್ದೇಶಕರುಗಳು ಇಂದಿನ ಆಡಳಿತ ಮಂಡಲಿಯಲ್ಲಿ ಕಾಣಿಸುತ್ತಿದ್ದು, ಹಿಂದೆ ಏನು ಕೆಲಸ ಮಾಡಿದ್ದಾರೆ. ಸಾಲಗಳು ಈ ಮಟ್ಟಕ್ಕೆ ಬರಲು ಅವರುಗಳು ಕಾರಣವೆಂದು ಬೆಟ್ಟು ತೋರಿಸಲು  ಇಷ್ಟಪಡುತ್ತೇನೆಂದರು.

ಈ ಹಿಂದೆ ಬ್ಯಾಂಕಿನ ಬಗ್ಗೆ ಟಿ.ವಿ ಚಾನಲ್‌ಗಳಲ್ಲಿ ಪ್ರಸಾರ ಬಂದಾಗ ನಾನು ಒಳಗೊಂಡಂತೆ ಎಲ್ಲ ಸದಸ್ಯರು ಭಯ ಭೀತರಾದೆವು. ಅನೇಕ ಠೇವಣಿದಾರರು ಠೇವಣಿಗಳನ್ನು ವಾಪಸ್ಸು ಪಡೆದರು. ಅಧ್ಯಕ್ಷರು ಕೂಡಲೇ ಪ್ರೆಸ್‌ಮೀಟ್ ಕರೆದು ಸದಸ್ಯರಿಗೆ ಬ್ಯಾಂಕಿನ ಸದೃಢತೆಯ ಬಗ್ಗೆ ವಿವರಣೆ ನೀಡಿದ ಕಾರಣ ಠೇವಣಿಗಳು ಮತ್ತೆ ಮರಳಿ ಬಂದಿದೆ. ಬ್ಯಾಂಕಿನ ಬಗ್ಗೆ ಈ ರೀತಿ ಅಪಪ್ರಚಾರ ಮಾಡಿದವರ ವಿರುದ್ಧ ಏನು ಕ್ರಮ ಕೈಗೊಂಡಿರುವಿರೆಂದು ಪ್ರಶ್ನಿಸಿ, ಮುಂದೆ ಇಂತಹ ಘಟನೆಗಳು ಮರು ಕಳಿಸದಂತೆ ಎಚ್ಚರಿಕೆ ವಹಿಸುವಂತೆ ಸಲಹೆ ನೀಡಿದರು.

ಇತ್ತೀಚೆಗೆ ಸಾಲ ನೀಡಿಸುವುದರಲ್ಲಿ ಬ್ರೋಕರ್‌ಗಳ ಹಾವಳಿ ಹೆಚ್ಚಾಗಿದ್ದು, ಅವರ ಬಗ್ಗೆ ಎಚ್ಚರ ವಹಿಸುವಂತೆ ಸೂಚಿಸುತ್ತಾ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ "ಬಿ" ಖಾತೆಯ ಸ್ವತ್ತುಗಳಿಗೆ ಸಾಲ ನೀಡುವುದಿಲ್ಲ. ಕೋ-ಆಪರೇಟಿವ್ ಬ್ಯಾಂಕಿಗೆ ಹೋಗಿ ಎನ್ನುತ್ತಾರೆ. ಅಲ್ಲಿ ಸಾಲ ನೀಡದಿದ್ದು, ಇಲ್ಲಿ ನೀಡಲು ಹೇಗೆ ಸಾಧ್ಯ? ಮೇಲ್ನೋಟಕ್ಕೆ ಇಲ್ಲಿ ದಾಖಲೆಗಳ ಸಮಸ್ಯೆಯಿರುವುದಾಗಿ ಗೋಚರಿಸುವುದು ಸಾಮಾನ್ಯ ಸಂಗತಿ. ನೀವು ಯಾವ ರೀತಿ ಅಂತಹ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ ಎಂಬ ಪ್ರಶ್ನೆಯನ್ನು ಮುಂದಿಟ್ಟರು.

ಸದಸ್ಯರು ಹೂಡಿಕೆ ಮಾಡುವ ಠೇವಣಿಗಳಲ್ಲಿ ರೂ.5.00 ಲಕ್ಷಗಳವರೆಗೆ ಮಾತ್ರ ವಿಮಾ ಸೌಲಭ್ಯಗಳಿದ್ದು, ಇನ್ನೂ ಹೆಚ್ಚಿನ ಠೇವಣಿಗಳನ್ನು ಮಾಡಿದ್ದರೆ ಹೆಚ್ಚಿನ ಹಣಕ್ಕೆ ಯಾರು ಹೊಣೆ, ನಮ್ಮ ಬ್ಯಾಂಕಿನಲ್ಲಿ ಕೇವಲ

ವಿಮಾ ಮಿತಿಯಂತೆ ರೂ.5.00 ಲಕ್ಷ ಮಾತ್ರ ಠೇವಣಿ ಮಾಡಿ ಉಳಿದ ಹಣವನ್ನು ಬೇರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಬೇಕಾ? ಸದಸ್ಯರ ಠೇವಣಿಗಳನ್ನು ಸಂರಕ್ಷಿಸುವ ಸಲುವಾಗಿ ಸಂಪೂರ್ಣ ಠೇವಣಿ ಮೊತ್ತಕ್ಕೆ ವಿಮೆ ಮಾಡಿಸಲು ಅವಕಾಶವಿದೆಯಾ, ಅದಕ್ಕೆ ಆರ್.ಬಿ.ಐ.ನ ಗೈಡ್‌ಲೈನ್ಸ್ ಏನಾದರೂ ಇದೆಯಾ, ಇಲ್ಲವೆ ಆಡಳಿತ ಮಂಡಲಿ ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಮಾಡಲು ಸಾಧ್ಯವಿದೆಯಾ ಎಂಬುದನ್ನು ಪರಿಶೀಲಿಸಬೇಕೆಂದು ಸಲಹೆಯೊಂದಿಗೆ ಮನವಿ ಮಾಡಿ, ಈ ರೀತಿ ನಮ್ಮ ಬ್ಯಾಂಕು ಗ್ಯಾರಂಟಿ ನೀಡುತ್ತೇವೆಂಬ ಆಶ್ವಾಸನೆಯನ್ನು ಸಭೆಯ ಮೂಲಕ ಸದಸ್ಯರಿಗೆ ನೀಡಿದರೆ ಹಿಂದೆ ಇದ್ದ ಠೇವಣಿಗಳು ಮರಳಿ ಬರಲು ಸಹಾಯವಾಗುತ್ತದೆಂದರು.

ಬ್ಯಾಂಕಿನ ಪೂರ್ಣ ಸಮಯದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ಅವರು ಮಾತನಾಡಿ, ಸದಸ್ಯರಾದ ಶ್ರೀ ಸತ್ಯನಾರಾಯಣ. ಕೆ ರವರ ಸಲಹೆ ಸೂಚನೆಗಳನ್ನು ಗಮನಿಸಲಾಗಿದೆಯೆಂದು ತಿಳಿಸಿ, ಕೋವಿಡ್–19ರ ಪರಿಣಾಮ ಪ್ರಪಂಚದ ಮತ್ತು ದೇಶದ ಆರ್ಥಿಕತೆಯ ಮೇಲೆ ಬೀರಿದಂತೆ ನಮ್ಮ ಬ್ಯಾಂಕಿನ ಮೇಲೂ ಪರಿಣಾಮ ಬೀರಿದ್ದು, ಸಾಲ ವಸೂಲಾತಿ ಕುಂಠಿತವಾಗಿ ಎನ್.ಪಿ.ಎ. ಪ್ರಮಾಣ ಏರಿಕೆಯಾಗಿದೆ. ಸಾಲ ನೀಡುವಲ್ಲಿ ಎಲ್ಲಾ ಮುನ್ನೆಚ್ಚರಿಕೆಯ ಕ್ರಮಗಳನ್ನು ವಹಿಸಲಾಗುತ್ತಿದೆ. ಸಾಲ ವಸೂಲಾತಿಯಲ್ಲಿಯೂ ಸಹ ನಾವು ಯಾವುದೇ ಮೃದು ಧೋರಣೆಯನ್ನು ಅನುಸರಿಸುವುದಿಲ್ಲ. RBI ಅಂಗ ಸಂಸ್ಥೆಯಾದ DICGC ಸಂಸ್ಥೆಯ ಮೂಲಕ ಠೇವಣಿಗಳಿಗೆ ಇರುವ ರೂ.5.00 ಲಕ್ಷಗಳ ವಿಮಾ ಮಿತಿಯು ಇಡೀ ದೇಶದಲ್ಲಿರುವ ಎಲ್ಲಾ ಬ್ಯಾಂಕುಗಳಿಗೆ ಅನ್ವಯಿಸುತ್ತಿದ್ದು, ನಮ್ಮ ಒಂದು ಬ್ಯಾಂಕಿಗೆ ಬದಲಾವಣೆ ಮಾಡಲು ಸಾಧ್ಯವಾಗುವುದಿಲ್ಲ. ನಮ್ಮ ಬ್ಯಾಂಕು ಸದೃಢವಾಗಿರುವುದರಿಂದ ಸದಸ್ಯರು ಹೂಡುವ ಹೆಚ್ಚಿನ ಠೇವಣಿಗಳಿಗೆ ಯಾವುದೇ ತೊಂದರೆಯಿರುವುದಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಗೋಡಪ್ಪ ತೋಟಗೆರೆ ಸದಸ್ಯತ್ವ ಸಂಖ್ಯೆ 110071 ರವರು ಮಾತನಾಡಿ, ಸಂಸ್ಥಾಪಕರು ಮತ್ತು ಅಧ್ಯಕ್ಷರಾದ ಡಾ: ಕೆ.ಎಂ.ರಂಗಧಾಮ ಶೆಟ್ಟಿ ಯವರು ಬ್ಯಾಂಕನ್ನು ಸುಮಾರು 53 ವರ್ಷಗಳ ಕಾಲ ಸುದೀರ್ಘವಾಗಿ ನಡೆಸಿಕೊಂಡು ಬಂದಿದ್ದಾರೆ, ಅದರಲ್ಲೂ ಈ ಆಡಳಿತ ಮಂಡಲಿ ಅಧಿಕಾರಕ್ಕೆ ಬಂದ ಮೇಲೆ ಕರೋನ ಅವಧಿಯಲ್ಲಿ ಬ್ಯಾಂಕುಗಳು ಮುಳುಗುವ ಪರಿಸ್ಥಿತಿಯಲ್ಲೂ ಬೆಂಗಳೂರು ನಗರದಲ್ಲಿರುವ ಸುಮಾರು 55 ಸಹಕಾರಿ ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕು Zero Processing Charges (ಶೂನ್ಯ ಪರಿಷ್ಕರಣಾ ಶುಲ್ಕ) ನೊಂದಿಗೆ ಸಾಲ ಮೇಳ ನಡೆಸಿರುತ್ತದೆ. ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿ ಯವರು ಬ್ಯಾಂಕಿನಲ್ಲಿ ಸಾಲವ ಸೂಲಾತಿಗಾಗಿ ಒಂದು **"ಕೇಂದ್ರೀಕೃತ ಸಾಲ ವಸೂಲಾತಿ ತಂಡ"** (CRT-Centralised Recovery Team) ವನ್ನು ರಚಿಸಿ, ಸಾಲ ವಸೂಲಾತಿಯನ್ನು ಉತ್ತಮವಾಗಿ ನಡೆಸಿ ಎನ್.ಪಿ.ಎ. ಕಡಿಮೆ ಮಾಡಿರುತ್ತಾರೆ. ಅವರನ್ನು ಬ್ಯಾಂಕಿನ ಕೆಲವು ಸಿಬ್ಬಂದಿಗಳು ಅಮಿತ್ ಶಾ ರವರಿಗೆ ಹೋಲಿಸುತ್ತಿದ್ದು, ಅವರು ಹೇಳಿದ ಕೆಲಸ ಕಾರ್ಯಗಳು ಯಾವುದೇ ಮುಲಾಜಿಲ್ಲದೆ ಆಗಲೇಬೇಕು. ಅಂತಹ ಕ್ರಿಯಾಶೀಲ ವ್ಯಕ್ತಿಯಾಗಿದ್ದು, ಅವರ ಸ್ವಪ್ರಯತ್ನ ಮತ್ತು ಎಲ್ಲ ನಿರ್ದೇಶಕರು ಸೇರಿ ಬ್ಯಾಂಕನ್ನು ಇನ್ನೂ ಉತ್ತುಂಗಕ್ಕೆ ಏರಿಸುವಂತಹ ಆಡಳಿತವನ್ನು ನಡೆಸಲೆಂದು ಆಶಿಸಿದರು.

ಕೊನೆಯಲ್ಲಿ ಬ್ಯಾಂಕಿನ ಪ್ರಗತಿಗಾಗಿ ಸಹಕರಿಸಿರುವ ಸುಮಾರು 20 ಸದಸ್ಯರುಗಳನ್ನು ಸನ್ಮಾನಿಸಲಾಯಿತು.

**15] ವಂದನಾರ್ಪಣೆ:**

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ಜಯಲಕ್ಷ್ಮಿ ಜಿ. ತೋಟಗೆರೆಯವರು ಬ್ಯಾಂಕಿನ ಸಂಸ್ಥಾಪಕರು ಮತ್ತು ಅಧ್ಯಕ್ಷರಾದ ಡಾ: ಕೆ.ಎಂ. ರಂಗಧಾಮ ಶೆಟ್ಟಿ ಯವರಿಗೂ, ಉಪಾಧ್ಯಕ್ಷರಾದ

ಶ್ರೀ ಡಿ.ಆರ್. ವಿಜಯಸಾರಥಿ ಯವರಿಗೂ, ಆಡಳಿತ ಮಂಡಲಿಯ ನಿರ್ದೇಶಕರುಗಳಿಗೂ, ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ಕೃಷ್ಣಯ್ಯ ಶೆಟ್ಟಿ ಯವರಿಗೂ ಹಾಗೂ ಮಹಾ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುತ್ತಾ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಪ್ರಗತಿಗೆ ಸರ್ವ ರೀತಿಯಲ್ಲಿ ಸದಾ ಸಹಕಾರ ಮತ್ತು ಬೆಂಬಲವನ್ನು ನೀಡುತ್ತಾ ಬಂದಿರುವ ಎಲ್ಲಾ ಸದಸ್ಯ ಬಾಂಧವರಿಗೆ, ಠೇವಣಿದಾರರಿಗೆ ಮತ್ತು ಎಲ್ಲಾ ಗ್ರಾಹಕರಿಗೆ ಆಡಳಿತ ಮಂಡಲಿಯು ಅತ್ಯಂತ ಸಂತೋಷದಿಂದ ಕೃತಜ್ಞತಾ ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆಂದೂ,

ಬ್ಯಾಂಕಿನ ಪ್ರಗತಿಗೆ ಸದಾ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿ ವರ್ಗದವರಿಗೂ, ಕರ್ನಾಟಕ ಸಹಕಾರಿ ಇಲಾಖೆಯ ಅಧಿಕಾರಿ ವರ್ಗದವರಿಗೂ, ಪಟ್ಟಣ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಮತ್ತು ರಾಜ್ಯ ಮಹಾಮಂಡಲದ ಅಧ್ಯಕ್ಷರು ಮತ್ತು ಅಧಿಕಾರಿಗಳಿಗೂ ಹಾಗೂ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ಅಧಿಕಾರಿಗಳಿಗೂ, ಎಸ್.ಬಿ.ಐ. ಡಿಸ್ಕೌಂಟ್ ಅಂಡ್ ಫೈನಾನ್ಸ್ ಹೌಸ್ ಆಫ್ ಇಂಡಿಯಾ ಲಿಮಿಟೆಡ್ ನ ಅಧಿಕಾರಿಗಳಿಗೂ, ಐ.ಸಿ.ಐ.ಸಿ.ಐ.ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಐ.ಡಿ.ಬಿ.ಐ.ಬ್ಯಾಂಕ್, ಹೆಚ್.ಡಿ.ಎಫ್.ಸಿ.ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಆಕ್ಸಿಸ್ ಬ್ಯಾಂಕ್ ಅಧಿಕಾರಿಗಳಿಗೆ ಬ್ಯಾಂಕಿನ ಆಡಳಿತ ಮಂಡಲಿಯು ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆಂದೂ,

ಬ್ಯಾಂಕಿಗೆ ಸಾಫ್ಟ್‌ವೇರ್, ಕಂಪ್ಯೂಟರ್ ಹಾರ್ಡ್‌ವೇರ್ ಸರಬರಾಜು ಮಾಡಿದ ಸಂಸ್ಥೆಯವರುಗಳಿಗೆ, ಶಾಖೆಗಳ ಪೀಠೋಪಕರಣ ಹಾಗೂ ವಿದ್ಯುದ್ದೀಕರಣಗೊಳಿಸಿದ ಗುತ್ತಿಗೆದಾರರುಗಳಿಗೆ, ಬ್ಯಾಂಕಿನ ಕಾನೂನು ಸಲಹೆಗಾರರುಗಳಿಗೆ, ಬ್ಯಾಂಕಿಂಗ್ ಸಲಹೆಗಾರರುಗಳಿಗೆ, ಸ್ಥಿರಾಸ್ತಿ ಮೌಲ್ಯಮಾಪಕರುಗಳಿಗೆ, ಚಿನ್ನಾಭರಣ ಮೌಲ್ಯಮಾಪಕರುಗಳಿಗೆ, ಶಾಸನಬದ್ಧ ಲೆಕ್ಕಪರಿಶೋಧನೆ ನಿರ್ವಹಿಸಿದ ಲೆಕ್ಕಪರಿಶೋಧಕರಿಗೆ ಹಾಗೂ ಆಂತರಿಕ ಲೆಕ್ಕ ಪರಿಶೋಧಕರುಗಳಿಗೂ ಆಡಳಿತ ಮಂಡಲಿಯ ಹೃತ್ಪೂರ್ವಕ ವಂದನೆಗಳು.

ಬ್ಯಾಂಕಿನ ವ್ಯವಹಾರಗಳಲ್ಲಿ ಕಾರ್ಯ ನಿರ್ವಹಿಸಿ ಅಭಿವೃದ್ಧಿಯಲ್ಲಿ ಭಾಗಿಯಾಗಿರುವ ನಿವೃತ್ತ ಪ್ರಭಾರ ಪ್ರಧಾನ ವ್ಯವಸ್ಥಾಪಕರು ಹಾಗೂ ಹಾಲಿ ಬ್ಯಾಂಕಿನಲ್ಲಿ ಪೂರ್ಣ ಸಮಯದ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರಿಗೂ, ಆರ್.ಬಿ.ಐ.ನ ನಿವೃತ್ತ ಡಿ.ಜಿ.ಎಂ ಹಾಗೂ ಬ್ಯಾಂಕಿನ ಸಲಹೆಗಾರರಾದ ಶ್ರೀ ಪುರುಷೋತ್ತಮ್ ಲಾಲ್ ಚೌಧರಿಯವರಿಗೂ ಮತ್ತು ಶ್ರೀ ಅಮರ್ ದೀಪ್ ರವರಿಗೆ, ಎಲ್ಲಾ ಸಿಬ್ಬಂದಿ ವರ್ಗದವರಿಗೂ, ಪಿಗ್ಮಿ ಠೇವಣಿ ಸಂಗ್ರಹಕಾರರಿಗೂ, ವೈದ್ಯಕೀಯ ಧನ ಸಹಾಯಕ್ಕಾಗಿ ಬರುವ ಅರ್ಜಿಗಳನ್ನು ಪರಿಶೀಲಿಸುತ್ತಿರುವ ಡಾ: ಶ್ರೀನಿವಾಸ್ ರವರಿಗೂ, ಎಲ್ಲಾ ಶಾಖಾ ಕಟ್ಟಡದ ಮಾಲೀಕರುಗಳಿಗೂ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರ ನೀಡುತ್ತಿರುವ ಎಲ್ಲಾ ಮಹನೀಯರುಗಳಿಗೂ ಮತ್ತು ಗಣ್ಯರಿಗೂ ಆಡಳಿತ ಮಂಡಲಿಯ ಪರವಾಗಿ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಿದರು.

ದಿನಾಂಕ : 23–09–2023

ಸ್ಥಳ : ಬೆಂಗಳೂರು

**(ಡಾ: ಕೆ.ಎಂ. ರಂಗಧಾಮ ಶೆಟ್ಟಿ)**

ಸಂಸ್ಥಾಪಕರು ಹಾಗೂ ಅಧ್ಯಕ್ಷರು

## ಭಾಗ – 1
## ‘ಶಾಸನಬದ್ಧ ಲೆಕ್ಕ ಪರಿಶೋಧಕರ ಸ್ವತಂತ್ರ ವರದಿ’
## ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ.,
ವಿ.ವಿ.ಪುರಂ, ಬೆಂಗಳೂರು, ಇದರ ಸದಸ್ಯರಿಗೆ

1) **ಆರ್ಥಿಕ ತ:ಖ್ತೆಗಳ ಬಗ್ಗೆ ವರದಿ :**
ನಾವು ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದರ ಸನ್ 2023–24ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆಯನ್ನು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ 1959ರ ಕಲಂ 63(1) ರಲ್ಲಿ ಪ್ರದಪ್ತವಾದ ಅಧಿಕಾರದಂತೆ ಕೈಗೊಂಡಿದ್ದು ಅದರಲ್ಲಿ ಬ್ಯಾಂಕಿನ 9 ಶಾಖೆಗಳ ಲೆಕ್ಕ ಪರಿಶೋಧಿತ ತ:ಖ್ತೆಗಳು ಸೇರಿದಂತೆ ದಿ.31–03–2024ರಂತ್ಯದ ಲಾಭ ಹಾನಿ ತ:ಖ್ತೆಯು, ನಗದು ಹರಿಯು ತ:ಖ್ತೆಯು ಹಾಗೂ ದಿ.31–03–2024ಕ್ಕೆ ಇರುವ ಸಾಲ ಜಿಂದಗಿ ತ:ಖ್ತೆಯು ಅಲ್ಲದೆ ಬ್ಯಾಂಕಿನ ಲೆಕ್ಕ ಪತ್ರಗಳ ಪದ್ಧತಿಗಳ ಸಂಕ್ಷಿಪ್ತ ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡಿರುತ್ತದೆ.

2) **ಆರ್ಥಿಕ ತ:ಖ್ತೆಗಳ ಕುರಿತು ಆಡಳಿತ ಮಂಡಳಿಯ ಜವಾಬ್ದಾರಿ :**
ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರಲ್ಲಿರುವ ಅವಕಾಶಗಳಂತೆ ಅಲ್ಲದೆ ರಿಝರ್ವ್ ಬ್ಯಾಂಕು, ನಬಾರ್ಡ್, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಹಾಗೂ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಆರ್ಥಿಕ ತ:ಖ್ತೆಗಳನ್ನು ಸಿದ್ದಪಡಿಸುವುದು ಬ್ಯಾಂಕಿನ ಆಡಳಿತ ಮಂಡಳಿಯ ಜವಾಬ್ದಾರಿಯಾಗುತ್ತದೆ.

3) **ಶಾಸನಬದ್ಧ ಲೆಕ್ಕ ಪರಿಶೋಧಕರ ಜವಾಬ್ದಾರಿ :**
ನಾವು ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆಯವರು ನಿರ್ದೇಶಿಸಿರುವ ಮಾರ್ಗಸೂಚಿಗಳ ಪ್ರಕಾರ ಬ್ಯಾಂಕಿನ ಸನ್ 2023–24ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆ ಕೈಗೊಂಡಿದ್ದು, ಸದರಿ ಮಾರ್ಗಸೂಚಿಗಳ ಪ್ರಕಾರ ಬ್ಯಾಂಕಿನ ಲೆಕ್ಕ ಪರಿಶೋಧಿತ ಆರ್ಥಿಕ ತ:ಖ್ತೆಗಳು ವಾಸ್ತವಿಕ ತಪ್ಪು ಹೇಳಿಕೆಗಳು ನೀಡುತ್ತಿರುವುದಿಲ್ಲವೆಂಬ ಬಗ್ಗೆ ನೈತಿಕ ಅಗತ್ಯತೆಗಳ ಮೇರೆಗೆ ಖಚಿತ ಅಭಿಪ್ರಾಯ ನೀಡುವುದು ನಮ್ಮ ಮುಖ್ಯ ಜವಾಬ್ದಾರಿಯಾಗುತ್ತದೆ.

4) ನಮ್ಮ ಲೆಕ್ಕ ಪರಿಶೋಧನೆಯ ವ್ಯಾಪ್ತಿಯು ಬ್ಯಾಂಕಿನ ಆರ್ಥಿಕ ತ:ಖ್ತೆಗಳು ಬ್ಯಾಂಕಿನ ಕಾರ್ಯವಿಧಾನವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಕುರಿತು ಬಹಿರಂಗ ಪಡಿಸುವುದು, ಅಲ್ಲದೆ ಲೆಕ್ಕ ಪರಿಶೋಧಕರ ತೀರ್ಪಿನಲ್ಲಿ ಅಪಾಯದ ಮೌಲ್ಯಮಾಪನ ಮತ್ತು ವಾಸ್ತವಿಕ ತಪ್ಪು ಹೇಳಿಕೆಗಳು ನೀಡುತ್ತಿರುವುದಿಲ್ಲವೆಂಬ ಬಗ್ಗೆ, ಬ್ಯಾಂಕಿನ ಆಂತರಿಕ ನಿಯಂತ್ರಣ ಪದ್ಧತಿಯಂತೆ ಬ್ಯಾಂಕು ಕ್ರಮ ಕೈಗೊಂಡು ಆರ್ಥಿಕ ತ:ಖ್ತೆಗಳನ್ನು ತಯಾರಿಸುವ ಬಗ್ಗೆ, ಬ್ಯಾಂಕು ಅಳವಡಿಸಿರುವ ಲೆಕ್ಕ ಪತ್ರಗಳ ಪದ್ಧತಿಯ ಮೌಲಿಕರಣ ಬಗ್ಗೆ, ಅಲ್ಲದೆ ಆಡಳಿತ ಮಂಡಳಿಯವರ ಲೆಕ್ಕಗಳ ಅಂದಾಜುಗಳು ಸಮಂಜಸವಾಗಿರುವ ಬಗ್ಗೆ ಹಾಗೂ ಬ್ಯಾಂಕಿನ ಆರ್ಥಿಕ ತ:ಖ್ತೆಗಳ ಒಟ್ಟಾರೆ ಪ್ರಸ್ತುತಿ ಬಗ್ಗೆ ವಿಮರ್ಷೆ ಮುಂತಾದವುಗಳನ್ನು ಒಳಗೊಂಡಿರುತ್ತದೆ.

5) ಬ್ಯಾಂಕಿನ ಲೆಕ್ಕ ಪರಿಶೋಧನೆಗೆ ಲಭ್ಯವಾಗಿರುವ ದಾಖಲಾತಿಗಳು ಲೆಕ್ಕ ಪರಿಶೋಧನೆಯ ಬಗ್ಗೆ ನಮ್ಮ ಅಭಿಪ್ರಾಯ ನೀಡಲು ಸಾಕಷ್ಟು ಇರುವುದು ಎಂದು ನಾವು ನಂಬುತ್ತೇವೆ.

6) **ಅರ್ಹತಾತ್ಮಕ ಅಭಿಪ್ರಾಯ : (Qualified Opinion).**

ನಮ್ಮ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳಂತೆ, ಬ್ಯಾಂಕಿನ ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಹಾಗೂ ಮಾಹಿತಿಗಳ ಮೇಲಿನ ಟಿಪ್ಪಣಿಗಳು, ಬ್ಯಾಂಕಿಂಗ್ ನಿಯಂತ್ರಣಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರಲ್ಲಿರುವ ಅವಕಾಶಗಳಂತೆ, ಅಲ್ಲದೆ ರಿಝರ್ವ್ ಬ್ಯಾಂಕು, ನಬಾರ್ಡ್, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಹಾಗೂ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಸಿದ್ದಪಡಿಸಿರುವ ಬ್ಯಾಂಕಿನ

1) ದಿನಾಂಕ 31.03.2024ರಂತ್ಯಕ್ಕೆ ಇರುವ ಅಢಾವೆ ಪತ್ರಿಕೆಯು,

2) ಸನ್ 2023–24 ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಹಾಗೂ

3) ದಿನಾಂಕ 31.03.2024ರಂತ್ಯಕ್ಕೆ ಇರುವ ಜಮಾ ಮತ್ತು ಖರ್ಚು ತ:ಖ್ತೆಯು ವರದಿಯಲ್ಲಿ ವಿವರವಾಗಿ ವಿಮರ್ಶಿಸಿದ ಕಾರಣಗಳಿಂದ ಈ ಕೆಳಗಿನ ಅಂಶಗಳ ಬಗ್ಗೆ ಅನುಪಾಲನೆ / ತಿದ್ದುಪಡಿ ಮಾಡಬೇಕಾಗಿದೆ ಎಂಬ ಷರಾಕ್ಕೆ ಒಳಪಟ್ಟು ಬ್ಯಾಂಕಿನ ನಿಜವಾದ ಹಾಗೂ ನ್ಯಾಯ ಸಮ್ಮತವಾದ ಆರ್ಥಿಕ ಸ್ಥಿತಿ ಪ್ರತಿಬಿಂಬಿಸುತ್ತದೆ ಅಂತ ಅಭಿಪ್ರಾಯ ಪಡುತ್ತೇನೆ.

**ಎ) ಲೆಕ್ಕಪರಿಶೋಧನಾ ವೇಳೆಯಲ್ಲಿ ಗಮನಿಸಿದ ಅಂಶಗಳು:**

1. ಹಿಂದಿನ ವರ್ಷಗಳಲ್ಲಿ ಹೆಚ್ಚುವರಿಯಾಗಿ ಅವಕಾಶ ಮಾಡಿದ ಅನುತ್ಪಾದಕ ನಿಧಿಯ ಮೊತ್ತದಲ್ಲಿ, ಪ್ರಸಕ್ತ ವರ್ಷದಲ್ಲಿ ರೂ.778.55 ಲಕ್ಷಗಳನ್ನು ಹಿಂಪಡೆದು, ಸದರಿ ಮೊತ್ತದಲ್ಲಿ ರೂ.327.69 ಲಕ್ಷಗಳನ್ನು ಆದಾಯವೆಂದು ಪರಿಗಣಿಸಿ ಲಾಭನಷ್ಟದ ಖಾತೆಗೆ ಜಮೆ ತೆಗೆದುಕೊಳ್ಳಲಾಗಿದೆ ಮತ್ತು ಇನ್ನುಳಿದ ಮೊತ್ತ ರೂ.450.86 ಲಕ್ಷಗಳಲ್ಲಿ ರೂ.107.60ಲಕ್ಷಗಳನ್ನು ರಾಜಿ ಪರಿಹಾರ ನೀತಿಯಡಿಯಲ್ಲಿ (compromise settlement) ಹಾಗು ರೂ.343.26 ಲಕ್ಷಗಳನ್ನು ತಾಂತ್ರಿಕ ವಜಾ ಅಡಿಯಲ್ಲಿ (technical write off) ಸಾಲ ಚುಕ್ತಗೊಳಿಸಲು ಅನುತ್ಪಾದಕ ನಿಧಿಯಿಂದ ಹೊಂದಾಣಿಕೆ ಮಾಡಿಕೊಂಡಿರುವುದನ್ನು ಗಮನಿಸಿದೆ. ಇದರಿಂದಾಗಿ ಪ್ರಸಕ್ತ ಸಾಲಿಗೆ ಲಾಭದಲ್ಲಿ ರೂ. 3,27,69,188/–ಗಳ ಹೆಚ್ಚಳವಾಗಿದೆ.

2. ರಾಜಿ ಪರಿಹಾರ ನೀತಿ ಮತ್ತು ತಾಂತ್ರಿಕ ವಜಾ (Compromise Settlement and Technical Write off) ಬ್ಯಾಂಕ್ ದಿನಾಂಕ 26.07.2023ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಭಾರತೀಯ ರಿಝರ್ವ್ ಬ್ಯಾಂಕಿನ ಪತ್ರ ಸಂಖ್ಯೆ RBI/2023–24/40/DOR.STR.20/21.04.048 /2023–24; dated : 08.06.2023 ರಂತೆ ರಾಜಿ ಪರಿಹಾರ ನೀತಿ ಮತ್ತು ತಾಂತ್ರಿಕ ವಜಾ ಪಾಲಿಸಿಯನ್ನು ಅಳವಡಿಸಿಕೊಂಡು ದಿನಾಂಕ 01.08.2023ರಿಂದ ಸಂಧಾನ ಸಮಿತಿಯನ್ನು (Negotiating committee) ರಚಿಸಿಕೊಂಡಿರುತ್ತದೆ. ಅದರಂತೆ ಸಂಧಾನ ಸಮಿತಿಯು ಪಾಲಿಸಿಯ ಮಾನದಂಡಗಳನ್ವಯ ವರದಿ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ದಿನಾಂಕ 01.08.2023 ರಿಂದ 31.03.2024 ರವರೆಗೆ ಸ್ವೀಕರಿಸಿದ ಖಾತೆಗಳ ಮತ್ತು ಆಡಳಿತ ಮಂಡಳಿಯ ಮಂಜೂರಾತಿ / ಅನುಮೋದನೆಯ ನಿಬಂಧನೆಗಳಂತೆ ಚುಕ್ತವಾದ ಖಾತೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ಚುಕ್ತವಾದ ಖಾತೆಗಳು | | ಸಾಲದ ಮೊತ್ತ | | ಸಂಧಾನ ಸಮಿತಿ ಶಿಫಾರಸ್ಸು ಮಾಡಿರುವ ಮೊತ್ತ | | ವಸೂಲಾದ ಮೊತ್ತ | | ಅನುತ್ಪಾದಕ ಆಸ್ತಿ ನಿಧಿಯಿಂದ ಹೊಂದಾಣಿಕೆ ಮೊತ್ತ |
|---|---|---|---|---|---|---|---|---|
| | ಸಂಖ್ಯೆ | ಅಸಲು | ಬಡ್ಡಿ | ಅಸಲು | ಬಡ್ಡಿ | ಅಸಲು | ಬಡ್ಡಿ | |
| ಭದ್ರತಾ ಸಾಲ | 15 | 862.28 | 911.66 | 850.46 | 372.72 | 850.46 | 399.27 | 11.82 |
| ಭದ್ರತಾ ರಹಿತ ಸಾಲ | 471 | 261.71 | 1050.64 | 155.76 | 0.00 | 165.93 | 23.18 | 95.78 |
| **ಒಟ್ಟು** | **486** | **1123.99** | **1962.30** | **1006.22** | **372.72** | **1016.39** | **422.45** | **107.60** |

3. ಆಡಳಿತ ಮಂಡಳಿ ಬ್ಯಾಂಕಿನ ಪ್ರಗತಿಯ ಸಂಬಂಧ ನಿಖರ ಹಾಗೂ ವಾಸ್ತವವಾದ ಗುರಿಗಳನ್ನು ನಿಗಧಿಗೊಳಿಸಬೇಕು. ಸದರಿ ಗುರಿಗಳನ್ನು ಸಾಧಿಸಲು ಪರಿಣಾಮಕಾರಿ ಕ್ರಮವಿಡಬೇಕು.

   **ಸಮಜಾಯಿಷಿ:**
   ಬ್ಯಾಂಕಿನಲ್ಲಿ ಪ್ರತಿ ವರ್ಷವೂ, ಆಯಾ ವರ್ಷದ ಗುರಿಗಳನ್ನು ನಿಗಧಿಪಡಿಸುವಾಗ ಸಾಲಿನ ಆರಂಭದಲ್ಲಿನ ಆರ್ಥಿಕ ಅಂಕಿ ಅಂಶದ ಮೇಲೆ ಶೇ. 12 ರಿಂದ 15 ರಷ್ಟು ಬೆಳವಣಿಗೆಯ ಗುರಿಗಳನ್ನು ನಿಗದಿಪಡಿಸಲಾಗುತ್ತದೆ. ತದ ನಂತರ ಪ್ರತಿ ತ್ರೈಮಾಸಿಕದ ಅಂತ್ಯಕ್ಕೆ ಶಾಖಾ ವ್ಯವಸ್ಥಾಪಕರ ಸಭೆ ಕರೆದು, ಸದರಿ ಸಭೆಯಲ್ಲಿ ಶಾಖಾವಾರು ಆರ್ಥಿಕ ಅಂಶದ ಪ್ರಗತಿಯನ್ನು ಪರಿಶೀಲಿಸುವ ಪರಿಪಾಠವಿರುತ್ತದೆ. ಇದರ ಪರಿಣಾಮವಾಗಿ ವರದಿ ಸಾಲಿನಲ್ಲಿ ನಿವ್ವಳ ಎನ್.ಪಿ.ಎ. ಪ್ರಮಾಣ ಶೇ. 3.05 ರಷ್ಟು ಇರುತ್ತದೆ. ಈ ಕ್ರಮಗಳನ್ನು ಲೆಕ್ಕ ಪರಿಶೋಧಕರ ಸಲಹೆಯಂತೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಪಾಲಿಸಲಾಗುವುದು.

4. ಭಾರತೀಯ ರಿಸರ್ವ್ ಬ್ಯಾಂಕಿನ ದಿ.31.03.2023ರ ಅಂತ್ಯಕ್ಕೆ ಆದ ತನಿಖಾ ವರದಿಯಲ್ಲಿನ ಅಂಶಗಳನ್ನು ಹಾಗೂ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಸೂಚನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು.

   **ಸಮಜಾಯಿಷಿ:**
   ಲೆಕ್ಕ ಪರಿಶೋಧಕರು ಸೂಚಿಸಿರುವಂತೆ ಈಗಾಗಲೇ ಮೇಲಿನ ಅಂಶಗಳನ್ನು / ಸೂಚನೆಗಳನ್ನು ಬ್ಯಾಂಕಿನಲ್ಲಿ ಅಳವಡಿಸಿಕೊಂಡು ಕ್ರಮವಿಡಲಾಗುತ್ತಿದೆ.

**7) ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ವರದಿ:**
ಬ್ಯಾಂಕಿನ ಸಾಲ ಜಿಂದಗಿ ತ:ಖ್ತೆಯು ಹಾಗೂ ಲಾಭಹಾನಿ ತ:ಖ್ತೆಯು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ)ರಲ್ಲಿ ಪ್ರತ್ಯೇಕವಾಗಿ ನಿಗದಿಪಡಿಸಿರುವ ನಮೂನೆ 'ಎ' ಮತ್ತು 'ಬಿ' ರಂತೆ ಇರುತ್ತದೆ.

**8) ನಾವು ವರದಿಸುವುದೇನೆಂದರೆ :**
ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರಂತೆ ಮತ್ತು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶನಾಲಯವು ಹೊರಡಿಸಿರುವ ಸೂಚನೆಗಳು

ಅಗತ್ಯಗೊಳಿಸಿರುವಂತೆ ನಿಗಧಿತ ವಿಷಯಗಳ ಮೇಲೆ ವಿಸ್ತೃತ ವರದಿಯನ್ನು, ನಮ್ಮ ಈ ವರದಿಯೊಂದಿಗೆ ಲಗತ್ತಿಸಲಾಗಿದೆ.

ಸಹಕಾರ ಸಂಘಗಳ ಅಧಿನಿಯಮ 1959 ಕಲಂ 63(16)ರಲ್ಲಿ ಸೂಚಿಸಿರುವಂತೆ ನಾವು ಹೇಳುವುದೇನೆಂದರೆ:

ಅ) ಲೆಕ್ಕ ಪರಿಶೋಧನಾ ಕಾಲಕ್ಕೆ ನಾವು ಎಲ್ಲ ಅವಶ್ಯಕ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದಿದ್ದು, ಅವುಗಳು ನಮ್ಮ ಜ್ಞಾನ ಹಾಗೂ ನಂಬಿಕೆಯ ಪ್ರಕಾರ ತೃಪ್ತಿಕರವಾಗಿ ಇರುತ್ತದೆ.

ಆ) ಬ್ಯಾಂಕಿನ ಶಾಖೆಗಳಿಂದ ಹಾಗೂ ಕಚೇರಿಯಿಂದ ಸ್ವೀಕೃತವಾಗಿರುವ ತ:ಖ್ತೆಗಳು ಹಾಗೂ ಬ್ಯಾಂಕಿನಲ್ಲಿ ಇಟ್ಟಿರುವ ಲೆಕ್ಕ ಪುಸ್ತಕಗಳು ಕಾನೂನು ಬದ್ಧವಾಗಿ ಇರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

ಇ) ನಮ್ಮ ತಿಳವಳಿಕೆ ಪ್ರಕಾರ ಬ್ಯಾಂಕಿನ ವ್ಯವಹಾರಗಳು ಬ್ಯಾಂಕಿನ ಲೆಕ್ಕ ಪುಸ್ತಕಗಳ ಜೊತೆ ಹಾಗೂ ನಿಯತಕಾಲಿಕೆಗಳೊಂದಿಗೆ ಹೊಂದಾಣಿಕೆ ಇರುತ್ತದೆ.

ಈ) ಭಾರತದಲ್ಲಿ ಸರ್ವಸಾಧಾರಣವಾಗಿ ಉಪಯೋಗಿಸುವ ಲೆಕ್ಕಪತ್ರ ಮಾನದಂಡವು ಬ್ಯಾಂಕು ಅಳವಡಿಸಿದೆ.

9) ಬ್ಯಾಂಕು ಸನ್ 2023–24ನೇ ಸಾಲಿನಲ್ಲಿ 'ಎ' ವರ್ಗದಲ್ಲಿ ವರ್ಗೀಕರಿಸಲಾಗಿದೆ.

ದಿನಾಂಕ : 14.06.2024
ಸ್ಥಳ : ಬೆಂಗಳೂರು.

ಮೆ॥ ಬಾಬು ಅಂಡ್ ಬದತ್
ಸನ್ನದು ಲೆಕ್ಕ ಪರಿಶೋಧಕರು
ಸಂಸ್ಥೆಯ ನೋಂದಣಿ ಸಂಖ್ಯೆ 321009ಇ
ಸಹಿ/–
(ಶ್ರೀ ಕೆ. ಚಂದ್ರ ಬಾಬು)
ಪಾಲುದಾರರು
ಸದಸ್ಯತ್ವ ಸಂಖ್ಯೆ–29130
UDIN : 24029130BKEDJR7345

# ಶ್ರೀ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿ.

ನಂ.106, ರಜತ ಭವನ, ಆರ್.ವಿ.ರಸ್ತೆ, ವಿ.ವಿ.ಪುರಂ. ಬೆಂಗಳೂರು–560 004.

ESTD : 1971

## 2023–2024ನೇ ಸಾಲಿನ ಲೆಕ್ಕಪರಿಶೋಧನಾ ವರದಿ

## ಭಾಗ–2
## ಬ್ಯಾಂಕಿನ ಪರಿಚಯಾತ್ಮಕ ವಿವರಗಳು

**1. ಬ್ಯಾಂಕಿನ ವಿವರಗಳು**

| | |
|---|---|
| 1. ಬ್ಯಾಂಕಿನ ಹೆಸರು | ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ. |
| 2. ಬ್ಯಾಂಕಿನ ವಿಳಾಸ | ನಂ.106, ರಜತ ಭವನ, ಆರ್.ವಿ.ರಸ್ತೆ, ವಿ.ವಿ.ಪುರಂ ಬೆಂಗಳೂರು – 560 004. |
| 3. ಬ್ಯಾಂಕಿನ ನೋಂದಣಿ ಸಂಖ್ಯೆ/ ದಿನಾಂಕ | ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವಲಯ ಬೆಂಗಳೂರು, ಅವರ ನೋಂದಣಿ ಪತ್ರದ ಸಂಖ್ಯೆ ಬಿ/ಎಆರ್‌ಬಿಐ–1/1870/70–71 ದಿನಾಂಕ 01.04.1971ರ ಪ್ರಕಾರ ಶ್ರೀ ಸುಬ್ರಮಣ್ಯೇಶ್ವರ ಸಹಕಾರ ಸಂಘ ನಿ., ಎಂದು ನೋಂದಣಿಯಾಗಿದ್ದು, ನಂತರ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಂಗಳೂರು ವಿಭಾಗ, ಬೆಂಗಳೂರು, ಅವರ ನೋಂದಣಿ ಪತ್ರದ ಸಂಖ್ಯೆ ಜೆಆರ್‌ಬಿಹೆಚ್/11/ಎಂ.ಎಂ.ಸಿ/38/ 75–76, ದಿನಾಂಕ 29.04.1976ರ ಮೇರೆಗೆ ಶ್ರೀ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಎಂದು ನೋಂದಣಿ ಯಾಗಿರುತ್ತದೆ. |

4. ರಿಸರ್ವ್ ಬ್ಯಾಂಕಿನಿಂದ ಪಡೆದ ಬ್ಯಾಂಕಿಂಗ್ ಲೈಸನ್ಸ್ ಕ್ರಮಾಂಕ ಹಾಗೂ ದಿನಾಂಕ ವಿವರ ಕೆಳಕಂಡಂತಿದೆ

| ಕ್ರ ಸಂ | ಶಾಖೆಗಳ ವಿವರ | ಆರ್.ಬಿ.ಐ ಪರವಾನಗಿ ಸಂಖ್ಯೆ / ದಿನಾಂಕ | ವ್ಯವಹಾರ ಪ್ರಾರಂಭಿಸಿದ ದಿನಾಂಕ |
|---|---|---|---|
| 1 | ಆಡಳಿತ ಕಚೇರಿ | ಯುಬಿಡಿ ಬಿ.ಜಿ. ಬಿಎಲ್. ಎಒ 365 ದಿನಾಂಕ 03.11.1999 | 01.04.1971 ಸಹಕಾರ ಸಂಘವಾಗಿ |
| 2 | ವಿಶ್ವೇಶ್ವರಪುರಂ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 633 ದಿನಾಂಕ 08.04.2013 | 13.06.1976 |
| 3 | ಅವೆನ್ಯೂರಸ್ತೆ ಶಾಖೆ | ಯುಬಿಡಿ ಕೆಎ 550 ಪಿ ದಿನಾಂಕ 11.09.1986 | 01.04.1971 |

| | | | |
|---|---|---|---|
| 4 | ವಿಜಯನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 149 ದಿನಾಂಕ 28.06.1995 | 06.06.1996 |
| 5 | ಸುಬ್ರಮಣ್ಯನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 222 ದಿನಾಂಕ 18.12.1996 | 20.06.1997 |
| 6 | ಪದ್ಮನಾಭನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 223 ದಿನಾಂಕ 18.12.1996 | 14.12.1997 |
| 7 | ಕಾಚರಕನಹಳ್ಳಿ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 557 ದಿನಾಂಕ 23.10.2009 | 24.06.2010 |
| 8 | ಯಶವಂತಪುರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 677 ದಿನಾಂಕ 03.06.2014 | 04.09.2014 |
| 9 | ನಾಗರಭಾವಿ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 672 ದಿನಾಂಕ 20.05.2014 | 02.11.2014 |
| 10 | ಕೋಣನಕುಂಟೆ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 673 ದಿನಾಂಕ 20.05.2014 | 01.12.2014 |

| | |
|---|---|
| 5. ಬ್ಯಾಂಕಿನ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಬ್ಯಾಂಕಿನ ಉಪನಿಯಮ 3ರನ್ವಯ ಬ್ಯಾಂಕಿನ ಕಾರ್ಯಕ್ಷೇತ್ರವು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳ ವ್ಯಾಪ್ತಿಗೆ ಅನ್ವಯಿಸುತ್ತದೆ. |

**2. ಬ್ಯಾಂಕಿನ ಮುಖ್ಯ ಉದ್ದೇಶಗಳು/ಚಟುವಟಿಕೆಗಳು (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)**

1) ಬ್ಯಾಂಕಿನ ಉಪನಿಯಮ 5ರ ಪ್ರಕಾರ – ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ)ರ ನಿಯಮಗಳ ಅನ್ವಯ, ಭಾರತೀಯ ರಿಸರ್ವ್ ಬ್ಯಾಂಕಿನ ಉಸ್ತುವಾರಿಯಲ್ಲಿ, ಬ್ಯಾಂಕಿಂಗ್ ವ್ಯವಹಾರ ನಡೆಸುವ ಪ್ರಮುಖ ಉದ್ದೇಶದೊಂದಿಗೆ ಇನ್ನಿತರೆ 25 ಉದ್ದೇಶಗಳನ್ನು ಹೊಂದಿರುತ್ತದೆ.

**3. ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31–03–2024 ರಲ್ಲಿದ್ದಂತೆ)**

| | |
|---|---|
| 1) ಅಧ್ಯಕ್ಷರು | ಡಾ ॥ ಕೆ.ಎಂ.ರಂಗಧಾಮ ಶೆಟ್ಟಿ |
| 2) ಉಪಾಧ್ಯಕ್ಷರು | ಶ್ರೀ ಡಿ.ಆರ್. ವಿಜಯಸಾರಥಿ |
| 3) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು (ಪ್ರಭಾರದಲ್ಲಿರುವವರು) | ಶ್ರೀ ಕೆ.ಎನ್. ಕೃಷ್ಣಯ್ಯ ಶೆಟ್ಟಿ |

**4) ಶಾಖೆಗಳು ಮತ್ತು ಅವುಗಳ ವಿಳಾಸ**

| ಕ್ರ ಸಂ | ಶಾಖೆಯ ಹೆಸರು | ಶಾಖೆಯ ವಿಳಾಸ | ಶಾಖಾ ವ್ಯವಸ್ಥಾಪಕರು |
|---|---|---|---|
| 1 | ವಿಶ್ವೇಶ್ವರಪುರಂ ಶಾಖೆ (ಪ್ರಧಾನ ಕಛೇರಿ ಶಾಖೆ) | ನಂ.106, ರಜತ ಭವನ, ಆರ್.ವಿ.ರಸ್ತೆ, ವಿ.ವಿ.ಪುರಂ ಬೆಂಗಳೂರು–560004 | ಶ್ರೀ ಎಸ್. ಶಿವರಾಂ (ಪ್ರಭಾರ) |
| 2 | ಅವೆನ್ಯೂ ರಸ್ತೆ ಶಾಖೆ | ನಂ.11, ರೇಷಮ್ ಮಹಲ್ ನೆಲ ಮಹಡಿ, 2ನೇ ಅಡ್ಡ ರಸ್ತೆ ಕೆಂಪೇಗೌಡ ಎಕ್ಸ್‌ಟೆನ್ಷನ್ ಕೆ.ಜಿ.ರಸ್ತೆ, ಬೆಂಗಳೂರು–560009 | ಶ್ರೀ ಕೆ.ಎಸ್. ದಿನೇಶ್ ಬಾಬು (ಪ್ರಭಾರ) |
| 3 | ವಿಜಯನಗರ ಶಾಖೆ | ಸಿ.ಎ. 10/40, 2ನೇ ಮುಖ್ಯ ರಸ್ತೆ ವಿಜಯನಗರ ಬೆಂಗಳೂರು–560040 | ಶ್ರೀ ಕೆ.ಎಸ್. ಕಿಶೋರ್ ಕುಮಾರ್ (ಪ್ರಭಾರ) |
| 4 | ಸುಬ್ರಮಣ್ಯನಗರ ಶಾಖೆ | ನಂ.156/33, 1ನೇ ಮುಖ್ಯ ರಸ್ತೆ ಮಾರುತಿ ಎಕ್ಸ್‌ಟೆನ್ಷನ್ ಶ್ರೀರಾಂಪುರಂ, ಬೆಂಗಳೂರು–560021 | ಶ್ರೀ ಬಿ.ಜೆ. ಹರೀಶ್ (ಪ್ರಭಾರ) |
| 5 | ಪದ್ಮನಾಭನಗರ ಶಾಖೆ | ನಂ.44, 100 ಅಡಿ ವರ್ತುಲ ರಸ್ತೆ ಬಿ.ಟಿ.ಎಸ್. ಡಿಪೋ ಎದುರು ಬಿ.ಎಸ್.ಕೆ 3ನೇ ಹಂತ ಬೆಂಗಳೂರು–560085 | ಶ್ರೀ ಎಂ. ಮುನಿರಾಜಪ್ಪ (ಪ್ರಭಾರ) |
| 6 | ಕಾಚರಕನಹಳ್ಳಿ ಶಾಖೆ | ನಂ.48, ನೆಹರು ರಸ್ತೆ ಉಲ್ಲಾಸಪ್ಪ ವೃತ್ತ, 60 ಅಡಿ ರಸ್ತೆ ಕಮ್ಮನಹಳ್ಳಿ ಬೆಂಗಳೂರು–560033. | ಶ್ರೀ ಹೆಚ್. ಪ್ರಕಾಶ್ (ಪ್ರಭಾರ) |
| 7 | ಯಶವಂತಪುರ ಶಾಖೆ | ನಂ.15, ರೂಪ್ ಆರ್ಕೆಡ್ 11ನೇ ಮುಖ್ಯ ರಸ್ತೆ ಗೋಕುಲ್ 1ನೇ ಹಂತ 1ನೇ ಘಟ್ಟ, ಯಶವಂತಪುರ (ಎಲ್.ಐ.ಸಿ. ಕಛೇರಿ ಸಮೀಪ) ಬೆಂಗಳೂರು–560054 | ಶ್ರೀ ಆರ್.ಪಿ. ವೆಂಕಟೇಶ್ ಕಿರಣ್ |

| | | | |
|---|---|---|---|
| 8 | ನಾಗರಭಾವಿ ಶಾಖೆ | ನಂ.27/17, ಅಕ್ಷಯ ಸ್ಕ್ವೇರ್, ಪಾಪರೆಡ್ಡಿ ಪಾಳ್ಯ, ಮಲ್ಲತ್ತಳ್ಳಿ ನಾಗರಭಾವಿ, ಬೆಂಗಳೂರು–560072 | ಶ್ರೀ ಮಹೇಂದ್ರ ಕುಮಾರ್ ವಿ. (ಪ್ರಭಾರ) |
| 9 | ಕೋಣನಕುಂಟೆ ಶಾಖೆ | ನಂ.174, ಶ್ರೀರಂಗ ಕಾಂಪ್ಲೆಕ್ಸ್ ಅಮೃತನಗರ ಮುಖ್ಯ ರಸ್ತೆ ನ್ಯೂ ಬ್ಯಾಂಕ್ ಕಾಲೋನಿ ಕೋಣನಕುಂಟೆ, ಬೆಂಗಳೂರು–560062 | ಶ್ರೀ ಆರ್.ಎ. ಶ್ರೀಕಾಂತ್ (ಪ್ರಭಾರ) |

**ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು**

**5) ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ**

ಕಂಡಿಕೆ 3 ಮತ್ತು 4ರಲ್ಲಿ ತಿಳಿಸಿರುವಂತೆ ಶಾಖೆಯ ಹಂತದಲ್ಲಿ ಶಾಖಾ ವ್ಯವಸ್ಥಾಪಕರು ಮತ್ತು ಅವರ ಸಿಬ್ಬಂದಿ, ಕೇಂದ್ರ ಕಛೇರಿಯ ಹಂತದಲ್ಲಿ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಹಾಗೂ ಅವರ ಸಿಬ್ಬಂದಿ ಲೆಕ್ಕ ಪುಸ್ತಕಗಳನ್ನು ಹಾಜರು ಪಡಿಸಿರುತ್ತಾರೆ.

**6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಸಿಎ ಶಿವಕುಮಾರ ಸಿ. |
| ಹುದ್ದೆ ಹಾಗೂ ವಿಳಾಸ | ಪಾಲುದಾರರು<br>ಮೆ॥ ಸಿಎಸ್ಎಂಆರ್ ಅಂಡ್ ಅಸೋಸಿಯೇಟ್ಸ್<br>ಸನ್ನದು ಲೆಕ್ಕಪರಿಶೋಧಕರು, ನಂ. 6, 2ನೇ ಮಹಡಿ<br>80 ಅಡಿ ರಸ್ತೆ, ನಾಗರಭಾವಿ ಮುಖ್ಯರಸ್ತೆ, ಚಂದ್ರ ಲೇಔಟ್<br>ಬೆಂಗಳೂರು–560 040 |
| ಎಂಪಾನಲ್‌ಮೆಂಟ್ ನಂಬರ್ | ಎಫ್–22/02/2013 - Category A |
| ಲೆಕ್ಕಪರಿಶೋಧನಾ ಅವಧಿ | 2022–23 |

**7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಮೆ॥ ಬಾಬು ಅಂಡ್ ಬದತ್<br>ಸನ್ನದ್ದು ಲೆಕ್ಕ ಪರಿಶೋಧಕರು<br>ಪಾಲುದಾರರು : ಶ್ರೀ ಕೆ. ಚಂದ್ರ ಬಾಬು |
| ಹುದ್ದೆ ಹಾಗೂ ವಿಳಾಸ | ಸನ್ನದ್ದು ಲೆಕ್ಕಪರಿಶೋಧಕರು<br>ಸರ್ವೆ ನಂ. 505/25 ಮತ್ತು 26,<br>ಸಾಯಿ ಕೃಷ್ಣ ಆರ್ಕೇಡ್, ಮೊದಲನೇ ಮಹಡಿ<br>ಡಾ॥ ವಿಷ್ಣುವರ್ಧನ ರಸ್ತೆ, ಉತ್ತರಹಳ್ಳಿ ರಸ್ತೆ<br>ಎಸ್.ಪಿ. ಅಂಚೆ, ಬೆಂಗಳೂರು–560 061 |
| ಎಂಪಾನಲ್‌ಮೆಂಟ್ ನಂಬರ್ | E-05/03/2013-10-39-01 (Class A) |
| ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ | ಪತ್ರದ ಸಂಖ್ಯೆ: ಎಸ್.ಎಸ್.ಸಿ.ಬಿ:ಅಡ್ಮಿನ್: 426:2023–2024;<br>ದಿನಾಂಕ 06–11–2023 |



ದಿನಾಂಕ :

| | |
|---|---|
| ಲೆಕ್ಕಪರಿಶೋಧನೆಯ ಆರಂಭದ ದಿನಾಂಕ | 02.05.2024 |
| ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ | 14.06.2024 |
| ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು | 72 ಮಾನವ ದಿನಗಳು |

**8. ಲೆಕ್ಕಪರಿಶೋಧನಾ ವರ್ಗೀಕರಣ :**

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | ಎ ದರ್ಜೆ |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | ಬಿ ದರ್ಜೆ |

**9. ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಶೆ :**

| | |
|---|---|
| 1) ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ? | ಕ್ರಮವಿಡಲಾಗಿದೆ |
| 2) ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ? | ನಿಯಮಿತವಾಗಿ ನಡೆಯುತ್ತಿರುತ್ತದೆ, ಸಮವರ್ತಿ ಲೆಕ್ಕ ಪರಿಶೋಧಕರು ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಪ್ರತಿ ತ್ರೈಮಾಸಿಕದ ನಂತರ ವರದಿಗಳನ್ನು ನೀಡಿರುತ್ತಾರೆ. ವರದಿಗಳಿಗೆ ಅನುಪಾಲನ ವರದಿ ನೀಡಲಾಗಿದೆ. ಆಂತರಿಕ ಲೆಕ್ಕ ಪರಿಶೋಧನೆಯನ್ನು ಆಯಾಯ ತಿಂಗಳಿನಲ್ಲಿ ಕೈಗೊಂಡು ಮಾಸಿಕವಾರು ವರದಿಗಳನ್ನು ಪಡೆಯುವ ಪದ್ದತಿ ಅಳವಡಿಸಿಕೊಳ್ಳುವುದು ಸೂಕ್ತವಾಗಿದೆ. |

3) ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು

1. ಶಾಖೆಗಳಲ್ಲಿ ನಗದು ಶಿಲ್ಕನ್ನು ನಿಗಧಿತ ಮಿತಿ ಮೀರಿ ಉಳಿಸಿಕೊಳ್ಳಲಾಗಿದೆ.

   **ಸಮಜಾಯಿಷಿ:**

   ಬ್ಯಾಂಕಿನ ಎಲ್ಲಾ ಶಾಖೆಗಳ ವ್ಯವಹಾರಗಳು ಸಂಜೆ ವೇಳೆಯವರೆಗೂ ಇರುವುದರಿಂದ, ಕೆಲವು ಸಂದರ್ಭಗಳಲ್ಲಿ ಸಂಜೆ ವೇಳೆ ಅನಿರೀಕ್ಷಿತವಾಗಿ ವ್ಯವಹಾರ ಹೆಚ್ಚುವರಿಯಾದಾಗ ನಿಗದಿತ ಮಿತಿಗಿಂತ ಹೆಚ್ಚಿಗೆ ನಗದು ಶಿಲ್ಕನ್ನು ಅನಿವಾರ್ಯವಾಗಿ ಪಾಲಿಸಲಾಗಿದ್ದು, ಮರುದಿನವೇ ಕೇಂದ್ರ ಕಛೇರಿಗೆ ಜಮಾವಣೆ ಮಾಡಲಾಗುತ್ತದೆ. ಮರುದಿನ ರಜಾ ದಿನಗಳಾಗಿದ್ದರೆ, ಕೇಂದ್ರ ಕಛೇರಿಗೆ ಜಮಾವಣೆ ಮಾಡಲು ವಿಳಂಬವಾಗಿರುತ್ತದೆ.

2. ಸಾಲಗಳ ಮಂಜೂರಾತಿಯ ನಂತರ ಅದರ ಸದುಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಧೃಡೀಕರಿಸಿಕೊಂಡಿಲ್ಲ.

**ಸಮಜಾಯಿಷಿ:**

ಸಾಲ ಮಂಜೂರಾತಿ ಮಾಡುವ ಮೊದಲು, ಅಂದರೆ ಸಾಲದ ಪ್ರಸ್ತಾವನೆ ಪಡೆಯುವ ಸಂದರ್ಭದಲ್ಲಿ ಶಾಖಾ ವ್ಯವಸ್ಥಾಪಕರು ಹಾಗೂ ಪ್ರಧಾನ ವ್ಯವಸ್ಥಾಪಕರುಗಳ ಜೊತೆಗೆ ಸಾಲ ಮತ್ತು ಮುಂಗಡಗಳ ಉಪಸಮಿತಿ ಸದಸ್ಯರು ಸಾಲದ ಸದುಪಯೋಗದ ಬಗ್ಗೆ ಸ್ಥಳ ಪರಿಶೀಲಿಸಿ, ಸಾಲ ಬಿಡುಗಡೆ ಮಾಡುವ ಪರಿಪಾಠವಿರುತ್ತದೆ. ಈ ಬಗ್ಗೆ ದೃಢೀಕರಣ ಮಾಡಿ ಕಡತದಲ್ಲಿ ಸಂರಕ್ಷಿಸಿಡಲು ಕ್ರಮವಿಡಲಾಗುವುದು.

3. ಕೆಲವೊಂದು ಲಾಕರ್‌ಗಳ ಬಾಡಿಗೆ ಬಾಕಿ ಉಳಿದಿದ್ದು, ಅದರ ವಸೂಲಿಗೆ ಕ್ರಮವಿಡುವುದು.

**ಸಮಜಾಯಿಷಿ:**

ವರದಿ ಸಾಲಿನಾಂತ್ಯಕ್ಕೆ ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಭರ್ತಿಯಾಗಿರುವ ಒಟ್ಟು 656 ಲಾಕರ್‌ಗಳಿದ್ದು, ಇದರಲ್ಲಿ 13 ಲಾಕರ್‌ಗಳ ಬಾಡಿಗೆ ಮೊತ್ತ ರೂ. 1,47,200–00 ವಸೂಲಿಗೆ ಬಾಕಿ ಇದ್ದು, ಉಳಿದ ಎಲ್ಲಾ ಲಾಕರ್‌ಗಳ ಬಾಡಿಗೆ ವಸೂಲಾಗಿರುತ್ತದೆ. ಬಾಡಿಗೆ ಬಾಕಿ ಇರುವ ಲಾಕರ್‌ಗಳಲ್ಲಿ ಇಂದಿಗೆ 2 ಲಾಕರ್‌ಗಳ ಬಾಡಿಗೆ ಮೊತ್ತ ರೂ. 19,800–00 ಗಳು ವಸೂಲಿಯಾಗಿದ್ದು, ವಸೂಲಾಗದೆ ಬಾಕಿ ಇರುವ ಲಾಕರ್‌ಗಳಿಗೆ ಬಾಡಿಗೆ ಪಾವತಿಸಲು ಸೂಚಿಸಿ, ಪತ್ರ ವ್ಯವಹಾರವನ್ನು ಮುಂದುವರೆಸಿದ್ದು ವಸೂಲಿಗೆ ಕ್ರಮವಿಡಲಾಗಿದೆ.

4. ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಲಗಳ ತ್ವರಿತ ವಸೂಲಿಗಾಗಿ ಅಗತ್ಯ ಕ್ರಮವಿಡಬೇಕಾಗಿದೆ.

**ಸಮಜಾಯಿಷಿ:**

ವರದಿ ಸಾಲಿನಲ್ಲಿ ಬ್ಯಾಂಕಿನಲ್ಲಿ ಸುಸ್ತಿ ಸಾಲ ವಸೂಲಾತಿಗಾಗಿ ತೀವ್ರ ಕ್ರಮ ಕೈಗೊಂಡಿದ್ದು, ಇದರ ಪರಿಣಾಮ ವರದಿ ಸಾಲಿನ ಪ್ರಾರಂಭದಲ್ಲಿದ್ದ ಎನ್.ಪಿ.ಎ ಮೊತ್ತ ರೂ. 68.35 ಕೋಟಿಗಳಲ್ಲಿ, ವರದಿ ಸಾಲಿನಲ್ಲಿ ರೂ. 34.94 ಕೋಟಿಗಳಷ್ಟು ಕಡಿಮೆಯಾಗಿ ಸಾಲಿನಾಂತ್ಯಕ್ಕೆ ರೂ. 33.41 ಕೋಟಿಗಳಷ್ಟು ಇದ್ದು, ಬ್ಯಾಂಕಿನ ನಿವ್ವಳ ಎನ್.ಪಿ.ಎ. ಪ್ರಮಾಣ ಶೇ. 3.05 ರಷ್ಟು ಇರುತ್ತದೆ. ಕಳೆದ ಸಾಲಿನ ಯೋಜನೆಯಂತೆ ಎನ್.ಪಿ.ಎ. ಪ್ರಮಾಣವನ್ನು ಶೇ. 6.00 ಕ್ಕೆ ಮೀರದಂತೆ ಕ್ರಮವಹಿಸಲಾಗಿದೆ. ಮುಂದಿನ ಸಾಲಿನಲ್ಲಿ ಇನ್ನೂ ಹೆಚ್ಚಿನ ವಸೂಲಾತಿ ಕ್ರಮ ಕೈಗೊಂಡು ನಿವ್ವಳ ಎನ್.ಪಿ.ಎ. ಪ್ರಮಾಣವನ್ನು **ಶೂನ್ಯಕ್ಕೆ** ತರಲು ಯೋಜನೆ ರೂಪಿಸಲಾಗಿದೆ.

| | |
|---|---|
| 4) ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ | ಮೇಲ್ಕಂಡ ಅನೇಕ ನ್ಯೂನತೆಗಳನ್ನು ಆಡಳಿತ ಮಂಡಳಿಯ ಆಡಿಟ್ ಸಮಿತಿಯಲ್ಲಿ ಪರಿಶೀಲಿಸಿ ಕ್ರಮವಿಡಲು ಸೂಚಿಸಲಾಗುತ್ತಿದೆ. ಸಂಬಂಧಿಸಿದ ಶಾಖಾ ವ್ಯವಸ್ಥಾಪಕರಿಗೆ ನ್ಯೂನತೆಗಳನ್ನು ಸರಿಪಡಿಸಿಕೊಂಡು ಅನುಪಾಲನಾ ವರದಿ ಸಲ್ಲಿಸಲು ಬ್ಯಾಂಕಿನ ಕೇಂದ್ರ ಕಛೇರಿಯಿಂದ ಆಗಾಗ ಸೂಚನೆ ನೀಡಲಾಗುತ್ತಿದೆ. |

| | |
|---|---|
| 5) ಅಂತಹ ನ್ಯೂನತೆಗಳು ಮುಂದು ವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು? | ಮುಂದುವರೆದಿವೆ. ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಡಲಾಗಿದೆ. |
| **<u>ಆಂತರಿಕ ಹತೋಟಿ</u>**<br>ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ಕೈಪಿಡಿಗಳ ಬಗ್ಗೆ. | ಅನುಸರಿಸಲಾಗಿದೆ |
| ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing)/ ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ | ಸಮರ್ಪಕ ಹತೋಟಿಗೆ ಕ್ರಮವಿಡಲಾಗಿದೆ |
| ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಬ್ಯಾಂಕ್ ಗಣಕೀಕೃತ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿದ್ದಾರೆ. |
| ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ. | ಅಗತ್ಯ ಕ್ರಮವಿಡಲಾಗಿದೆ. |
| **<u>ಜಾಗರೂಕತೆ:</u>**<br>ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. | ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ |
| ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | ಅನ್ವಯಿಸುವುದಿಲ್ಲ |
| ಅಮಾನತ್ತು ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ | ಸಂಬಂಧಿಸಿದ ಕಂಡಿಕೆಗಳಲ್ಲಿ ವಿವರಿಸಿದೆ. |
| ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಪರಿಶೀಲಿಸಲಾಗಿದೆ |

**ತನಿಖೆ / ಹಿಂದಿನ ತನಿಖೆಯ ದಿನಾಂಕ**

ಕೆಲವು ದೂರುಗಳ ಸಲ್ಲಿಕೆಯ ಹಿನ್ನಲೆಯಲ್ಲಿ ಕಲಂ 64ರ ವಿಚಾರಣೆ ನಡೆದಿದ್ದು, ವರದಿ ಸಲ್ಲಿಕೆಯಾಗಿದೆ. ಸದರಿ ವರದಿಯಲ್ಲಿನ ಅಂಶಗಳನ್ನು 2018–19ನೇ ಸಾಲಿನ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಸದರಿ ವರದಿಯಲ್ಲಿ ಸಾಭೀತಾಗಿದೆ ಎನ್ನಲಾದ ಅಂಶಗಳಿಗೆ ಸಂಬಂಧಪಟ್ಟಂತೆ ದಿ. 22.04.2019 ಮತ್ತು ದಿ. 12.03.2020 ರಂದು ಅನುಪಾಲನಾ ವರದಿಯನ್ನು ನಿಬಂಧಕರಿಗೆ ಸಲ್ಲಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಇಲಾಖಾ ತನಿಖೆ ಆಗಿರುವುದಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕಿನಿಂದ 2022–23ನೇ ಸಾಲಿನ ತನಿಖೆ ನಡೆದಿದ್ದು, ದಿನಾಂಕ 20.11.2023 ರಂದು ವರದಿ ನೀಡಿರುತ್ತಾರೆ. ಸದರಿ ವರದಿಗೆ ಬ್ಯಾಂಕ್ ದಿನಾಂಕ 28.12.2023ರಂದು ಅನುಪಾಲನಾ ವರದಿಯನ್ನು ಸಲ್ಲಿಸಿದೆ. ಸದರಿ ಅನುಪಾಲನಾ ವರದಿಗೆ ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 03.05.2024ರಂದು ಪತ್ರ ಮುಖೇನ ಮತ್ತೊಮ್ಮೆ ಕೆಲವೊಂದು ಅಂಶಗಳಿಗೆ ಸಮಜಾಯಿಷಿ ನೀಡಲು ತಿಳಿಸಿದೆ. ಬ್ಯಾಂಕ್ ದಿನಾಂಕ 17.05.2024ರಂದು ಸಮಜಾಯಿಷಿಯನ್ನು ಸಲ್ಲಿಸಿದೆ. ವರದಿಗಳು ಲಭ್ಯವಿದೆ.

**10. ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ**

**ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | |
|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಇಲ್ಲ |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು |
| ಇ | ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | ಹೌದು |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಹೌದು |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಹೌದು |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಹೌದು |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಹೌದು |

| | | |
|---|---|---|
| ಎನ್<br>ಒ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;<br>ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು<br>ಹೌದು |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | ಹೌದು |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | ಹೌದು |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | ಇಲ್ಲ |
| ಎಸ್<br>ಟಿ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;<br>ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು<br>ಹೌದು |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು |
| ವ್ಹಿ | ಠೇವಣಿದಾರರ ಷೆಡ್ಯೂಲು; | ಹೌದು |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು;<br>(ಲೇಖನ ಸಾಮಗ್ರಿ, ಮುದ್ರಣ ಸಾಮಗ್ರಿ) | ಹೌದು |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | ಹೌದು |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು |

**11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ**

**ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ**

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? ಹೌದು

2) ಸಲ್ಲಿಸಿದ್ದಲ್ಲಿ ವಿವರ

   ಅ) ದಿನಾಂಕ 26.09.2023 ರಂದು ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸಲಾಗಿದೆ.

   ಆ) ದಿನಾಂಕ 26.09.2023 ರಂದು ಸಹಕಾರ ಇಲಾಖೆಗೂ ಸಲ್ಲಿಸಲಾಗಿದೆ.

3) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.

| ಕ್ರ ಸ | ಪುಟ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 | 24 | 21 | ಶಾಖೆಗಳಲ್ಲಿ ಮಿತಿಗೊಳಿಸಿದ ಮಿತಿಗಿಂತಲೂ ಹೆಚ್ಚಿನ ನಗದು ಶಿಲ್ಕು ಉಳಿಸಿಕೊಂಡಿರುವುದು | ಕೊನೆಗಳಿಗೆ ನಗದು ಜಮಾ ಆಗುವುದರಿಂದ ಕೆಲವು ದಿನಗಳಲ್ಲಿ ಶಿಲ್ಕು ಹೆಚ್ಚಿಗೆ ಇರುತ್ತದೆ. | ಮುಂದುವರೆದಿದೆ |

**ಸಮಜಾಯಿಷಿ:**

ಕಂಡಿಕೆ ಸಂಖ್ಯೆ 9(3)(1) ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 43)

| | | | | | |
|---|---|---|---|---|---|
| 2 | 30 | 24(ಡಿ) (1) | ಸಾಲಗಳ ಬಾಕಿಗಳ ಬಗ್ಗೆ ನಿಯಮಿತವಾಗಿ ಧೃಡೀಕರಣ ಪಡೆಯುತ್ತಿಲ್ಲ | ದೃಡೀಕರಣ ಪಡೆಯಲು ಕ್ರಮವಿಡಲಾಗಿದೆ | ಮುಂದುವರೆದಿದೆ |

**ಸಮಜಾಯಿಷಿ:**

ಸಾಲಗಳ ಬಾಕಿಗಳ ಬಗ್ಗೆ ಸಾಲ ಪಡೆದ ಸದಸ್ಯರುಗಳಿಂದ ಲೆಕ್ಕ ಪರಿಶೋಧನಾ ಸಮಯದಲ್ಲಿ ದೃಢೀಕರಣ ಪಡೆದು, ಅಂದರೆ ವರ್ಷಾಂತ್ಯಕ್ಕೆ ಪಡೆಯುತ್ತಿದ್ದು ಲೆಕ್ಕ ಪರಿಶೋಧಕರ ಸಲಹೆಯಂತೆ ನಿಯಮಿತವಾಗಿ ದೃಢೀಕರಣ ಪಡೆಯಲು ಕ್ರಮವಿಡಲಾಗುವುದು.

| | | | | | |
|---|---|---|---|---|---|
| 3 | 30<br><br>31 | 24ಡಿ(2) ಮತ್ತು<br>24ಡಿ(5) | ಒತ್ತೆ ಇಟ್ಟ ದಾಸ್ತಾನಿನ ಬಗ್ಗೆ ನಿಯಮಿತವಾಗಿ ಮಾಹಿತಿ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಪಡೆಯುತ್ತಿಲ್ಲ ದಾಸ್ತಾನನ್ನು ನಿಯಮಿತವಾಗಿ ಪರಿಶೀಲಿಸುತ್ತಿಲ್ಲ. | ಇದರ ಬಗ್ಗೆ ಕ್ರಮವಿಡಲಾಗಿದೆ | ಮುಂದುವರೆದಿದೆ |

**ಸಮಜಾಯಿಷಿ:**

ಬ್ಯಾಂಕಿನಲ್ಲಿ ಸಾಲ ಪಡೆದ ಸದಸ್ಯರುಗಳಿಂದ ತಮ್ಮ ಸಾಲಕ್ಕೆ ಒತ್ತೆ ಇಟ್ಟ ದಾಸ್ತಾನಿನ ಬಗ್ಗೆ ಮಾಹಿತಿಯನ್ನು ಪ್ರತಿ ಮಾಹೆ ಸಲ್ಲಿಸಲು ಸಾಲಗಾರರುಗಳಿಗೆ ಸೂಚಿಸಿದ್ದು, ಪ್ರತಿ ಮಾಹೆ ನೀಡುತ್ತಿರುತ್ತಾರೆ. ಸಲ್ಲಿಸದ ಸದಸ್ಯ ಸಾಲಗಾರರುಗಳಿಗೆ ದಂಡ ವಿಧಿಸಲಾಗುತ್ತಿದೆ. ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಸಾಲ ನವೀಕರಿಸುವ ಸಂದರ್ಭದಲ್ಲಿ ಪಡೆಯಲಾಗುತ್ತಿದ್ದು, ನಿಯಮಿತವಾಗಿ ಪಡೆಯಲು ಕ್ರಮವಿಡಲಾಗುವುದು.

**12. ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು**

**(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)**

| | |
|---|---|
| 1 | ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ ಕ್ರಮಾನುಸಾರವಾಗಿ ಪಾಲಿಸಲಾಗುತ್ತಿದೆ. |
| 2 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? |

| | |
|---|---|
| | ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ?<br>ಹೌದು. ಅನುಸರಿಸಲಾಗುತ್ತಿದೆ. |
| 3 | ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ<br>ಆರ್.ಬಿ.ಐ. ಸೂಚನೆಗಳನ್ನು ಅನುಸರಿಸಲಾಗುತ್ತಿದೆ. |
| 4 | ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ:<br>ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. |
| 5 | ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ:<br>ಸಹಕಾರ ಇಲಾಖೆಯಿಂದ ಪ್ರಸಕ್ತ ಸಾಲಿಗೆ ಯಾವುದೇ ವಿಚಾರಣೆ ಅಥವಾ ತನಿಖೆ ಯಾಗಿರುವುದಿಲ್ಲ.<br><br>1. ಸಹಕಾರ ಸಂಘಗಳ ನಿಬಂಧಕರ ಆದೇಶದ ಸಂಖ್ಯೆ ಯು.ಬಿ.ಸಿ./1/ದೂರು/88/ವಿಚಾರಣೆ/2016-17 ದಿನಾಂಕ: 06/03/2017 ಮತ್ತು ದಿನಾಂಕ:04/04/2017ರನ್ವಯ ಬ್ಯಾಂಕಿನ ವಿರುದ್ದದ ಕೆಲವೊಂದು ಆರೋಪಗಳ ಬಗ್ಗೆ ನಡೆದಿದ್ದ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ವಿಚಾರಣಾ ವರದಿ ಯಲ್ಲಿನ ಲೋಪ ದೋಷಗಳ ಬಗ್ಗೆ ಬ್ಯಾಂಕು 22/04/2019 ಮತ್ತು 12/03/2020 ರಂದು ಸಲ್ಲಿಸಿದ ಅನುಪಾಲನಾ ವರದಿಯನ್ನು ಒಪ್ಪಿರುವ ಬಗ್ಗೆ ನಿಬಂಧಕರ ಪತ್ರದ ಸಂಖ್ಯೆ ಯು.ಬಿ.ಸಿ./1 ದೂರು 88/2016-17 ದಿನಾಂಕ: 02/07/2021ರಂತೆ ತಿಳಿಸಿ ಪತ್ರ ಬರೆದಿರುವುದನ್ನು ಗಮನಿಸಲಾಗಿದೆ.<br><br>2. ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ: 31/03/2023 ರವರೆಗೆ ಪರಿವೀಕ್ಷಣೆ ನಡೆಸಿದ್ದು ಆರ್.ಬಿ.ಐ. ಪತ್ರದ ಸಂಖ್ಯೆ BLR.DOS.QAG No.S.1771/12.07.144/2023-24 Dated 20-11-2023 ರಂದು ಪರಿವೀಕ್ಷಣಾ ವರದಿಯನ್ನು ಬ್ಯಾಂಕಿಗೆ ಕಳಿಸಲಾಗಿದ್ದು ವರದಿ ಲಭ್ಯವಿರುತ್ತದೆ. ಸದರಿ ವರದಿಗೆ ಬ್ಯಾಂಕು ದಿನಾಂಕ 28-12-2023ರಂದು ಅನುಪಾಲನ ವರದಿ ಸಲ್ಲಿಸಿದೆ.<br><br>1. ಬ್ಯಾಂಕಿನ ದಿನಾಂಕ 31.3.2018ರ ತನಿಖಾವರದಿಯ ಹಿನ್ನಲೆಯಲ್ಲಿ ದಿನಾಂಕ 31.3.2018ಕ್ಕೆ ಬ್ಯಾಂಕ್ ಒಟ್ಟು ಅನುತ್ಪಾದಕ ಆಸ್ತಿ ಶೇ. 13.73% ಗಳನ್ನು ಹೊಂದಿದ್ದರಿಂದ ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 36(1) ರಂತೆ ತನ್ನ ಪತ್ರದ ಸಂಖ್ಯೆ ಡಿ.ಸಿ.ಬಿ.ಎಸ್.(ಬಿ.ಜಿ.) ನಂ. 1616/09.01.144/2018-19, ದಿ. 21.01.2019 ರಂತೆ ಮೇಲುಸ್ತುವಾರಿ (SAF) ಕ್ರಮ ತೆಗೆದುಕೊಂಡಿದ್ದು, ಈ ಕೆಳಕಂಡ ನಿರ್ದೇಶನಗಳನ್ನು ಬ್ಯಾಂಕಿಗೆ ನೀಡಿದೆ.<br><br>1. ಸಾಲ ನೀಡಿಕೆಯ ವ್ಯಾಪ್ತಿ ಹಾಗೂ ಗುಂಪಿನ (exposure limit) ಮಿತಿಯನ್ನು ಅರ್ಹತೆ ಇರುವ ಮಿತಿಯಲ್ಲಿ ಶೇ. 25 ರಷ್ಟು ಕಡಿತಗೊಳಿಸಬೇಕು.<br>2. ರಿಯಲ್ ಎಸ್ಟೇಟ್, ಸ್ಟಾಕ್ ಮಾರ್ಕೇಟ್ ಇತ್ಯಾದಿ ಸೂಕ್ಷ್ಮವಾದ ಗುಂಪುಗಳಿಗೆ ಸಾಲ ನೀಡುವಂತಿಲ್ಲ. ಇಂತಹ ಗುಂಪುಗಳು ಹಾಗೂ ಕೈಗಾರಿಕೆಗಳು, ಇವುಗಳ ಸಂಬಂಧ ಎನ್.ಪಿ.ಎ. ಹೆಚ್ಚಾಗಿರುವ ಪ್ರಕರಣಗಳಲ್ಲಿ ಸಾಲ ನೀಡಿಕೆಯನ್ನು ಕಡಿಮೆ ಮಾಡುವುದು.<br>3. ಬ್ಯಾಂಕಿನ ಯಾವುದೇ ಹೊಸ ಶಾಖೆ ತೆರೆಯುವಂತಿಲ್ಲ ಹಾಗೂ ಈಗಿರುವ ಕಾರ್ಯ ವ್ಯಾಪ್ತಿ ವಿಸ್ತರಿಸುವಂತಿಲ್ಲ.<br>4. ಆರ್.ಬಿ.ಐ. ಪೂರ್ವಾನುಮತಿ ಇಲ್ಲದೆ ಸದಸ್ಯರಿಗೆ ಷೇರುಡಿವಿಡೆಂಡ್ ಘೋಷಿಸುವಂತಿಲ್ಲ. |

5. ಎನ್.ಪಿ.ಎ. ಯನ್ನು ವಸೂಲಿ ಮಾಡಲು ಕಾರ್ಯಸಾಧನಾ ಯೋಜನೆಯನ್ನು ತಯಾರಿಸಿ ಕಳುಹಿಸಬೇಕು. ಹೊಸ ಎನ್.ಪಿ.ಎ. ಉತ್ಪತ್ತಿಯಾಗದಂತೆ ಕ್ರಮವಿಡುವ ಬಗ್ಗೆ ಈ ಯೋಜನೆಯಲ್ಲಿ ಸೇರಿಸಬೇಕು.

6. ಬ್ಯಾಂಕು ತನ್ನ ಸಾಲ ನೀತಿಯನ್ನು ಪುನರ್ ವಿಮರ್ಶೆಗೆ ಒಳಪಡಿಸಬೇಕು. ಸಾಲ ಹಂಚಿಕೆ ಮತ್ತು ವಸೂಲಿಗೆ ಸಂಬಂಧಿಸಿದ ಕುಶಲತೆ ಮತ್ತು ಪದ್ಧತಿಗಳನ್ನು ಉನ್ನತೀಕರಿಸಲು ಅಗತ್ಯ ಕ್ರಮವಿಡಬೇಕು. ದೊಡ್ಡ ಮೊತ್ತದ ಸಾಲಗಳ ಹಂಚಿಕೆಗೆ ಸಂಬಂಧಿಸಿದ ಕಾರ್ಯತಂತ್ರಗಳನ್ನು ದೃಢಗೊಳಿಸಲು ಪುನರ್ ವಿಮರ್ಷೆ ಮಾಡಬೇಕು. ಕಾನೂನು ಕ್ರಮಗಳ ಬಗ್ಗೆ ಪರಿಣಾಮಕಾರಿ ಕ್ರಮವಿಡಬೇಕು. ಪ್ರಾರಂಭದಲ್ಲೆ ಎನ್.ಪಿ.ಎ. ಆಗಬಹುದಾದ ಸಾಲಗಳನ್ನು ಗುರುತಿಸಿ, ತಪ್ಪಿಸಲು ಕ್ರಮವಿಡಬೇಕು.

7. ಆಡಳಿತ ಮಂಡಳಿ ಪ್ರತಿ ತಿಂಗಳು ಹೆಚ್ಚಿನ ಮೊತ್ತದ ಮೊದಲ 30 ಎನ್.ಪಿ.ಎ. ಒಳಗೊಂಡ ಸಾಲದ ಖಾತೆಗಳನ್ನು ಪರಿಶೀಲನೆಗೊಳಪಡಿಸಿ, ಅದರ ವರದಿಯನ್ನು ಆರ್.ಬಿ.ಐ. ಗೆ ಸಲ್ಲಿಸಬೇಕು. ತ್ರೈಮಾಸಿಕವಾಗಿ ಆರ್.ಬಿ.ಐ. ನಲ್ಲಿ ಆಡಳಿತ ಮಂಡಳಿಯ ಮೇಲುಸ್ತುವಾರಿ ಸಭೆಯನ್ನು ನಡೆಸುವುದು.

8. ಬ್ಯಾಂಕು ತನಿಖಾ ವರದಿಯಲ್ಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಬೇಕು ಮತ್ತು ತೃಪ್ತಿಕರವಾದ ಅನುಪಾಲನಾ ವರದಿಯನ್ನು ಸಲ್ಲಿಸಬೇಕು, ಮುಂದೆ ಅದೇ ರೀತಿ ಅನುಸರಣೆ ಮಾಡಬೇಕು.

ವರದಿ ಸಾಲಿನಾಂತ್ಯಾಕ್ಕೂ ಸದರಿ ಮೇಲುಸ್ತುವಾರಿ ಕ್ರಮಗಳು ಮುಂದುವರೆದಿವೆ. ಭಾರತೀಯ ರಿಸರ್ವ್ ಬ್ಯಾಂಕಿನ ದಿನಾಂಕ: 31/03/2023ರ ಪರಿವೀಕ್ಷಣಾ ವರದಿಯಲ್ಲಿ ಮೇಲ್ಕಂಡ ವಿಷಯವನ್ನು ಪ್ರಸ್ತಾಪಿಸಿದ್ದು, ಬ್ಯಾಂಕಿನ ಒಟ್ಟಾರೆ ಎನ್.ಪಿ.ಎ. ಯನ್ನು ಕಡಿಮೆ ಮಾಡಲು ವಿಶೇಷ ಸಾಲ ವಸೂಲಾತಿ ಕ್ರಮಗಳನ್ನು ತೆಗೆದುಕೊಂಡು ಎನ್.ಪಿ.ಎ.ಯನ್ನು ನಿಗದಿತ ಮಿತಿಗೆ ತರಲು, ಆ ಮೂಲಕ ಆರ್.ಬಿ.ಐ. ನ ಮೇಲುಸ್ತುವಾರಿ ಕ್ರಮದಿಂದ ಹೊರಬರಲು ಸೂಚಿಸಲಾಗಿದೆ.

**ಸಮಜಾಯಿಷಿ:**

ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕಿನ ಮೇಲುಸ್ತುವಾರಿ ಕ್ರಮದಿಂದ (SAF) ಹೊರಬರಲು ಭಾರತೀಯ ರಿಸರ್ವ್ ಬ್ಯಾಂಕಿನ ಆರ್ಥಿಕ ಮಾನದಂಡದಂತೆ (Financial Parameter) ಶೇಕಡ 6 ರೊಳಗೆ ನಿವ್ವಳ ಎನ್.ಪಿ.ಎ. ಯನ್ನು ನಿರ್ವಹಿಸಬೇಕಾಗುತ್ತದೆ. ಅದರಂತೆ ನಮ್ಮ ಬ್ಯಾಂಕು ವರದಿ ಸಾಲಿನಲ್ಲಿ **ಶೇಕಡ 3.05** ರಷ್ಟು ನಿವ್ವಳ ಎನ್.ಪಿ.ಎ. ಯನ್ನು ನಿರ್ವಹಿಸಿರುತ್ತದೆ. ಇದರನ್ವಯ ಭಾರತೀಯ ರಿಸರ್ವ್ ಬ್ಯಾಂಕಿಗೆ ಮೇಲುಸ್ತುವಾರಿ ಕ್ರಮದಿಂದ ತೆಗೆಯುವಂತೆ ದಿನಾಂಕ 03.07.2024 ರಂದು ಪತ್ರದ ಮೂಲಕ ಕೋರಲಾಗಿತ್ತು. ಸದರಿಯವರಿಂದ ನಮ್ಮ ಕೋರಿಕೆಗೆ ದಿನಾಂಕ 06.08.2024 ರಂದು ಉತ್ತರಿಸಿ, ಸದರಿ ಪತ್ರದಲ್ಲಿ ಮಾರ್ಚ್ ಅಂತ್ಯದ ಆರ್ಥಿಕ ಪ್ರಗತಿಯನ್ನು ಪರಿಶೀಲಿಸಿ ಮುಂದಿನ ಕ್ರಮವಿಡುವುದಾಗಿ ತಿಳಿಸಿರುತ್ತಾರೆ.

ಬ್ಯಾಂಕು ದಿನಾಂಕ: 28–12–2023 ರಲ್ಲಿ ಆರ್.ಬಿ.ಐ.ಗೆ ಸಲ್ಲಿಸಿದ ಅನುಪಾಲನಾ ವರದಿಯಲ್ಲಿ ಬ್ಯಾಂಕಿನ ಸುಸ್ತಿ ಸಾಲಗಳನ್ನು ವಸೂಲಿ ಮಾಡಲು ಇಟ್ಟಿರುವ ಕಾನೂನಾತ್ಮಕ ಕ್ರಮಗಳನ್ನು ವಿವರಿಸಲಾಗಿದೆ.

2. ಬ್ಯಾಂಕಿನಲ್ಲಿ ವ್ಯವಸ್ಥಾಪನಾ ಮಂಡಳಿಯನ್ನು (Board of Management - BOM) ಸ್ಥಾಪಿಸುವ ಬಗ್ಗೆ.

ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ DOR (PCB) BPD. CIR. NO. 8/ 12.05.002.2019–20. ದಿ. 31.12.2019 ರಂತೆ ರೂ.100 ಕೋಟಿ ಮೀರಿದ ಠೇವಣಿಗಳನ್ನು ಹೊಂದಿರುವ ಬ್ಯಾಂಕ್‌ಗಳು ತಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಎಂಬ ಸಮಿತಿಯನ್ನು ಏರ್ಪಾಡು ಮಾಡಿಕೊಳ್ಳುವುದು ಕಡ್ಡಾಯ ಎಂದು ತಿಳಿಸಲಾಗಿದೆ. ಇದರಂತೆ ಬ್ಯಾಂಕು ದಿನಾಂಕ 31–05–2021 ರಂದು ಬ್ಯಾಂಕಿನಲ್ಲಿ ವ್ಯವಸ್ಥಾಪನಾ ಮಂಡಳಿಯನ್ನು ರಚಿಸಿದ್ದು. ವರದಿ ಸಾಲಿನಲ್ಲಿ 2 ಸಭೆಗಳು ನಡೆದಿರುತ್ತದೆ.

## ಭಾಗ – 3

## ಬ್ಯಾಂಕಿನ ವ್ಯಾವಹಾರಿಕ ವಿವರಗಳು

**13) ದಿನಾಂಕ 31–03–2024 ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 36091 | 36622 | 596 | 573 | – | – |
| ಹೊಸದಾಗಿ ಸದಸ್ಯತ್ವ ಪಡೆದವರು | 214 | 253 | 31 | 53 | – | – |
| ಸದಸ್ಯತ್ವದಿಂದ ಕಡಿಮೆ ಆದವರು | 1980 | 784 | 277 | 30 | – | – |
| ಸಾಲಾಖೈರಿಗೆ ಇರುವ ಸದಸ್ಯರು | 34325 | 36091 | 350 | 596 | – | – |

| | |
|---|---|
| ಸದಸ್ಯತ್ವದ ಬಗ್ಗೆ ವಿಮರ್ಷೆ | – ಬ್ಯಾಂಕಿನ ಸಾಮಾನ್ಯ ಸದಸ್ಯರ ಸಂಖ್ಯೆಯು ಹಿಂದಿನ ಸಾಲಿನ ಸಂಖ್ಯೆಗೆ ಹೋಲಿಸಿದಾಗ ವರದಿ ಸಾಲಿನಲ್ಲಿ 1766 ಸದಸ್ಯರ ಸಂಖ್ಯೆಯಲ್ಲಿ ಇಳಿಮುಖವಾಗಿರುತ್ತದೆ. ಇದು ಶೇಕಡ 4.89 ರಷ್ಟಿರುತ್ತದೆ.<br>– ಬ್ಯಾಂಕಿನಲ್ಲಿ ವರದಿ ಸಾಲಿನ ಅಂತ್ಯಕ್ಕೆ 350 ನಾಮಮಾತ್ರ ಸದಸ್ಯರಿದ್ದು ಇದು ರೆಗ್ಯೂಲರ್ ಸದಸ್ಯತ್ವದ ಒಟ್ಟು ಸಂಖ್ಯೆಗೆ ಶೇಕಡ 1.02 ರಷ್ಟು ಇರುತ್ತದೆ.<br>– ಸದಸ್ಯತ್ವ ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ. |
| ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹ ಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟರನ್ನು ಮೀರತಕ್ಕದಲ್ಲ, ಒಂದು ವೇಳೆ ಈಗಾಗಲೇ ಸದರಿ | ಬ್ಯಾಂಕಿನಲ್ಲಿ ಸಹ ಸದಸ್ಯತ್ವ ಇರುವುದಿಲ್ಲ. ಆದ್ದರಿಂದ ಅನ್ವಯಿಸುವುದಿಲ್ಲ. |

| | |
|---|---|
| ಪ್ರಮಾಣ 15 ಪ್ರತಿಶತಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕದಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ದ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಂಘದಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು. | |
| ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ | ಅಗತ್ಯವಾದ ಎಲ್ಲಾ ದಾಖಲೆಗಳನ್ನು ಪಡೆದು ಪರಿಶೀಲಿಸಲಾಗಿದೆ. |

**ಬ್ಯಾಂಕಿನ ಸದಸ್ಯರೊಡನೆ ಕೈಕೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ :**

| | | |
|---|---|---|
| 1 | ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಬ್ಯಾಂಕು ಸಾಮಾನ್ಯ ಸದಸ್ಯತ್ವ ಮತ್ತು ನಾಮಮಾತ್ರ ಸದಸ್ಯತ್ವಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಸಹಸದಸ್ಯತ್ವ ಇರುವುದಿಲ್ಲ.<br>ನಾಮಮಾತ್ರ ಸದಸ್ಯರಿಗೆ ಮತ ನೀಡುವ, ಆಡಳಿತ ದಲ್ಲಿ ಪಾಲ್ಗೊಳ್ಳುವ, ಡಿವಿಡೆಂಡ್ ಪಡೆಯುವ ಹಕ್ಕು ಇರುವುದಿಲ್ಲ. |
| 2 | ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ರಂತೆ (ಸಹಕಾರ ಸಂಘಗಳಿಗೆ ಅನ್ವಯವಾಗುವಂತೆ) ಸದಸ್ಯರೇತರರಿಂದ ಠೇವಣೆ ಸಂಗ್ರಹಣೆ ಹಾಗು ಇನ್ನಿತರೆ ಬ್ಯಾಂಕಿಂಗ್ ವ್ಯವಹಾರ ನಡೆಸಲಾಗುತ್ತದೆ. |
| 3 | ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು | ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| 4 | ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ | ಕೆಳಗಿನ ಕಂಡಿಕೆಯಲ್ಲಿ ವಿವರಿಸಿದೆ. |

**14) ಷೇರು ಬಂಡವಾಳ ಬಗ್ಗೆ ವಿಮರ್ಷೆ :**

**1) ಅಧಿಕೃತ ಷೇರು ಬಂಡವಾಳ :**

| | |
|---|---|
| ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಬಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು. | ಉಪನಿಯಮ 10ರಂತೆ ಬ್ಯಾಂಕಿನಲ್ಲಿ ಪ್ರತಿ ಷೇರಿನ ಮುಖಬೆಲೆ ರೂ.100/–ಗಳು ದಿನಾಂಕ 21.09.2015ರ ಮಹಾ ಸಭೆಯಲ್ಲಿ ಬ್ಯಾಂಕಿನ ಅಧಿಕೃತ ಷೇರು ಬಂಡವಾಳವನ್ನು ರೂ.30.00 ಕೋಟಿ ಎಂದು ನಿಗಧಿಪಡಿಸಲಾಗಿದೆ. |

**ದಿನಾಂಕ 31–03–2024 ಕ್ಕೆ ಇರುವಂತೆ ಬ್ಯಾಂಕಿನ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.**

(ರೂ.ಲಕ್ಷಗಳಲ್ಲಿ)

| ಷೇರು ಬಂಡವಾಳ | ಸರ್ಕಾರದ ಷೇರು | | ಸಾಮಾನ್ಯ ಷೇರು | | ನಾಮಮಾತ್ರ ಸದಸ್ಯರ ಷೇರು | | ಸಹ ಸದಸ್ಯರ ಷೇರು | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | – | – | 1597.48 | 1627.55 | – | – | – | – |
| ಪ್ರಸಕ್ತ ಸಾಲಿನಲ್ಲಿನ ಜಮಾ | – | – | 108.75 | 31.56 | – | – | – | – |
| ಪ್ರಸಕ್ತ ಸಾಲಿನಲ್ಲಿನ ಖರ್ಚು | – | – | 245.96 | 61.63 | – | – | – | – |
| ಸಾಲಾಖೈರಿಗೆ ಇದ್ದಂತೆ | – | – | 1460.27 | 1597.48 | – | – | – | – |

ಪ್ರಸಕ್ತ ವರ್ಷಾಂತ್ಯದಲ್ಲಿರುವ ಷೇರು ಮೊಬಲಗು ಹಿಂದಿನ ಸಾಲಿನ ಅಂತ್ಯದ ಷೇರು ಮೊಬಲಗಿಗೆ ಹೋಲಿಸಿದಾಗ ಶೇ. 8.59% ರಷ್ಟು ಇಳಿಕೆಯಾಗಿರುತ್ತದೆ.

**ಸರ್ಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಶೆ :**

ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು.

ಸರ್ಕಾರದ ಷೇರು ಧನ ಇರುವುದಿಲ್ಲ.

**ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ**

(ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಷಿಸುವುದು.)

ಸಂದಾಯವಾದ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿದೆ.

ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ ? ತಾಳೆಯಾಗಿದೆಯೇ ?

(ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು)

ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ.

**15) ಮೀಸಲು ನಿಧಿ ಮತ್ತು ಇತರೆ ನಿಧಿಗಳು : 'ಶೆಡ್ಯೂಲ್ ಯು' ನಲ್ಲಿರುವ ಪ್ರಕಾರ**

1 ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖೈರಿಗೆ ಸಂಘಕ್ಕೆ ಜಮಾ. ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.

ದಿ.31.03.2024ಕ್ಕೆ ಬ್ಯಾಂಕ್ ರೂ. 18,74,65,436/– ಗಳ ಆಪದ್ಧನ ನಿಧಿ ಹೊಂದಿರುತ್ತದೆ. ಸದರಿ ಮೊಬಲಗನ್ನು ಪೂರ್ಣವಾಗಿ ಸರ್ಕಾರಿ ಭದ್ರತೆಯ ಪರಿಪಕ್ವತೆಯ (HTM) ವರ್ಗಗಳಲ್ಲಿ ರೂ. 19,46,20,000–00 ಗಳನ್ನು ಹೂಡಿಕೆ ಮಾಡಿ 'ಇಯರ್ ಮಾರ್ಕ್' ಮಾಡಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ DCBR.CEO.BPD(PCM) MC NO. 13/ 19.5.000/2015–16; DATED 01.07.2015 ರಂತೆ, ಪ್ರತಿ ಬ್ಯಾಂಕಿನಲ್ಲಿ ಹೂಡಿರುವ ಹೂಡಿಕೆಯು ಹಿಂದಿನ ಸಾಲಾಂತ್ಯಕ್ಕೆ ಉಳಿದಿರುವ ತನ್ನ ಠೇವಣಿಗಳ ಶೇ.5% ರಷ್ಟನ್ನು ಮೀರಬಾರದು, ಹಾಗು ಬ್ಯಾಂಕು ಹೊಂದಿರುವ ಇತರೆ ಎಲ್ಲಾ ಬ್ಯಾಂಕುಗಳಲ್ಲಿನ ಹೂಡಿಕೆ ಮೊತ್ತ ಹಿಂದಿನ ಸಾಲಿನ ಅಂತ್ಯಕ್ಕೆ ಉಳಿದಿರುವ ತನ್ನ ಠೇವಣಿಗಳ ಶೇ.20ರನ್ನು ಮೀರಬಾರದೆಂದು ತಿಳಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಎಲ್ಲಾ ಹೂಡಿಕೆಗಳಿಂದ ರೂ. 1397.86 ಲಕ್ಷಗಳ ಬಡ್ಡಿ ಜಮಾ ಬಂದಿರುತ್ತದೆ.

2 ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58 ರ ಅಂಶಗಳನ್ನು ಪಾಲಿಸಲಾಗಿದೆಯೆ? ಈ ಕೆಳಕಂಡ ವಿವರಗಳಿಗೊಳಪಟ್ಟು ಪಾಲಿಸಲಾಗಿದೆ.

2022–23ನೇ ಸಾಲಿಗೆ ಬ್ಯಾಂಕ್ ಕ್ರೋಢಿಕೃತ ನಷ್ಟ ಹೂಂದಿರುತ್ತದೆ, ವರದಿ ಸಾಲಿನಲ್ಲಿ ನಿಧಿಗಳ ನಿಯೋಜನೆ ಮಾಡುವಾಗ ಕಾಯಿದೆ ಕಲಂ 58ರಅಂಶಗಳನ್ನು ಪಾಲಿಸಲಾಗಿದೆ.

ಬ್ಯಾಂಕು 2022–23ನೇ ಸಾಲಿಗೆ ಕ್ರೋಡೀಕೃತ ನಷ್ಟ ಹೊಂದಿರುವುದರಿಂದ ಸದಸ್ಯರಿಗೆ ಡಿವಿಡೆಂಡ್ ಹಂಚಿರುವುದಿಲ್ಲ.

ಪ್ರಸ್ತುತ ಬ್ಯಾಂಕ್, ಬ್ಯಾಂಕಿಂಗ್ ನಿಯಂತ್ರಣಾ ಕಾಯ್ದೆ ಕಲಂ36(1)ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಮೇಲುಸ್ತುವಾರಿ ನಿಬಂಧನೆಗೆ ಒಳಪಟ್ಟಿದ್ದು, ಸದಸ್ಯರಿಗೆ ಡಿವಿಡೆಂಡ್ ಹಂಚಲು ಆರ್.ಬಿ.ಐ.ನ ಪೂರ್ವಾನುಮತಿ ಅಗತ್ಯವಾಗಿರುತ್ತದೆ

3 ಬ್ಯಾಂಕು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆಯದಿದ್ದಲ್ಲಿ, ಸದರಿ ಆದೇಶದ ಷರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು.

ಅಂತಹ ಪ್ರಕರಣ ಕಂಡುಬಂದಿರುವುದಿಲ್ಲ.

4 ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು.

ಅನ್ವಯಿಸುವುದಿಲ್ಲ

5 ಬ್ಯಾಂಕು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4) (ಬಿ) ಯ ಉಲ್ಲಂಘನೆಯಾಗಿದೆಯೇ ?

ಬ್ಯಾಂಕು 2022–23ನೇ ಸಾಲಿಗೆ ಕ್ರೋಡೀಕೃತ ನಷ್ಟ ಹೊಂದಿರುವುದರಿಂದ ಸಹಕಾರ ಶಿಕ್ಷಣ ನಿಧಿ ವಂತಿಗೆಯನ್ನು ಪಾವತಿಸಿರುವುದಿಲ್ಲ.

**16) ಹೊರಗಿನಿಂದ ಪಡೆದ ಸಾಲಗಳು:**

| | |
|---|---|
| ಬ್ಯಾಂಕು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ | ಬ್ಯಾಂಕಿನ ಉಪನಿಯಮ 6ಸಿ ಅಂತೆ ಹಣಕಾಸು ಸಂಸ್ಥೆ ಬ್ಯಾಂಕುಗಳಿಂದ ಸಾಲಗಳನ್ನು ಪಡೆಯಲು ಅವಕಾಶವಿದೆ. ಆದರೆ ಬ್ಯಾಂಕು ಯಾವುದೇ ಸಾಲ ಪಡೆದಿರುವುದಿಲ್ಲ. |

**1 ಬ್ಯಾಂಕಿನಿಂದ ಪಡೆದ ಸಾಲಗಳು:**

ಎ] ಬ್ಯಾಂಕಿನ ಹೆಸರು ಮತ್ತು ಶಾಖೆ ಅನ್ವಯಿಸುವುದಿಲ್ಲ

ಬಿ] ಹೊರಗಿನಿಂದ ಪಡೆದ ವಿವಿದ ಸಾಲದ ವಿವರ:

| **ಕ್ರ.ಸಂ** | **ಸಾಲದ ವಿವರ** | **ಆರಂಭದ ಬಾಕಿ** | **ಸಾಲ ತಂದಿದ್ದು** | **ಸಾಲ ಮರುಪಾವತಿ** | **ವರ್ಷಾಂತ್ಯದ ಬಾಕಿ** |
|---|---|---|---|---|---|
| 1 | ನಗದು ಪತ್ತಿನ ಸಾಲ | ಅನ್ವಯಿಸುವುದಿಲ್ಲ | | | |
| 2 | ಇನ್ನಿತರೆ ಸಾಲಗಳು | | | | |

| | |
|---|---|
| ಸಿ] ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ | ಅನ್ವಯಿಸುವುದಿಲ್ಲ |
| ಡಿ] ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.3.2024 ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |
| **2 ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ:** [ಸಾಲಾಂತ್ಯ ದಿ: 31.3.2024 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು] | ಅನ್ವಯಿಸುವುದಿಲ್ಲ |
| **3 ಸರ್ಕಾರದ ಸಾಲಗಳು:** {ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ, 31.3.2024 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ವಿಮರ್ಷೆ] | ಬ್ಯಾಂಕು ಯಾವುದೇ ಸರ್ಕಾರಿ ಸಾಲವನ್ನು ಪಡೆದಿರುವುದಿಲ್ಲ. |

| | |
|---|---|
| 4. ಬ್ಯಾಂಕು ಹೊರಗಿನಿಂದ ಪಡೆದ ಸಾಲದ ವರ್ಷಾಂತ್ಯಕ್ಕೆ ಕೊಡತಕ್ಕ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.) | ಅನ್ವಯಿಸುವುದಿಲ್ಲ |

**17) ಠೇವಣಿಗಳು :**

1 ಬ್ಯಾಂಕು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ

ಉಪನಿಯಮ 6ಬಿ, 7 ಮತ್ತು 8 ರಂತೆ ಬ್ಯಾಂಕು ವಿವಿಧ ಠೇವಣಿಗಳನ್ನು ಸಂಗ್ರಹಿಸಲು ಅವಕಾಶವಿದೆ.

ಮೇಲ್ಕಂಡ ಉಪನಿಯಮಗಳು ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆ ಅನ್ವಯ ಈ ಬ್ಯಾಂಕು, ಸದಸ್ಯರು ಮತ್ತು ಸದಸ್ಯರೇತರರಿಂದ ಮುಂದಿನ ಕಂಡಿಕೆಯಲ್ಲಿ ತಿಳಿಸಿರುವಂತೆ, ಠೇವಣಿಗಳನ್ನು ಸಂಗ್ರಹಿಸಿರುತ್ತದೆ.

(ರೂ. ಲಕ್ಷಗಳಲ್ಲಿ)

| ಠೇವಣಿ ವಿವರಗಳು | ಆರಂಭ ಬಾಕಿ | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಹಿಂದಿನ ಸಾಲಿಗೆ ಹೋಲಿಸಿದಾಗ ಅಂತರ ಶೇಕಡಾವಾರು ಪ್ರಮಾಣ ಏರಿಕೆ/ಇಳಿಕೆ |
|---|---|---|---|---|---|---|
| 1) ಖಾಯಂ ಠೇವಣಿ | 13749.64 | 16291.53 | 19751.40 | 10289.77 | 10289.77 | –25.16 |
| 2) ಶ್ರೀನಿಧಿ ಠೇವಣಿ–1 | 17083.36 | 15525.87 | 19152.85 | 13456.38 | 13456.38 | –21.23 |
| 3) ಶ್ರೀವಾರಿಧಿ ಠೇವಣಿ | 22.99 | 1.07 | 1.33 | 22.73 | 22.73 | –1.13 |
| 4) ರೀಕರಿಂಗ್ ಠೇವಣಿ | 586.93 | 459.53 | 540.06 | 506.40 | 506.40 | –13.72 |

| | | | | | | |
|---|---|---|---|---|---|---|
| 5) ಪಿಗ್ಮಿ ಠೇವಣಿ | 992.43 | 3660.23 | 3603.41 | 1049.25 | 1049.25 | 5.73 |
| 6) ಭದ್ರತಾ ಠೇವಣಿ | 147.90 | 11.03 | 12.60 | 146.33 | 146.33 | –1.06 |
| 7) ಉಳಿತಾಯ ಖಾತೆಗಳು | 6888.88 | 41136.62 | 41881.51 | 6143.99 | 6143.99 | –10.81 |
| 8) ಚಾಲ್ತಿಖಾತೆಗಳು | 1094.61 | 18462.31 | 18660.54 | 896.38 | 896.38 | –18.11 |
| 9) ಅವಧಿ ಮುಗಿದ ಠೇವಣಿ | 5.21 | 1572.72 | 1573.21 | 4.72 | 4.72 | –9.40 |
| 10) ಸಾಲಗಳ ಮೀರೆಳೆತ (ಕ್ರೆಡಿಟ್) | 3.31 | 2.34 | – | 5.65 | 5.65 | 70.69 |
| **ಒಟ್ಟು ಮೊತ್ತ** | **40,575.26** | **97,123.25** | **1,05,176.91** | **32,521.60** | **32,521.60** | **–19.85** |

ಹಿಂದಿನ ಸಾಲಿಗೆ ಹೋಲಿಸಿದಾಗ ಪ್ರಸಕ್ತ ಸಾಲಿನ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ. 8053.66 ಲಕ್ಷಗಳಷ್ಟು ಠೇವಣಿ ಸಂಗ್ರಹಣೆಯಲ್ಲಿ ಇಳಿಕೆಯಾಗಿದ್ದು ಇದು ಶೇ. 19.85 ರಷ್ಟಿದೆ.

**ಒಟ್ಟು ಠೇವುಗಳ ಕಳೆದ 02 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ:**

**(ರೂ. ಲಕ್ಷಗಳಲ್ಲಿ)**

| **2023–24ಕ್ಕೆ** | **2022–23ಕ್ಕೆ** | **2021–22ಕ್ಕೆ** |
|---|---|---|
| 32,521.60 | 40,575.26 | 46,783.18 |

**ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಷೆ :**

ಪ್ರಸಕ್ತ ಸಾಲಿನ ಅಂತ್ಯಕ್ಕೆ ಠೇವಣಿಯ ಮೊತ್ತವು ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಮೊತ್ತಕ್ಕಿಂತಲೂ ಶೇ.19.85% ರಷ್ಟು ಇಳಿಕೆಯಾಗಿರುತ್ತದೆ.

| | |
|---|---|
| 3 ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? | ಹೌದು. 2023–2024ರ ಅಂತ್ಯಕ್ಕೆ 22766 ಸದಸ್ಯರೇತರರ ಖಾತೆಗಳಿಂದ ರೂ.18878.53 ಲಕ್ಷಗಳ ಠೇವಣಿ ಸಂಗ್ರಹಿಸಲಾಗಿದೆ. |
| 4 ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ಹೌದು. ಆಡಳಿತ ಮಂಡಳಿ ನಿರ್ಧರಿಸಿದ ದರಗಳಿಗನುಗುಣವಾಗಿ ಬಡ್ಡಿಯನ್ನು ಪಾವತಿಸಲಾಗಿದೆ. ವರದಿ ವರ್ಷದಲ್ಲಿ ರೂ. 2082.87 ಲಕ್ಷಗಳ ಬಡ್ಡಿ ಪಾವತಿಸಿದೆ. |
| 5 ಠೇವಣಿದಾರರಿಗೆ ಪಾಸ್ ಪುಸ್ತಕ / ಸರ್ಟಿಫಿಕೇಟ್ ನೀಡಲಾಗಿದೆಯೇ? | ಹೌದು, ನೀಡಲಾಗಿದೆ. |

| | | |
|---|---|---|
| 6 | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ | ಅವಧಿ ಠೇವಣಿಗಳ ಬಾಬ್ತು ಮಾಸಿಕ ಮತ್ತು ತ್ರೈಮಾಸಿಕವಾಗಿ ಬಡ್ಡಿ ನೀಡಲಾಗುತ್ತದೆ. ಆದರೂ, ವರ್ಷಾಂತ್ಯಕ್ಕೆ ಕೊಡಬೇಕಾದ ಬಡ್ಡಿ ರೂ. 164.71 ಲಕ್ಷಗಳಿದ್ದು, ಸದರಿ ಮೊಬಲಗನ್ನು ವರ್ಷಾಂತ್ಯಕ್ಕೆ ಕಾದಿರಿಸಲಾಗಿದೆ.<br>ಉಳಿತಾಯ ಠೇವಣಿ, ಆವರ್ತಕ ಠೇವಣಿಗಳಿಗೆ ವರ್ಷಾಂತ್ಯಕ್ಕೆ ಬಡ್ಡಿ ಆಕರಣೆ ಮಾಡಿ ಠೇವಣಿಗೆ ಸೇರಿಸಲಾಗುತ್ತಿದೆ. |
| 7 | ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ? | ಹೌದು |
| 8 | ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್. | ಬ್ಯಾಂಕಿನಲ್ಲಿ 10 ಜನ ಪಿಗ್ಮಿ ಏಜೆಂಟರುಗಳಿರುತ್ತಾರೆ. ವರದಿ ಸಾಲಿನಲ್ಲಿ ಅವರು ಸಂಗ್ರಹಿಸಿದ ಠೇವಣಿಗಳ ಮೇಲೆ ಶೇ.2.5% ರಷ್ಟು ಕಮೀಷನ್ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ ಒಟ್ಟು ರೂ. 45.73 ಲಕ್ಷ ಕಮಿಷನ್ ನೀಡಲಾಗಿದೆ. |
| 9 | ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ? | ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಲಾಗುತ್ತಿದೆ. |

10 ಆನಿಶ್ಚಿತ ಜವಾಬ್ದಾರಿಗಳು : (Contingent Liabilities)

ದಿನಾಂಕ 31.03.2024ಕ್ಕೆ ಈ ಕೆಳಕಂಡ ಅನಿಶ್ಚಿತ ಜವಾಬ್ದಾರಿಗಳನ್ನು ಬ್ಯಾಂಕು ಹೊಂದಿರುತ್ತದೆ.

ಅ) ಠೇವಣಿದಾರರ ಶಿಕ್ಷಣ ಮತ್ತು ಅರಿವು ನಿಧಿ (ಡಿ.ಇ.ಎ.ಎಫ್) – ರೂ. 2,21,69,456.50
ಆ) ಬ್ಯಾಂಕ್ ಖಾತರಿ – ರೂ. 2,10,000.00

1) ಪ್ರಸಕ್ತ 2023–24ರ ಅವಧಿಯಲ್ಲಿ 429 ಠೇವಣಿಗಳ ಮೊಬಲಗೂ ರೂ 11,91,623.34 ಡಿ.ಇ.ಎ.ಎಫ್ ಗೆ ವರ್ಗಾಯಿಸಲಾಗಿದೆ. ಒಟ್ಟಾರೆ ಕಳೆದ 10 ವರ್ಷಗಳಿಂದ ಸತತವಾಗಿ ವ್ಯವಹರಿಸದ 9857 ಠೇವಣಿ ಹಾಗೂ ಇತರೆ ಖಾತೆಗಳಲ್ಲಿನ ಮೊಬಲಗು ರೂ.2,21,69,456.50ಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಠೇವಣಿದಾರರ ಶಿಕ್ಷಣ ಮತ್ತು ಅರಿವು ನಿಧಿ (ಡಿ.ಇ.ಎ.ಎಫ್)ಗೆ ವರ್ಗಾಯಿಸಲಾಗಿದೆ.

2) ದಿನಾಂಕ 31.3.2024 ಕ್ಕೆ ಬ್ಯಾಂಕು ನೀಡಿರುವ ಬ್ಯಾಂಕ್ ಖಾತರಿ ಮೊತ್ತ ರೂ. 2,10,000–00 ಗಳಿಗೆ ಕುಳುವಾರು ಪಟ್ಟಿಯನ್ನು ತಯಾರಿಸಿದ್ದು ತಾಳೆ ಇರುತ್ತದೆ.

ದ್ರವ್ಯಾಸ್ತಿಗಳ (ಪ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/CRRಗಳ ನಿರ್ವಹಣೆ–ಶಾಖೆಗಳ ವಾರದ ಆಖೈರಾದ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಆ್ಯಂಡ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿ ಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ?

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) ಕಲಂ 18 ಮತ್ತು 24ರ ಅಡಿ ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕ್ ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸಬೇಕಾಗಿದೆ. ಪ್ರಸಕ್ತ 2023–24ನೇ ಸಾಲಿನಲ್ಲಿ ನಗದು ಮೀಸಲು ಮತ್ತು ದ್ರವ್ಯಾಸ್ಥಿಯನ್ನು (ಎಸ್.ಎಲ್.ಆರ್) ಈ ಕೆಳಕಂಡಂತೆ ನಿರ್ವಹಿಸಬೇಕಾಗಿದೆ.

**ಅ) ನಗದು ಮೀಸಲು**

ದಿ. 01.04.2023 ರಿಂದ ದಿ. 31.03.2024ರ ವರೆಗೆ ಶೇ. 4.50

**ಆ) ದ್ರವ್ಯಾಸ್ಥಿ**

ದಿ.01–04–2023 ರಿಂದ ದಿ.31.03.2024 ರವರೆಗೆ ಶೇ. 18

ಬ್ಯಾಂಕಿನಲ್ಲಿ ವರ್ಷಪೂರ್ತಿ ಭಾರತೀಯ ರಿಸರ್ವ್ ಬ್ಯಾಂಕು ನಿಗದಿ ಪಡಿಸಿದ ಕನಿಷ್ಟ ಮೊಬಲಿಗಿಂತ ಹೆಚ್ಚಾಗಿ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸುವುದನ್ನು ಗುರುತಿಸಲಾಗಿದೆ.

**ಉದಾಹರಣೆಗೆ:**

ನಗದು ಮೀಸಲು (ರೂ. ಸಾವಿರಗಳಲ್ಲಿ)

| ಕ್ರಸಂ | ದಿನಾಂಕ | ಡಿ.ಟಿ.ಎಲ್. ಮೊಬಲಗು | ಇರಬೇಕಾದ ಮೊಬಲಗು | ಇದ್ದ ಮೊಬಲಗು | ಶೇಕಡವಾರು ಪ್ರಮಾಣ | ಕನಿಷ್ಠ / ಗರಿಷ್ಠ |
|---|---|---|---|---|---|---|
| 1 | 12.07.2023 | 3399259 | 152967 | 270534 | 5.02% | ಕನಿಷ್ಠ |
| 2 | 09.11.2023 | 3837664 | 172695 | 193000 | 7.96% | ಗರಿಷ್ಠ |

ದ್ರವ್ಯಾಸ್ಥಿ (ರೂ. ಸಾವಿರಗಳಲ್ಲಿ)

| ಕ್ರಸಂ | ದಿನಾಂಕ | ಡಿ.ಟಿ.ಎಲ್ ಮೊಬಲಗು | ಇರಬೇಕಾದ ಮೊಬಲಗು | ಇದ್ದ ಮೊಬಲಗು | ಶೇಕಡವಾರು ಪ್ರಮಾಣ | ಕನಿಷ್ಠ/ ಗರಿಷ್ಠ |
|---|---|---|---|---|---|---|
| 1 | 07.08.2023 | 3749115 | 674841 | 1626972 | 43.00% | ಕನಿಷ್ಠ |
| 2 | 30.03.2024 | 3251557 | 585280 | 1710309 | 53.00% | ಗರಿಷ್ಠ |

12 ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಸರ್ವ್ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿ ನಿಗದಿ ಪಡಿಸಿ ಆರ್ಥಿಕ ತಃಖ್ತೆಯಲ್ಲಿ ತೋರಿಸಲಾಗಿದೆಯೇ?

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) ಕಲಂ 18 ಮತ್ತು 24ರಲ್ಲಿ ನಿಗಧಿ ಪಡಿಸಿದ ಕನಿಷ್ಠ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮೇಲೆ ತಿಳಿಸಿದಂತೆ ನಗದು ಮೀಸಲು ದ್ರವ್ಯಾಸ್ಥಿಯನ್ನು ನಿರ್ವಹಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿ ಗೊಳಿಸಿದ ಕನಿಷ್ಟ ಮಿತಿ ನಿರ್ವಹಿಸುವುದರಲ್ಲಿ ಯಾವುದೇ ವಿಫಲತೆ ಇಲ್ಲದ ಕಾರಣ ದಂಡದ ಪ್ರಶ್ನೆ ಉದ್ಭವಿಸುವುದಿಲ್ಲ.

13 **ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–**

[ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು]

ಠೇವಣಿ ಖಾತೆಗಳನ್ನು ತೆರೆಯುವಾಗ ಕೆ.ವೈ.ಸಿ ನಿಯಮಗಳನ್ನು ಪಾಲಿಸಲಾಗುತ್ತಿದ್ದರೂ, ಕೆಲವೊಂದು ಹಳೆಯ ಖಾತೆಗಳ ಕೆ.ವೈ.ಸಿ ಪಡೆಯಲು ಕ್ರಮವಿಡುವುದು.

**ಸಮಜಾಯಿಷಿ:**

ಬ್ಯಾಂಕಿನಲ್ಲಿ ಖಾತೆಗಳನ್ನು ತೆರೆಯುವಾಗ ಈಗಾಗಲೇ ಕಡ್ಡಾಯವಾಗಿ ಕೆ.ವೈ.ಸಿ. ನಿಯಮಗಳ ಪ್ರಕಾರ ದಾಖಲಾತಿಗಳನ್ನು ಗ್ರಾಹಕರುಗಳಿಂದ ಪಡೆದು ಖಾತೆ ತೆರೆಯಲಾಗುತ್ತಿದೆ. ಹಳೆಯ ಖಾತೆಗಳ ಖಾತೆದಾರರುಗಳಿಗೆ ಪತ್ರ / ದೂರವಾಣಿ / ತಂತ್ರಾಂಶದ ಮುಖಾಂತರ ದಾಖಲೆಗಳನ್ನು ಸೂಚಿಸಿ, ಪಡೆಯಲಾಗುತ್ತಿದೆ. ಪಡೆಯದೇ ಇರುವ ಕೆಲವು ಪ್ರಕರಣಗಳಲ್ಲೂ ಸಹ ಪಡೆಯುವ ಕ್ರಮ ಮುಂದುವರೆದಿದೆ.

**18 ಸಹಾಯಧನಗಳು :**

| **ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ** | |
|---|---|
| ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ. [ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು] | ಸರ್ಕಾರದಿಂದ ಯಾವುದೇ ರೀತಿಯ ಸಹಾಯಧನವನ್ನು ಪಡೆದಿಲ್ಲ. |
| ಬ್ಯಾಂಕು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ) | ಅನ್ವಯಿಸುವುದಿಲ್ಲ. |

**19) ಇತರೆ ಜವಾಬ್ದಾರಿಗಳು :**

[ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು] : 31.03.2024ಕ್ಕೆ ವಿವರ ಕೆಳಕಂಡಂತಿದೆ

| **ಕ್ರಸಂ** | **ವಿವರ** | **ಮೊತ್ತ** |
|---|---|---|
| 1 | ಪೇ ಆರ್ಡರ್‌ಗಳು | 28,75,018.28 |
| 2 | ಲೆಕ್ಕ ಪರಿಶೋಧನಾ ವೆಚ್ಚ ಕೊಡಬೇಕಾದ್ದು | 4,79,818.00 |
| 3 | ಆದಾಯತೆರಿಗೆ ಕೊಡಬೇಕಾದ್ದು | 3,80,60,464.00 |
| 4 | ಕ್ಲಿಯರಿಂಗ್ ಚೆಕ್ ಬಾಬ್ತು | 81,23,770.00 |

| | | |
|---|---|---|
| 5 | ಬ್ಯಾಂಕಿನ ಸಿಬ್ಬಂದಿಯವರ ಬಾಬ್ತು ಕೊಡಬೇಕಾದದ್ದು | 30,55,977.00 |
| 6 | ಕಾಯ್ದಿರಿಸಿಕೊಂಡ ಇತರೆ ವೆಚ್ಚಗಳು | 66,78,903.11 |
| 7 | ರಾಜ್ಯ / ಕೇಂದ್ರ ಜಿ.ಎಸ್.ಟಿ | 52,740.00 |
| 8 | ಸಾಮಾನ್ಯ ಅಮಾನತ್ತು ಪಾವತಿ ಬಾಕಿ | 1,30,54,483.09 |
| 9 | ಸಿಬ್ಬಂದಿ ಭವಿಷ್ಯ ನಿಧಿ ಬಾಕಿ | 11,73,386.00 |
| 10 | ಇ.ಎಂ.ಡಿ. – ಸರಸ್ವತ್ ಇನ್ಫೋಟೆಕ್ | 1,00,000.00 |
| 11 | ಟಿ.ಡಿ.ಎಸ್. ಬಾಕಿ | 14,14,471.00 |
| | **ಒಟ್ಟು** | **7,50,69,030.48** |

**1. ಪೇ ಆರ್ಡರ್‌ಗಳು – ರೂ. 28,75,018.28**

ದಿ.31.03.2024ಕ್ಕೆ ರೂ.28,75,018.28/– ಪೇ ಆರ್ಡರ್‌ಗಳು ಕ್ಲಿಯರ್ ಆಗಲು ಬಾಕಿ ಉಳಿದಿರುತ್ತದೆ. 10 ವರ್ಷಕ್ಕೆ ಮೀರಿದ ಬಾಕಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಡಿ.ಇ.ಎ.ಎಫ್. ಖಾತೆಗೆ ವರ್ಗಾಯಿಸಲಾಗುತ್ತಿದೆ.

**2. ಲೆಕ್ಕ ಪರಿಶೋಧನಾ ವೆಚ್ಚ ಕೊಡಬೇಕಾದ್ದು – ರೂ. 4,79,818.00/–**

2023–24ನೇ ಸಾಲಿಗೆ ಬ್ಯಾಂಕು ರೂ.4,79,818.00ಗಳನ್ನು ಲೆಕ್ಕಪರಿಶೋಧನಾ ಶುಲ್ಕದ ಬಾಬ್ತು ಅವಕಾಶ ಕಲ್ಪಿಸಿದೆ. ಇದರಲ್ಲಿ ಬ್ಯಾಂಕಿನ ಅಂತರಿಕ ಲೆಕ್ಕಪರಿಶೋಧಕರಿಗೆ ದಿ.31.03.2024ಕ್ಕೆ ಪಾವತಿಸಬೇಕಾದ ಮೊಬಲಗು ಹಾಗೂ ಶಾಸನ ಬದ್ಧ ಲೆಕ್ಕಪರಿಶೋಧಕರಿಗೆ 2023–24ನೇ ಸಾಲಿಗೆ ಪಾವತಿಸಬೇಕಾದ ಮೊಬಲಗು ಸೇರಿರುತ್ತದೆ.

**3. ಆದಾಯ ತೆರಿಗೆ ಕೊಡಬೇಕಾದ್ದು – ರೂ. 3,80,60,464.00/–**

2009–10ರಿಂದ 2022–23ನೇ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ 7 ವರ್ಷಗಳ ಬಾಕಿ ರೂ.1,80,51,467.00/–ಗಳು ಹಾಗೂ 2023–24ನೇ ಸಾಲಿಗೆ ಆದಾಯ ತೆರಿಗೆಗಾಗಿ ರೂ. 2,00,08,997/– ಅವಕಾಶವನ್ನು ಕಲ್ಪಿಸಲಾಗಿದೆ. ಆದಾಯ ತೆರಿಗೆ ಇಲಾಖೆಯ ತಗಾದೆಗೊಳಪಟ್ಟು ಇಲಾಖೆಗೆ ಪಾವತಿಸುವುದು.

**4. ಕ್ಲಿಯರಿಂಗ್ ಚೆಕ್ಕುಗಳ ಬಾಕಿ – ರೂ. 81,23,770.00/–**

ದಿ.31.03.2024ರಂದು ಬ್ಯಾಂಕಿಗೆ ಸಲ್ಲಿಕೆಯಾದ ಕ್ಲಿಯರಿಂಗ್ ಆಗಬೇಕಾದ ಚೆಕ್ಕುಗಳ ಮೊತ್ತ ರೂ.81,23,770.00ಗಳಿದ್ದು, ಸದರಿ ಚೆಕ್ಕುಗಳು ಏಪ್ರಿಲ್, 2024ರಲ್ಲಿ ತೀರುವಳಿ ಆಗಿರುತ್ತದೆ.

**5. ಬ್ಯಾಂಕಿನ ಸಿಬ್ಬಂದಿಯವರ ಬಾಬ್ತು ಕೊಡಬೇಕಾದ್ದು – ರೂ. 30,55,977.00**

ಬ್ಯಾಂಕಿನ ಸಿಬ್ಬಂದಿಯವರ ಗಳಿಕೆ ರಜೆಯ ಭತ್ಯೆಯನ್ನು ಸಾಲಿನ ಅಂತ್ಯಕ್ಕೆ ಅವಕಾಶ ಮಾಡಲಾಗಿದೆ.

**6. ಕಾಯ್ದಿರಿಸಿಕೊಂಡ ಇತರೆ ವೆಚ್ಚಗಳು– ರೂ. 66,78,903.11**

ದಿ.31.03.2024ಕ್ಕೆ ಬ್ಯಾಂಕು ಈ ಕೆಳಗಿನ ವಿವರದಂತೆ ರೂ.66,78,903.11ಗಳನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ಹೊಂದಿರುತ್ತದೆ. ವಿವಿರ ಕೆಳಕಂಡಂತಿದೆ.

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | ದೂರವಾಣಿ ವೆಚ್ಚ | 30,173.12 |
| 2 | ವಿದ್ಯುತ್ ವೆಚ್ಚ | 1,19,250.00 |
| 3 | ವೃತ್ತಿ ತೆರಿಗೆ | 20,600.00 |
| 4. | ಸಾಲ ವಸೂಲಾತಿ ವೆಚ್ಚ ಕಾದಿರಿಸಿದ್ದು | 64,23,288.00 |
| 5. | ಕಛೇರಿ ನಿರ್ವಹಣಾ ವೆಚ್ಚ ಕೊಡಬೇಕಾದದ್ದು | 85,591.99 |
| | **ಒಟ್ಟು** | **66,78,903.11** |

ಮೇಲೆ ತಿಳಿಸಿದ ಅವಕಾಶಗಳು ದಿನಾಂಕ 31.03.2024ಕ್ಕೆ ಪಾವತಿಸಬೇಕಾದ ಬಾಕಿಗಳಾಗಿದ್ದು ಅವಕಾಶ ಕಲ್ಪಿಸಲಾಗಿದೆ. ಮುಂದಿನ ಸಾಲಿನಲ್ಲಿ ಪಾವತಿಸಿದೆ ಎಂದು ತಿಳಿಸಲಾಗಿದೆ.

**7. ರಾಜ್ಯ / ಕೇಂದ್ರ ಜಿ.ಎಸ್.ಟಿ ಮೊಬಲಗು ರೂ. 52,740.00**

ಇದನ್ನು ಮುಂದಿನ ಸಾಲುಗಳಲ್ಲಿ ಸರ್ಕಾರ ಇಲಾಖೆಗೆ ಪಾವತಿಸಿರುವುದಾಗಿ ತಿಳಿಸಲಾಗಿದೆ.

**8. ಸಾಮಾನ್ಯ ಅಮಾನತ್ತು ಪಾವತಿ ಬಾಕಿ – ರೂ. 1,30,54,483.09**

ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರದಲ್ಲಿ ಉದ್ಭವಿಸಿರುವ ಈ ಮೊಬಲಗನ್ನು ಸಂಬಂಧಿಸಿದವರು ಹಿಂಪಡೆಯದೇ ಇರುವ ಕಾರಣ ಬಹಳ ವರ್ಷಗಳಿಂದಲೂ ಮುಂದುವರೆದಿದೆ. 10ವರ್ಷ ಮೀರಿದ ತಕ್ಷಣ ಈ ಲೆಕ್ಕಗಳ ಮೊಬಲನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಡಿ.ಇ.ಎ.ಎಫ್. ನಿಧಿಗೆ ವರ್ಗಾಯಿಸಿತ್ತಿರುವುದಾಗಿ ತಿಳಿಸಿದೆ. ಇದರಲ್ಲಿ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿಯಾದ ಸಾಲಗಾರರು ಅಡಮಾನವಿಟ್ಟ ಆಸ್ತಿಗಳ ಹರಾಜು ಪ್ರಕ್ರಿಯೆಯ ಮೊತ್ತವು ಸಹ ಸೇರಿದ್ದು, ಈ ಮೊತ್ತದಲ್ಲಿ ಏಪ್ರಿಲ್, 2024ರ ಮಾಹೆಯಲ್ಲಿ ರೂ.66.20 ಲಕ್ಷಗಳು ಚುಕ್ತವಾಗಿರುತ್ತದೆ. ಉಳಿದ ಮೊತ್ತ ರೂ.64.34 ಲಕ್ಷಗಳನ್ನು ಸಹ ಚುಕ್ತಗೊಳಿಸಲು ಸೂಚಿಸಲಾಗಿದೆ.

**ಸಮಜಾಯಿಷಿ:**

ಲೆಕ್ಕ ಪರಿಶೋಧಕರ ಸೂಚನೆಯಂತೆ ಕ್ರಮವಿಡಲಾಗುವುದು.

**9. ಸಿಬ್ಬಂದಿ ಭವಿಷ್ಯ ನಿಧಿ ಬಾಕಿ – ರೂ. 11,73,386.00**

ದಿ. 31.3.2024ಕ್ಕೆ ಬಾಕಿ ಇರುವ ಭವಿಷ್ಯ ನಿಧಿ ರೂ. 11,73,386.00 ಗಳನ್ನು ಭವಿಷ್ಯ ನಿಧಿ ಪ್ರಾಧಿಕಾರಕ್ಕೆ ಪಾವತಿಸಬೇಕಾಗಿದೆ. ಇದನ್ನು ಏಪ್ರಿಲ್ ಮಾಹೆಯಲ್ಲಿ ಪಾವತಿಸಲಾಗಿದೆ.

**10. ಇ.ಎಂ.ಡಿ. ಬಾಕಿ ಸರಸ್ವತ್ ಇನ್‌ಫೋಟೆಕ್ – ರೂ. 1,00,000/–**

ಬ್ಯಾಂಕಿನಲ್ಲಿ ಸಿ.ಬಿ.ಎಸ್. ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಸಂಬಂಧ ಸರಸ್ವತ್ ಇನ್ಫೋಟೆಕ್ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದದ ಅನ್ವಯ, ಪಡೆದಿರುವ ಇ.ಎಂ.ಡಿ. ರೂ.1,00,000/– ಗಳು ಚುಕ್ತವಾಗದೆ ಬಾಕಿ ಇರುತ್ತದೆ. ಇದನ್ನು ಚುಕ್ತ ಮಾಡಲು ಕ್ರಮವಿಡುವುದು.

**ಸಮಜಾಯಿಷಿ:**

ಸದರಿ ಬಾಬ್ತಿನಲ್ಲಿ ಸಾಲಿನ ಪ್ರಾರಂಭದಲ್ಲಿದ್ದ ಮೊತ್ತ ರೂ. 6,00,000–00 ಗಳಲ್ಲಿ ವರದಿ ಸಾಲಿನಲ್ಲಿ ರೂ. 5,00,000–00 ಗಳನ್ನು ಚುಕ್ತಗೊಳಿಸಲಾಗಿದೆ. ಉಳಿದ ಮೊತ್ತ ರೂ. 1,00,000–00 ಗಳು ಬ್ಯಾಂಕಿಗೆ ಸಾಫ್ಟ್‌ವೇರ್ ಸರಬರಾಜು ಮಾಡಿರುವ ಮೆ॥ ಸರಸ್ವತ್ ಇನ್ಫೋಟೆಕ್ ರವರಿಂದ ಪಡೆದಿದ್ದು, ಗಣಕೀಕರಣ ಕಾರ್ಯ ಪೂರ್ಣಗೊಂಡ ನಂತರ ಚುಕ್ತಗೊಳಿಸಲು ಕ್ರಮವಿಡಲಾಗುವುದು.

**11. ಟಿ.ಡಿ.ಎಸ್. ಬಾಕಿ ರೂ. 14.14,471.00**

ಟಿ.ಡಿ.ಎಸ್. ಬಾಕಿ ಬ್ಯಾಂಕಿನ ಠೇವಣಿದಾರರ ಬಡ್ಡಿ ಹಾಗೂ ಕೆಲವೊಂದು ಗುತ್ತಿಗೆ ಕೆಲಸಗಳ ಸಂಬಂಧ, ಕಟಾಯಿಸಿರುವ ಟಿಡಿಎಸ್ ರೂ. 14,14,471.00 ಗಳನ್ನು ಆದಾಯ ತೆರಿಗೆ ಇಲಾಖೆಗೆ ನಿಗದಿತ ದಿನಾಂಕದೊಳಗೆ ಪಾವತಿಸಿರುವುದಾಗಿ ತಿಳಿಸಿರುತ್ತಾರೆ.

**20) ಲಾಭ ವಿಂಗಡಣೆ**

| | |
|---|---|
| ಹಿಂದಿನ ಸಾಲಿನ ಕ್ರೂಡಿಕೃತ ಲಾಭ | 2022–23 ರಲ್ಲಿ ಬ್ಯಾಂಕು ರೂ. 751.56 ಲಕ್ಷಗಳ ಕ್ರೋಡಿಕೃತ ನಷ್ಟ ಹೊಂದಿರುತ್ತದೆ. |
| ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮದನ್ವಯ ಮಾಡಿಕೊಳ್ಳಲಾಗಿದೆಯೇ ? | ಹಿಂದಿನ ಸಾಲಿನಲ್ಲಿ ಬ್ಯಾಂಕು ಕ್ರೋಡಿಕೃತ ನಷ್ಟ ಹೊಂದಿದ್ದು ಲಾಭ ವಿಂಗಡಣೆ ಅನ್ವಯಿಸುವುದಿಲ್ಲ. |
| ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ? | ಹಿಂದಿನ ಸಾಲಿನಲ್ಲಿ ಬ್ಯಾಂಕು ಕ್ರೋಡಿಕೃತ ನಷ್ಟ ಹೊಂದಿದ್ದು ಲಾಭ ಘೋಷಣೆ ಅನ್ವಯಿಸುವುದಿಲ್ಲ. |
| ವಿತರಣೆಯಾಗದ ಲಾಭಾಂಶದ ಮೊತ್ತ | ಅನ್ವಯಿಸುವುದಿಲ್ಲ. |
| ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದು | ಮೂರು ವರ್ಷಗಳಿಗೂ ಮೇಲ್ಪಟ್ಟ ಡಿವಿಡೆಂಡ್ ಬಾಕಿಯನ್ನು ಉಪನಿಯಮ 107 ರಂತೆ ಆಪದ್ಧನಕ್ಕೆ ವರ್ಗಾಯಿಸಲಾಗಿದೆ. |

**21) ನಗದು ಶಿಲ್ಕು ಪರಿಶೀಲನೆ:**

| ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು | ರೂ. 3,16,59,681/– (ಶಾಖೆಗಳು ಸೇರಿ) | | | |
|---|---|---|---|---|
| ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು | | | | |
| **ಪರಿಶೀಲನೆಯ ಕಛೇರಿ** | **ದಿನಾಂಕ** | **ನಗದು(ರೂ)** | **ಹಾಜರು ಪಡಿಸಿದ ಸಿಬ್ಬಂದಿ ಹೆಸರು/ಹುದ್ದೆ** | |
| | | | **ಲೆಕ್ಕಿಗರು / ಸಹಾಯಕ ಲೆಕ್ಕಿಗರು** | **ನಗದು ಗುಮಾಸ್ತ** |
| 1) ವಿ.ವಿ.ಪುರಂ ಶಾಖೆ | 16.05.2024 | 76,37,311.00 | ಸಂಕಣ್ಣ ಕಬೂರ್ | ಅನಂತ ರಾಜು ಡಿ.ಎಸ್. |
| 2) ಅವೆನ್ಯೂರಸ್ತೆ ಶಾಖೆ | 03.05.2024 | 49,87,300.00 | ಅಂಜನಾ | ಕೆ. ಜಯಂತ್‌ಕುಮಾರ್ |
| 3) ವಿಜಯನಗರ ಶಾಖೆ | 02.05.2024 | 32,19,017.00 | ಲೀಲಾ.ಪಿ | ಶ್ರೀಧರ.ಎಂ.ಬಿ |
| 4) ಸುಬ್ರಮಣ್ಯನಗರ ಶಾಖೆ | 06.05.2024 | 23,42,390.00 | ಎನ್.ಎಲ್.ಪ್ರಸಾದ್ | ಎಸ್.ಅಂಜನಪ್ಪ |
| 5) ಪದ್ಮನಾಭನಗರ ಶಾಖೆ | 08.05.2024 | 12,48,057.00 | ಅಶ್ವಥ್ಥನಾರಾಯಣ ವಿ | ಪ್ರಶಾಂತ್.ಹೆಚ್.ಎಸ್. |
| 6) ಕಾಚರಕನಹಳ್ಳಿ ಶಾಖೆ | 02.05.2024 | 2,96,746.00 | ನಾಗೇಂದ್ರ.ವೈ.ಆರ್. | ನಂದೀಶ್.ಪಿ |
| 7) ಯಶವಂತಪುರ ಶಾಖೆ | 07.05.2024 | 4,54,109.00 | ರಾಜೇಗೌಡ ಆರ್.ಎಂ. | ಜಿ.ಕುಸುಮ |
| 8) ನಾಗರಭಾವಿ ಶಾಖೆ | 07.05.2024 | 6,43,924.00 | ಸಿ.ಎನ್.ಪದ್ಮ | ಹೆಚ್.ವಿ. ನವೀನ್ |
| 9) ಕೋಣನಕುಂಟೆ ಶಾಖೆ | 09.05.2024 | 9,82,042.00 | ಉಮೇಶ ವಿ | ಕೆ.ರಾಜ |
| ಪರಿಶೀಲಿಸಿದ ನಗದು, ನಗದು ಪುಸ್ತಕದೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ? | ಹೌದು | | | |
| ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು. ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರುಪಡಿಸಿದ ಕೈಶಿಲ್ಕದ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು | ಬ್ಯಾಂಕಿನ ಲೆಕ್ಕ ಪತ್ರಗಳು ಗಣಕೀಕೃತವಾಗಿದ್ದು, ನಗದು ಪುಸ್ತಕ ಪೂರ್ಣವಾಗಿ ಲಭ್ಯವಿದೆ. | | | |
| ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ? | | | | |

| | |
|---|---|
| ಹೌದು. ಶಾಖೆಗಳಲ್ಲಿ ಉಳಿಸಿಕೊಳ್ಳಬಹುದಾದ ನಗದು ಶಿಲ್ಕಿನ ಮಿತಿಯನ್ನು ಆಡಳಿತ ಮಂಡಳಿ ನಿಗಧಿಪಡಿಸಿದ್ದು, ವಿವರ ಕೆಳಕಂಡಂತಿದೆ. | |

| ಶಾಖೆಯ ಹೆಸರು | ನಿಗಧಿಪಡಿಸಿದ ಮಿತಿ |
|---|---|
| 1) ವಿ.ವಿ.ಪುರಂ ಶಾಖೆ | 125 ಲಕ್ಷ |
| 2) ಅವೆನ್ಯೂರಸ್ತೆ ಶಾಖೆ | 40 ಲಕ್ಷ |
| 3) ವಿಜಯನಗರ ಶಾಖೆ | 30 ಲಕ್ಷ |
| 4) ಸುಬ್ರಮಣ್ಯನಗರ ಶಾಖೆ | 22 ಲಕ್ಷ |
| 5) ಪದ್ಮನಾಭನಗರ ಶಾಖೆ | 15 ಲಕ್ಷ |
| 6) ಕಾಚರಕನಹಳ್ಳಿ ಶಾಖೆ | 12 ಲಕ್ಷ |
| 7) ಯಶವಂತಪುರ ಶಾಖೆ | 8 ಲಕ್ಷ |
| 8) ನಾಗರಭಾವಿ ಶಾಖೆ | 15 ಲಕ್ಷ |
| 9) ಕೋಣನಕುಂಟೆ ಶಾಖೆ | 15 ಲಕ್ಷ |

ಉಪನಿಯಮ ಸಂಖ್ಯೆ 92ರಂತೆ ಬ್ಯಾಂಕಿನ ನಗದು ಹಣ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಅವರಿಂದ ಅಧಿಕಾರ ಪಡೆದ ಶಾಖಾ ವ್ಯವಸ್ಥಾಪಕರು ನಗದು ಗುಮಾಸ್ತರು ಹಾಗು ಲೆಕ್ಕಿಗರ ಅಭಿರಕ್ಷೆಯಲ್ಲಿರುತ್ತದೆ.

| | |
|---|---|
| ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ. | ಶಾಖೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ವ್ಯವಹಾರ ಹೆಚ್ಚಾದಾಗ ನಿಗಧಿತ ಮಿತಿಗಿಂತ ಹೆಚ್ಚಿನ ನಗದು ಶಿಲ್ಕನ್ನು ಉಳಿಸಿಕೊಂಡಿರುವುದನ್ನು ಗಮನಿಸಲಾಗಿದೆ. |
| ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ. | ಹೌದು. ದಿನಾಂಕ 01.07.2023ರಿಂದ 30.06.2024ರ ವರೆಗೆ ನಗದು ಮತ್ತು ಚಿನ್ನಾಭರಣಗಳ ಮೇಲೆ ರೂ.12.50 ಕೋಟಿ, ನಗದು ಸಾಗಾಣಿಕೆ ಮೇಲೆ ರೂ.75.00 ಲಕ್ಷಕ್ಕೆ ವಿಮೆ ಮಾಡಿಸಲಾಗಿದೆ. |
| ನಗದು ಶಿಲ್ಕನ್ನು ಕಾಲಕಾಲಕ್ಕೆ ಅದಿಕೃತರು ಪರೀಕ್ಷಿಸಿದ್ದಾರೆಯೆ? | ಪರಿಶೀಲಿಸಲಾಗುತ್ತಿದೆ. |

## 22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು

| ಬ್ಯಾಂಕಿನ ಹೆಸರು | ಖಾತೆ ಸಂಖ್ಯೆ | ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು | ಬ್ಯಾಂಕ್ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು | ಅಂತರ |
|---|---|---|---|---|
| 1) ಭಾರತೀಯ ರಿಸರ್ವ್ ಬ್ಯಾಂಕ್ | 38253501004 | 8,38,52,849.98 | 9,78,52,849.98 | -1,40,00,000.00 |
| 2) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿಯಮಿತ | 11/104/0121001 | 32,46,566.39 | 32,46,566.39 | – |
| 3) ಐ.ಸಿ.ಐ.ಸಿ.ಐ. ಬ್ಯಾಂಕ್ | 205001786 | 4,13,68,042.83 | 4,13,24,421.83 | 43,621.00 |
| 4) ಎಸ್.ಬಿ.ಐ. | 52075146403 | 1,48,672.00 | 1,48,672.00 | – |
| 5) ಐ.ಡಿ.ಬಿ.ಐ. | 024102000009157 | 7,77,64,534.27 | 7,77,64,534.27 | – |
| 6) ಹೆಚ್.ಡಿ.ಎಫ್.ಸಿ. | 00090380001601 | 20,53,820.06 | 20,53,820.06 | – |
| 7) ಇಂಡಸ್ ಇಂಡ್ ಬ್ಯಾಂಕ್ | 200004019163 | 84,57,698.48 | 80,23,128.44 | 4,34,570.04 |
| 8) ಆಕ್ಸಿಸ್ ಬ್ಯಾಂಕ್ | 915020032100108 | 41,75,562.88 | 41,70,437.88 | 5,125.00 |
| **ಒಟ್ಟು** | | **22,10,67,746.89** | **23,45,84,430.85** | **-1,35,16,683.96** |

ಬ್ಯಾಂಕು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.)

ಮೇಲ್ಕಂಡ ಬ್ಯಾಂಕ್ ಶಿಲ್ಕುಗಳನ್ನು ಬ್ಯಾಂಕಿನ ದೃಢೀಕರಣ ಪಟ್ಟಿಯೊಂದಿಗೆ ಪರಿಶೀಲಿಸಲಾಗಿದ್ದು, ಮೇಲ್ಕಂಡ ಎಲ್ಲಾ ಬ್ಯಾಂಕ್ ಖಾತೆಗಳು ಬ್ಯಾಂಕು ತಯಾರಿಸಿರುವ ಸಮನ್ವಯ ಪಟ್ಟಿಗೆ ಒಳಪಟ್ಟು ತಾಳೆಯಿರುತ್ತದೆ.

## ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ

| | |
|---|---|
| ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಮಂಜೂರಾತಿ ಪಡೆದಿದೆಯೇ? | ಹೌದು |
| ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ | ನಿಷ್ಕ್ರಿಯ ಬ್ಯಾಂಕ್ ಖಾತೆಗಳು ಇರುವುದಿಲ್ಲ. |
| ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ | ಚಾಲ್ತಿ ಖಾತೆಗಳಾದ ಕಾರಣ ಯಾವುದೇ ಆದಾಯ ಬಂದಿರುವುದಿಲ್ಲ |

**23) ಹೂಡಿಕೆಗಳು**

ಷಡ್ಯೂಲ್‌ಕೆ ಪ್ರಕಾರ ದಿನಾಂಕ 31–03–2024ಕ್ಕೆ ಬ್ಯಾಂಕು ಹೊಂದಿರುವ ಹೂಡಿಕೆಗಳು ರೂ. 19,987.59 ಲಕ್ಷಗಳು. ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಎಸ್.ಎಲ್.ಆರ್ ಹೂಡಿಕೆಗಳು (ರೂ.ಲಕ್ಷಗಳಲ್ಲಿ)**

| ಕ್ರ ಸಂ | ಹೂಡಿಕೆ ಸ್ವರೂಪ | 31.3.2024 ಕ್ಕೆ ಮೊಬಲಗು |
|---|---|---|
| 1 | ರಾಜ್ಯ ಮತ್ತು ಕೇಂದ್ರ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಠೇವಣಿ | 14,513.36 |
| 2. | ರಾಜ್ಯ ಮತ್ತು ಕೇಂದ್ರ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಠೇವಣಿ (ಆಪದ್ಧನ ಖಾತೆ) | 1,946.20 |
| | **ಒಟ್ಟು ಮೊಬಲಗು** | **16,459.56** |

**ನಾನ್ – ಎಸ್.ಎಲ್.ಆರ್ ಹೂಡಿಕೆಗಳು (ರೂ.ಲಕ್ಷಗಳಲ್ಲಿ)**

| ಕ್ರ ಸಂ | ಹೂಡಿಕೆ ಸ್ವರೂಪ | 31.3.2024 ಕ್ಕೆ ಮೊಬಲಗು |
|---|---|---|
| 1 | ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ಬಾಂಡುಗಳಲ್ಲಿ | 172.54 |
| 2 | ಮ್ಯುಚುಯಲ್ ಫಂಡ್ | 450.00 |
| 3 | ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ | 0.25 |
| 4 | ಇಫ್ಕೋ ಷೇರು | 5.00 |
| 5 | ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ನಲ್ಲಿ – PNCP SHARES | 880.19 |
| 6 | ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ನಲ್ಲಿ – EQUITY SHARES | 220.05 |
| | **ಒಟ್ಟು ಮೊಬಲಗು** | **1,728.03** |

**ವಿವಿಧ ಬ್ಯಾಂಕುಗಳ ನಿಶ್ಚಿತ ಠೇವಣಿಗಳಲ್ಲಿ (ರೂ.ಲಕ್ಷಗಳಲ್ಲಿ)**

| ಕ್ರ ಸಂ | ಹೂಡಿಕೆ ಸ್ವರೂಪ | 31.3.2024 ಕ್ಕೆ ಮೊಬಲಗು |
|---|---|---|
| 1 | ಅಪೆಕ್ಸ್ ಬ್ಯಾಂಕ್ ನಿಶ್ಚಿತ ಠೇವಣಿಯಲ್ಲಿ | 200.00 |
| 2 | HDFC ಬ್ಯಾಂಕಿನಲ್ಲಿ | 400.00 |
| 3 | ಕರೆ ಠೇವಣಿಗಳು | 1200.00 |
| | **ಒಟ್ಟು** | **1800.00** |

ದಿ.31.03.2024ಕ್ಕೆ ಬ್ಯಾಂಕ್ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪತ್ರಗಳಲ್ಲಿ ಹೂಡಿರುವ ಒಟ್ಟು ಮೊತ್ತ ರೂ.16,459.56 ಲಕ್ಷಗಳು (ಆಪದ್ಧನ ನಿಧಿ ಎಂದು ಪರಿಗಣಿಸಿದ ರೂ.1,946.20 ಲಕ್ಷಗಳು ಸೇರಿ).

ದಿ.31.03.2024ಕ್ಕೆ ಬ್ಯಾಂಕಿನ ಡಿ.ಟಿ.ಎಲ್. ಮೊತ್ತ ರೂ.32,515.57 ಲಕ್ಷಗಳು, ಅಂದರೆ ಒಟ್ಟು ಎನ್.ಡಿ.ಟಿ.ಎಲ್.ಗೆ ಬ್ಯಾಂಕ್ ಹೊಂದಿರುವ ಎಸ್.ಎಲ್.ಆರ್ ಹೂಡಿಕೆಗಳು ಶೇ.50.62 ರಷ್ಟಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಇದು ದಿ.31.03.2024ಕ್ಕೆ ಕನಿಷ್ಟ ಶೇ.18ರಷ್ಟಿರಬೇಕು.

ನಾನ್ ಎಸ್.ಎಲ್.ಆರ್ ಮೊಬಲಗು ದಿ.31.03.2024ಕ್ಕೆ ರೂ.627.79 ಲಕ್ಷಗಳಿದ್ದು, (ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಷೇರು ಹೊರತು ಪಡಿಸಿ) ಹಿಂದಿನ ಸಾಲಿನ ಠೇವಣಿ ಮೊತ್ತ ರೂ.40,575.26 ಲಕ್ಷಗಳ ಒಟ್ಟು ಠೇವಣಿಯ ಶೇ.1.55ರಷ್ಟಿದೆ. ಇದು ಭಾರತೀಯ ರಿಜರ್ವ್ ಬ್ಯಾಂಕಿನ ಸೂಚನೆಯಂತೆ ಗರಿಷ್ಟ ಶೇ.10ರಷ್ಟು ಇರಬಹುದಾಗಿದೆ.

ಬ್ಯಾಂಕ್ ದಿ.31.03.2024ಕ್ಕೆ ಹೊಂದಿರುವ ಇತರೆ ಬ್ಯಾಂಕ್‌ಗಳಲ್ಲಿನ ಚಾಲ್ತಿ ಮತ್ತು ನಿಶ್ಚಿತ ಠೇವಣಿಗಳಲ್ಲಿನ ಒಟ್ಟು ಮೊಬಲಗು ರೂ.1967.32ಲಕ್ಷ (ಆರ್.ಬಿ.ಐ. ಚಾಲ್ತಿ ಖಾತೆ ಕರೆ ಠೇವಣಿ ಹೊರತುಪಡಿಸಿ) ದಿ.31.03.2023ರ ಅಂತ್ಯಕ್ಕೆ ಇದ್ದ ಒಟ್ಟು ಠೇವಣಿಗಳ ಶೇ.4.85ರಷ್ಟಿದೆ. (ಇರಬಹುದಾದ್ದು ಶೇ.20). ಪ್ರತಿ ಬ್ಯಾಂಕಿನಲ್ಲಿನ ಠೇವಣಿಯು ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಒಟ್ಟು ಠೇವಣಿಗಳ ಶೇ.5ರಷ್ಟು ಮೀರಬಾರದೆಂದು ಆರ್.ಬಿ.ಐ ತಿಳಿಸಿದ್ದು, ಶೇ.5ರ ಮಿತಿಯಲ್ಲಿದೆ.

ನಾನ್ ಎಸ್.ಎಲ್.ಆರ್. ಹೂಡಿಕೆಗಳ ಪೈಕಿ ಮೆ॥ ಫಸ್ಟ್ ಲೀಸಿಂಗ್ ಕಂ – ರೂ. 100 ಲಕ್ಷಗಳ ಹೂಡಿಕೆಯ ಮೇಲೆ ಯಾವುದೇ ಬಡ್ಡಿ ಜಮಾ ಆಗುತ್ತಿಲ್ಲ. ಈ ಹೂಡಿಕೆಯನ್ನು ಎನ್.ಪಿ.ಎ. ಎಂದು ವರ್ಗೀಕರಿಸಲಾಗಿದೆ.

ದಿನಾಂಕ: 24/09/2020ರ ಆಡಳಿತ ಮಂಡಳಿಯ ಸಭೆಯಲ್ಲಿ ಮೇಲ್ಕಂಡ ಬ್ಯಾಂಕು ಹಾಗೂ ಖಾಸಗೀ ಸಂಸ್ಥೆಗಳ ಮೇಲುಸ್ತುವಾರಿ ಹೊಂದಿರುವವರಿಗೆ ಪತ್ರವನ್ನು ಬರೆದು ಬ್ಯಾಂಕಿನ ಸದ್ಯದ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ ಬ್ಯಾಂಕು ತೊಡಗಿಸಿರುವ ಹೂಡಿಕೆಗಳನ್ನು ಮರುಪಾವತಿ ಮಾಡುವಂತೆ ಕೋರಲು ನಿರ್ಣಯಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕು ದಿನಾಂಕ 25–01–2022ರ ಕೇಂದ್ರ ಸರ್ಕಾರದ ಗೆಜೆಟ್ ಪ್ರಕಟಣೆಯ ಅನ್ವಯ PMC ಬ್ಯಾಂಕನ್ನು ಮೆ// ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಿ. ಪಿ.ಎಂ.ಸಿ ಬ್ಯಾಂಕಿನಲ್ಲಿರುವ ಠೇವಣಿಯನ್ನು ವಿಲೀನ ಪ್ರಕ್ರಿಯೆಯ ನಿಯಮಗಳನುಸಾರ ಶೇಕಡ 80:20 ರ ಅನುಪಾತದಂತೆ PNCPS (Perpectual Non-Cumulative Preference Shares) ಹಾಗೂ Equity Warrant ಗಳಾಗಿ ಪರಿವರ್ತಿಸಲು ಆದೇಶ ನೀಡಿರುತ್ತಾರೆ. ಸದರಿಯವರ ನಿರ್ದೇಶನದಂತೆ ಪಿ.ಎಂ.ಸಿ. ಬ್ಯಾಂಕಿನ ಹೂಡಿಕೆಯನ್ನು ನಿಯಮಗಳನುಸಾರ ಪರಿವರ್ತಿಸಿಕೊಳ್ಳಲಾಗಿದೆ.

ಪಸ್ಟ್ ಲೀಜಿಂಗ್ ಕಂಪನಿ ಇದರ ಲಿಕ್ವಿಡೇಟರ್ ರವರಿಗೆ ಆಕ್ಸೀಸ್ ಟ್ರಸ್ಟಿ ಸರ್ವೀಸಸ್ ಲಿಮಿಟೆಡ್ ಮುಂಬೈ ಇವರ ಮುಖಾಂತರ ದಿನಾಂಕ:29/09/2020ರಂದು ಪತ್ರ ಬರೆಯಲಾಗಿದೆ. ಸದರಿ ಪತ್ರವನ್ನು ಲಿಕ್ವಿಡೇಟ್‌ರವರಿಗೆ ಕಳಿಸಿರುವ ಬಗ್ಗೆ ಮಾಹಿತಿ ಇರುತ್ತದೆ. ಕಂಪನಿಯ ಲಿಕ್ವಿಡೇಷನ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

ಬ್ಯಾಂಕು ಹಿಂದಿನ ಸಾಲಿನ ಅಂತ್ಯಕ್ಕೆ ರೂ.21,445.34 ಲಕ್ಷಗಳ ಹೂಡಿಕೆ ಹೊಂದಿದ್ದು, ಪ್ರಸಕ್ತ ಸಾಲಿನ ಅಂತ್ಯಕ್ಕೆ ರೂ.18,187.59 ಲಕ್ಷಗಳ ಹೂಡಿಕೆ ಹೊಂದಿರುತ್ತದೆ. ಹಿಂದಿನ ಸಾಲಿಗೆ ಹೋಲಿಸಿದಾಗ ಶೇ.15.19ರಷ್ಟು ಕಡಿಮೆಯಾಗಿರುತ್ತದೆ.

ಹೂಡಿಕೆಗಳ ನೀತಿಯನ್ನು ದಿ.23.02.2024 ರಂದು ಬ್ಯಾಂಕಿನ ಆಡಳಿತಮಂಡಳಿ ಸಭೆಯಲ್ಲಿ ಚರ್ಚಿಸಿ ಅಳವಡಿಸಿಕೊಳ್ಳಲಾಗಿದೆ.

ಸದರಿ ನೀತಿಯಲ್ಲಿ ಫ್ರಂಟ್ ಆಫೀಸ್, ಮಿಡಲ್ ಆಫೀಸ್ ಹಾಗೂ ಬ್ಯಾಕ್ ಆಫೀಸ್ ವಿಭಾಗಗಳನ್ನು ಸ್ಥಾಪಿಸಿದ್ದು, ಅಂದಿನ ಪ್ರಧಾನ ವ್ಯವಸ್ಥಾಪಕರು ಹಾಗೂ ಇತರೆ ಬ್ಯಾಂಕ್ ಅಧಿಕಾರಿಗಳಿಗೆ ಹೂಡಿಕೆ ಮಾಡುವ ಮತ್ತು ಹಿಂಪಡೆಯುವ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಿದೆ.

ಈ ಮೇಲಿನ ಎಸ್.ಎಲ್.ಆರ್. ಹೂಡಿಕೆಗಳಾದ ರಾಜ್ಯ ಮತ್ತು ಕೇಂದ್ರ ಭದ್ರತಾ ಪತ್ರಗಳನ್ನು ಎಸ್.ಬಿ.ಐ.ನ ಡಿ.ಎಫ್.ಹೆಚ್.ಐ. ಲಿಮಿಟೆಡ್‌ನ ಎಸ್.ಜಿ.ಎಲ್. ಖಾತೆ ಸಂಖ್ಯೆ. ಎಸ್.ಎಸ್.ವಿ.103371ರ ಮುಖಾಂತರ ನಡೆಸಲಾಗುತ್ತಿದೆ. ಸದರಿ ಸಂಸ್ಥೆ 31.03.2024ಕ್ಕೆ ನೀಡಿರುವ ಧೃಡೀಕರಣಕ್ಕೆ ತಾಳೆಯಿದೆ.

ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ಹೂಡಿಕೆಗಳ ವ್ಯವಹಾರವನ್ನು ನಿರ್ವಹಿಸಲಾಗುತ್ತಿದೆ. ಬ್ಯಾಂಕು 2023–24ನೇ ಸಾಲಿನಲ್ಲಿ ಎಸ್.ಎಲ್.ಆರ್. ಹೂಡಿಕೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿದೆ.

| | | | |
|---|---|---|---|
| 1) | ಹೆಚ್.ಟಿ.ಎಂ. (ಪರಿಪಕ್ವತೆಯಲ್ಲಿ) | – | ರೂ. 5,973.55 ಲಕ್ಷ |
| 2) | ಹೆಚ್.ಎಫ್.ಟಿ. (ವಿಕ್ರಯಕ್ಕೆ ಕಾದಿರಿಸಿರುವುದು) | – | ಇಲ್ಲ |
| 3) | ಎ.ಎಫ್.ಎಸ್. (ವಿಕ್ರಯಕ್ಕೆ ಲಭ್ಯವಿರುವುದು) | – | ರೂ. 10,486.01 ಲಕ್ಷ |
| | **ಒಟ್ಟು** | – | **ರೂ. 16,459.56 ಲಕ್ಷ** |

| | | | |
|---|---|---|---|
| 1) | ಮೇಲ್ಕಂಡ ಹೂಡಿಕೆಗಳ ಮುಖಬೆಲೆ | – | ರೂ. 16,386.00 ಲಕ್ಷ |
| 2) | ಸದರಿ ಹೂಡಿಕೆಯ ಖರೀದಿ ಅಥವಾ ಪುಸ್ತಕದ ಮೌಲ್ಯ | – | ರೂ. 16,459.56 ಲಕ್ಷ |
| 3) | ದಿನಾಂಕ 31.03.2024 ಕ್ಕೆ ಇದ್ದ ಮೇಲಿನವುಗಳ ಮಾರುಕಟ್ಟೆ ಬೆಲೆ | – | ರೂ. 1,6195.70 ಲಕ್ಷ |
| 4) | ಖರೀದಿ / ಪುಸ್ತಕದ ಬೆಲೆಗೂ ಮಾರುಕಟ್ಟೆ ಬೆಲೆಗೆ ಇರುವ ವ್ಯತ್ಯಾಸ | – | ರೂ. 263.86 ಲಕ್ಷ |

ಒಟ್ಟು 33 ಹೂಡಿಕೆಗಳ ಪೈಕಿ 7 ಹೂಡಿಕೆಗಳ ಬಾಬ್ತು ಲಾಭವು, ಉಳಿದ 26 ಹೂಡಿಕೆಗಳ ಬಾಬ್ತು ನಷ್ಟವು ಇದ್ದು, ಹೂಡಿಕೆಗಳ ಪುಸ್ತಕಗಳ ಬೆಲೆಯಲ್ಲಿ ನಿವ್ವಳ ನಷ್ಟ ರೂ. 263.86 ಲಕ್ಷಗಳಾಗುತ್ತದೆ.

ಪ್ರಸಕ್ತ ವರದಿಸಾಲಿನಲ್ಲಿ ಬ್ಯಾಂಕು ಎಲ್ಲಾ ಹೂಡಿಕೆಗಳಿಂದ ರೂ. 1,448.22 ಲಕ್ಷಗಳ ಬಡ್ಡಿ, ಡಿವಿಡೆಂಡ್ ಹಾಗೂ ಭದ್ರತೆಗಳ ಮಾರಾಟದಿಂದ ಬಂದ ಲಾಭಾಂಶ ಗಳಿಸಿದೆ. ಗಳಿಕೆಯ ಸರಾಸರಿ ಪ್ರಮಾಣ ಒಟ್ಟು ಸರಾಸರಿ ಹೂಡಿಕೆಗಳ ಮೊತ್ತ ರೂ. 21,994.58 ಲಕ್ಷಗಳಿಗೆ ಶೇ.6.58% ರಷ್ಟಾಗುತ್ತದೆ.

ಈ ಬ್ಯಾಂಕಿನ ಎ.ಎಫ್.ಎಸ್.ನಲ್ಲಿರುವ ಪುಸ್ತಕ ಮೊತ್ತ ರೂ. 11,108.55 ಲಕ್ಷಗಳಿಗೆ ಹಾಗು ಈ ವರ್ಗದಲ್ಲಿರುವ ಹೂಡಿಕೆಯನ್ನು, ಮಾರುಕಟ್ಟೆ ದರಕ್ಕೆ ಹೋಲಿಸಿದಾಗ ರೂ. 441.24 ಲಕ್ಷಗಳಷ್ಟು ಸವಕಳಿಯಾಗಿದ್ದು, ಇದನ್ನು ಹೂಡಿಕೆಗಳ ಮೆಲಿನ ಸವಕಳಿ ನಿಧಿಯಲ್ಲಿ ಕಾದಿರಿಸಲಾಗಿದೆ.

1) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿಸುವುದು.

ಆಡಳಿತ ಮಂಡಳಿಯು ಹೂಡಿಕೆಗಳ ನೀತಿಯನ್ನು ಪರಾಮರ್ಶಿಸಿ ದಿ.23–02–2024 ರಂದು ಅನುಮೋದಿಸಿ ಜಾರಿಗೆ ತಂದಿದ್ದು, ಪ್ರಸಕ್ತ ಸಾಲಿನಲ್ಲಿ ಮುಂದುವರೆದಿದೆ.

ಬ್ಯಾಂಕು ತನ್ನೆಲ್ಲಾ ಎಸ್.ಎಲ್.ಆರ್. ಹೂಡಿಕೆಗಳ ಖರೀದಿ ಮತ್ತು ಮಾರಾಟ ವ್ಯವಹಾರವನ್ನು ಎಸ್.ಬಿ.ಐನ ಡಿ.ಎಫ್.ಹೆಚ್.ಐ.ಲಿ., ಸಂಸ್ಥೆಯಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ನಡೆಸಲಾಗುತ್ತದೆ. ಪ್ರಧಾನವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ಹೂಡಿಕೆಗಳ ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ.

2) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ ಬಗ್ಗೆ ವಿಮರ್ಷೆ

ಆಡಳಿತ ಮಂಡಳಿಯ ಉಸ್ತುವಾರಿಯಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿ ಹೂಡಿಕೆ ವ್ಯವಹಾರದ ಪರಿಶೀಲನೆ ಮತ್ತು ಲೆಕ್ಕಪತ್ರಗಳೊಂದಿಗೆ ಸಮನ್ವಯಗೊಳಿಸುವ ಬಗ್ಗೆ ಕ್ರಮವಿಟ್ಟಿರುತ್ತಾರೆ.

3) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ ವಿಮರ್ಷೆ

ಕಾಲಕಾಲಕ್ಕೆ FBIL ಯಿಂದ ಪ್ರಕಟಗೊಳ್ಳುವ ಹೂಡಿಕೆಗಳ ಮೌಲ್ಯವನ್ನು ಆಧರಿಸಿ ಹೂಡಿಕೆಗಳ ಮೌಲ್ಯಮಾಪನವನ್ನು ಮಾಡಲಾಗುತ್ತಿದೆ.

4) SGL/BRS ಪದ್ಧತಿ, ಸಾಲಾಂತ್ಯಕ್ಕೆ ಇರುವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ.

ಬ್ಯಾಂಕು ಎಸ್.ಎಲ್.ಆರ್. ಹೂಡಿಕೆಗಳನ್ನು ಎಸ್.ಬಿ.ಐ– ಡಿ.ಎಫ್.ಹೆಚ್.ಐ. ಲಿ., ಮುಂಬೈ ಇಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ವ್ಯವಹರಿಸಲಾಗುತ್ತಿದೆ.

**23ಎ. ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:**

1) ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.
ದಿನಾಂಕ : 23–09–2023ರಲ್ಲಿ ನಡೆದ ಬ್ಯಾಂಕಿನ ಮಹಾಸಭೆಯಲ್ಲಿ ಬ್ಯಾಂಕು 2022–23ನೇ ಸಾಲಿನಲ್ಲಿ ಕ್ರೋಡಿಕೃತ ನಷ್ಟ ಹೊಂದಿರುವುದರಿಂದ ಉಪನಿಯಮ 105ರಂತೆ ಹಂಚಿಕೆ ಮಾಡಲಾಗಿರುವುದಿಲ್ಲ.

2) SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ?
ಹೌದು. ಮೇಲಿನ ಕಂಡಿಕೆಯಲ್ಲಿ ವಿವರಿಸಿದೆ.

3) ರೂ. 100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?

ಹೌದು. ದಿ.31.03.2024ಕ್ಕೆ ರೂ.604.40/– ಲಕ್ಷಗಳ ಹೂಡಿಕೆಗಳ ಏರಿಳಿತ ನಿಧಿ ಇದ್ದು, ಇದು ಬ್ಯಾಂಕು ಹೊಂದಿರುವ ವಿಕ್ರಯಕ್ಕಾಗಿ ಲಭ್ಯವಿರುವ (ಎ.ಎಫ್.ಎಸ್.) ಹೂಡಿಕೆಗಳ ಮೊತ್ತ ರೂ. 11,108.55 ಲಕ್ಷಗಳಿಗೆ ಶೇ. 5.44 ರಷ್ಟಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದಂತೆ ಕನಿಷ್ಠ ಶೇ.5 ಕ್ಕಿಂತ ಹೆಚ್ಚಿಗೆ ನಿರ್ವಹಣೆ ಮಾಡಲಾಗಿದೆ.

ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ?

ಹೌದು. ತಾಳೆಯಿದೆ.

ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ?

ಉಪನಿಯಮ 105ರಲ್ಲಿ ನಿಧಿಗಳ ಕ್ರೋಢೀಕರಣಕ್ಕಾಗಿ ಅವಕಾಶ ಕಲ್ಪಿಸಿರುವುದನ್ನು ಬಿಟ್ಟರೆ ಯಾವುದೇ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿಕೊಂಡಿಲ್ಲ.

ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ?

ನಿಧಿಗಳಲ್ಲಿನ ಹೂಡಿಕೆಗಳು ಸಹಕಾರ ಸಂಘಗಳ ಕಾಯಿದೆ ಕಲಂ 58ರಲ್ಲಿ ನಿಗಧಿಪಡಿಸಿದ ವಿವಿಧ ಬ್ಯಾಂಕ್ ಖಾತೆಗಳಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಸುತ್ತೋಲೆಗಳ ಅನುಸಾರ ವಿನಿಯೋಗಿಸಲಾಗಿದೆ.

ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ ?

ಪಸ್ಟ್ ಲೀಜಿಂಗ್ ಕಂಪನಿಮೇಲೆ ಮಾಡಿರುವ ಹೂಡಿಕೆ ಹೊರತುಪಡಿಸಿ, ಉಳಿದೆಲ್ಲಾ ಹೂಡಿಕೆಗಳಿಂದ ಬಡ್ಡಿ, ಡಿವಿಡೆಂಡ್ ಬರುತ್ತಿದೆ. 2023–24ನೇ ಸಾಲಿಗೆ ರೂ 1,397.86 ಲಕ್ಷ ಬಡ್ಡಿ /ಡಿವಿಡೆಂಡ್ ಬ್ಯಾಂಕಿಗೆ ಜಮಾ ಆಗಿದೆ.

ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ ಮೇಲಿನ ಕಂಡಿಕೆಗಳಲ್ಲಿ ವಿವರಿಸಿದೆ.

**24) ಸದಸ್ಯರ ಸಾಲ ಮತ್ತು ಮುಂಗಡಗಳು :**

ಎ **ಸಾಲಗಳ ಮೌಲ್ಯಾಂಕನ (Credit Appraisal)**

ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲ ರೀತಿಯ ಪಡೆಯಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ ಸಂಘದಲ್ಲಿ ಬರೆದಿಟ್ಟಿರುವುದರ ಬಗ್ಗೆ ವಿಮರ್ಶೆ.

ಉಪನಿಯಮ 5(15) ಮತ್ತು 68ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳಿಗೆ ಒಳಪಟ್ಟು ಬ್ಯಾಂಕಿನ ಆಡಳಿತ ಮಂಡಳಿ ಅಂಗೀಕರಿಸಿದ ಸೂಕ್ತ ಭದ್ರತೆಗಳ ಆಧಾರದ ಮೇಲೆ ಸಾಲಗಳು ಹಾಗೂ ಬ್ಯಾಂಕ್ ಖಾತರಿಯನ್ನು ನೀಡಲು ಅವಕಾಶವಿರುತ್ತದೆ.

ಬ್ಯಾಂಕು ರೂಪಿಸಿರುವ ಸಾಲದ ನಿಯಮಗಳ ಪ್ರಕಾರ (ನಿಯಮ 26.1ರಂತೆ) ಪ್ರತಿ ವರ್ಷವು ಬ್ಯಾಂಕಿನ ಆಡಳಿತ ಮಂಡಳಿ ಭಾರತೀಯ ರಿಸರ್ವ್ ಬ್ಯಾಂಕು ನಿಗಧಿ ಪಡಿಸಿರುವ ಸಾಲದ ಮಿತಿಯಂತೆ, ಪ್ರತಿ ವ್ಯಕ್ತಿಯ ಹಾಗೂ ಗುಂಪಿನ ಗರಿಷ್ಟ ಸಾಲ ಪಡೆಯುವ ಅರ್ಹತೆಯನ್ನು ನಿಗಧಿಪಡಿಸಬೇಕೆಂದು ತಿಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕು ತನ್ನ ಸುತ್ತೋಲೆಯ ಸಂಖ್ಯೆ DOR(PCB)BPD,CIR NO 10/13.05.000/2019–20 ದಿನಾಂಕ 13/03/2020 ರಂತೆ ಬ್ಯಾಂಕು ಹೊಂದಿರುವ Tier–1 ಬಂಡವಾಳ ನಿಧಿಯ ಶೇ.15% ರಷ್ಟು ವ್ಯಕ್ತಿಗಳಿಗೆ, ಶೇ.25% ರಷ್ಟು ಗುಂಪುಗಳಿಗೆ ಸಾಲ ನೀಡಬಹುದೆಂದು ಮಿತಿಯನ್ನು ನಿಗಧಿಪಡಿಸಿದೆ. ಇದನ್ನು ಬ್ಯಾಂಕು ಪ್ರತಿ ವರ್ಷವು ಆಯಾ ಸಾಲಿನ ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಲೆಕ್ಕ ಹಾಕಬೇಕೆಂದು ತಿಳಿಸಲಾಗಿದೆ.

ಭಾರತೀಯ ರಿಜರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOS(UCB)(BG)(SAF) NO 75550/ 12.07.144 2021–22 ದಿ.22.07.2021 ರಂತೆ, ಬ್ಯಾಂಕು SAF ಈ ನಿಯಂತ್ರಣಕ್ಕೆ (Supervisory

Action Frame)ಗೆ ಒಳಪಟ್ಟಿರುವುದರಿಂದ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಅವುಗಳಲ್ಲಿ ವ್ಯಕ್ತಿಗಳ ಹಾಗೂ ಗುಂಪುಗಳಿಗೆ ಸಾಲ ನೀಡಿರುವ ಮಿತಿಯನ್ನು (Exposure) ಈಗಿರುವುದಕ್ಕಿಂತ ಶೇ. 50% ರಷ್ಟು ಕಡಿಮೆ ಮಾಡಲು ಸೂಚಿಸಿದೆ. ಇದರನ್ವಯ ಬ್ಯಾಂಕ್ ದಿ. 24-08-2023 ರ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿದ್ದು, ಇದು ದಿ. 01-09-2023 ಜಾರಿಗೆ ಬಂದಿರುವುದೆಂದು ತಿಳಿಸಲಾಗಿದೆ.

| ಕ್ರ. ಸಂ. | ವಿವರ | ಸಾಲ ನೀಡಿಕೆಯು ಬಂಡವಾಳ ನಿಧಿಯ ಶೇಕಡಾವಾರು ಪ್ರಮಾಣ | ಅರ್ಹತೆ ಹೊಂದಿರುವುದು | ನಿಗಧಿಗೊಳಿಸಿದ್ದು |
|---|---|---|---|---|
| 1. | ವ್ಯಕ್ತಿಗಳು | ಶೇ. 15 | ರೂ. 2.45 ಕೋಟಿ | ರೂ. 2.40 ಕೋಟಿ |
| 2. | ಗುಂಪುಗಳು | ಶೇ. 25 | ರೂ. 4.09 ಕೋಟಿ | ರೂ. 4.00 ಕೋಟಿ |

ಬ್ಯಾಂಕಿನ ಆಡಳಿತ ಮಂಡಳಿಯು ದಿ. 31.05.2023 ರ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಾಲ ವಿತರಣೆ ಹಾಗು ವಸೂಲಾತಿಯ ಬಗ್ಗೆ ಈ ಕೆಳಕಂಡ ಗುರಿಗಳನ್ನು ನಿಗಧಿಪಡಿಸಿದೆ.

1) 2023-24ನೇ ಸಾಲಿಗೆ ಸಾಲ ವಿತರಣೆ ರೂ. 88.35 ಕೋಟಿ.

2) 2023-24ನೇ ಸಾಲಿಗೆ ಸಾಲ ವಸೂಲಾತಿ ರೂ. 58.37 ಕೋಟಿ.

ಪ್ರಸಕ್ತ ಸಾಲಿನಲ್ಲಿ ಸಾಧಿಸಿದ ಗುರಿ
1) ಸಾಲ ವಿತರಣೆ ರೂ. 75.38 ಕೋಟಿ.
2) ಸಾಲ ವಸೂಲಾತಿ ರೂ. 85.98 ಕೋಟಿ.

**ಭಾರತೀಯರಿಜರ್ವ್ ಬ್ಯಾಂಕ್ ತನ್ನಪತ್ರದಸಂಖ್ಯೆ DOR(PCB).BPD.CIR. No. 10/13.05.000/ 2019-20 ದಿ.13-03-2020 ರಂತೆ, ಯು.ಸಿ.ಬಿ.ಯು ತಮ್ಮ ಒಟ್ಟು ಸಾಲಗಳಲ್ಲಿ ಕನಿಷ್ಠ ಶೇಕಡ 50 ಪ್ರತಿ ಶತವನ್ನು 25 ಲಕ್ಷ ಮೀರದ ಸಾಲಗಳಲ್ಲಿ ಅಥವಾ ಬ್ಯಾಂಕಿನ ಶ್ರೇಣಿ 1 (Tier-I) ಬಂಡವಾಳದ 0.2% ಮೀರದಂತೆ(ಪ್ರತಿ ಸಾಲಕ್ಕೆ) ತೊಡಗಿಸಿಕೊಳ್ಳಬೇಕು ಮತ್ತು ಇದು ಒಬ್ಬ ಸಾಲಗಾರರಿಗೆ ಗರಿಷ್ಠ 1 ಕೋಟಿ ಮಿತಿಯಲ್ಲಿರಬೇಕು.ಇದನ್ನು ದಿನಾಂಕ 31-03-2024 ರ ಒಳಗೆ ಅಳವಡಿಸಿಕೊಳ್ಳಬೇಕಾಗಿರುತ್ತದೆ. ದಿನಾಂಕ 31-03-2024 ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಪ್ರಕಾರ ಇದು ಅಂದಾಜು 31% ಇರುತ್ತದೆ.ಇದನ್ನು ಶೇ 50%ಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

**ಸಮಜಾಯಿಷಿ:**
ಭಾರತೀಯ ರಿಸರ್ವ್ ಬ್ಯಾಂಕಿನವರು ಈ ಮೇಲೆ ಸೂಚಿಸಿರುವ ಮಾನದಂಡವನ್ನು ದಿನಾಂಕ 25.07.2024ರ ಪತ್ರ ಸಂಖ್ಯೆ 2024-25/53 ರಲ್ಲಿ ಪರಿಷ್ಕರಿಸಿದ್ದು, ಇದರ ಪ್ರಕಾರ ಶೇ. 50ರ ಬದಲಾಗಿ ಶೇ. 40ಕ್ಕೆ ಜಾರಿ ಮಾಡಿದ್ದಾರೆ. ಲೆಕ್ಕ ಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗುವುದು.

ಸಾಲ ವಿತರಣೆ ಮತ್ತು ಸಾಲ ವಸೂಲಾತಿ ಗುರಿಗಳನ್ನು ವಾಸ್ತವಿಕ ನೆಲೆಯ ಮೇಲೆ ಗುರುತಿಸಬೇಕಾಗಿದ್ದು, ಅದನ್ನು ಆಡಳಿತ ಮಂಡಳಿ ಮನಗಾಣಬೇಕಾಗಿದೆ.

ಕ್ಲಿಷ್ಟಕರವಾದ ದೀರ್ಘಾವಧಿಯ ಹಳೆ ಬಾಕಿಗಳ ವಸೂಲಾತಿಗೆ ಆದ್ಯ ಗಮನ ನೀಡಬೇಕಾಗಿದೆ.

ಉಪನಿಯಮ 68ರಂತೆ ಈ ಕೆಳಕಂಡ ಸಾಲಗಳನ್ನು ನೀಡಲು ಅವಕಾಶವಿರುತ್ತದೆ.

1) ಜಾಮೀನು ಸಾಲ
2) ಚರ ಮತ್ತು ಸ್ಥಿರ ಸ್ವತ್ತುಗಳ ಆಧಾರ ಸಾಲ
3) ಸರ್ಕಾರಿ / ಅರೆಸರ್ಕಾರಿ ಭದ್ರತೆ ಪತ್ರಗಳ, ಉಗ್ರಾಣ ರಸೀದಿಗಳ ಆಧಾರದ ಮೇಲೆ ಸಾಲ
4) ಚಿನ್ನಾಭರಣ ಆಧಾರ ಸಾಲ.

ಬಿ **ಸಾಲ ಮಂಜೂರಾತಿ/ ವಿತರಣೆ**

ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?

ಉಪನಿಯಮ 67ರಂತೆ ಪ್ರತಿ ವರ್ಷವು ಸಾಲ ನೀಡಿಕೆಯ ಸಂಬಂಧ ಸಾಲದ ನೀತಿಗಳನ್ನು ರೂಪಿಸಲು ತಿಳಿಸಲಾಗಿದೆ. ಪ್ರಸಕ್ತ ಸಾಲಿಗೆ ಬ್ಯಾಂಕು ದಿ.15.03.2024 ರಂದು ಸಾಲದ ನೀತಿಯನ್ನು ಅನುಮೋದಿಸಿದೆ. ಪ್ರಸಕ್ತ ಸಾಲಿನಲ್ಲಿ ಚಿನ್ನಾಭರಣ ಸಾಲಗಳ ಮೇಲೆ ರೂ. 10.00 ಲಕ್ಷಗಳ ವರೆಗೆ ಶಾಖಾ ವ್ಯವಸ್ಥಾಪಕರು ಹಾಗೂ ಜಾಮೀನು ಸಾಲ, ಸರ್ಕಾರಿ / ಅರೆಸರ್ಕಾರಿ ಭದ್ರತೆ ಸಾಲ, ಇವುಗಳ ಸಂಬಂಧ ರೂ. 1 ಲಕ್ಷಗಳ ವರೆಗೆ ಸಾಲವನ್ನು ಬ್ಯಾಂಕಿನ ಶಾಖಾ ವ್ಯವಸ್ಥಾಪಕರು, ರೂ.2ಲಕ್ಷಗಳವರೆಗೆ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ರೂ.3 ಲಕ್ಷಗಳವರೆಗೆ ಸಾಲವನ್ನು ಪ್ರಧಾನ ವ್ಯವಸ್ಥಾಪಕರು ನೀಡಿರುತ್ತಾರೆ.

ಈ ಮಿತಿಗಿಂತ ಮೇಲ್ಪಟ್ಟ ಎಲ್ಲಾ ಸಾಲಗಳನ್ನು ಸಾಲದ ಉಪಸಮಿತಿಯ ಪರಿಶೀಲನೆಗೆ ಒಳಪಡಿಸಿ ಅದರ ಅನುಮೋದನೆ ನಂತರ ಆಡಳಿತ ಮಂಡಳಿಯ ಸ್ಥಿರೀಕರಣ ಪಡೆಯಲಾಗಿರುತ್ತದೆ.

ಸಿ **ದಾಖಲೀಕರಣ ಸಂಗ್ರಹಣೆ (Documentation)**

ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿ ಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)

ಪಡೆಯಲಾಗಿದೆ.

ಡಿ **ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:**

1 ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ

ಸಾಲ ಮಂಜೂರಾತಿ / ವಿತರಣೆಗೆ ಮೊದಲು ಸಾಲಗಾರನ ಸಾಲ ಪಡೆಯುವ ಸಾಮರ್ಥ್ಯ ಹಾಗು ಮರುಪಾವತಿ ಸಾಮರ್ಥ್ಯದ ಅವಲೋಕನೆ, ಸಾಲ ವಿತರಣೆಯ ನಂತರ ಸೂಕ್ತ ಮೇಲುಸ್ತುವಾರಿಗೆ (Pre-sanction appraisal and Post-sanction supervision) ಸಂಬಂಧಿಸಿದ ಮಾನದಂಡಗಳನ್ನು ರಚಿಸಿಕೊಂಡು ಅದರಂತೆ ಬ್ಯಾಂಕು ಕಾರ್ಯ ನಿರ್ವಹಿಸಬೇಕಾಗಿದೆ.

2 ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ.

ಪಡೆಯಲಾಗುತ್ತಿದೆ.

3 ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ.

ಆರ್‌ಬಿಐ ಸುತ್ತೋಲೆ UBD.BPD.(PCB). MC.NO.1 /13.05.000/2013-14 DTD.01.07.2013- Master Circular – Exposure Norms and Statutory/ Other Restrictions – UCBs ರನ್ವಯ ರೂ. 10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ಧ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆ ಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.

**ಸಮಜಾಯಿಷಿ:**
ಸನ್ನದು ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆರ್ಥಿಕ ತಃಖ್ತೆಗಳನ್ನು ಸಾಲ ಸೌಲಭ್ಯ ಪಡೆದ ಸದಸ್ಯರುಗಳಿಂದ ಈಗಾಗಲೇ ಪಡೆಯಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ತೆರಿಗೆ ಸಲಹೆಗಾರರಿಂದ ಪರಿಶೋಧಿಸಲ್ಪಟ್ಟ ಆರ್ಥಿಕ ತಃಖ್ತೆಗಳನ್ನು ಪಡೆದಿದ್ದರೂ ಸಹ ಎರಡೂ ಸಂದರ್ಭಗಳಲ್ಲಿ ಆದಾಯ ತೆರಿಗೆ ಪಾವತಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯು ತಂತ್ರಾಂಶದ ಮೂಲಕ ದೃಢೀಕರಿಸಿಕೊಳ್ಳಲಾಗುತ್ತಿದೆ. ಅದಾಗ್ಯೂ, ಲೆಕ್ಕ ಪರಿಶೋಧಕರ ಸೂಚನೆಯನ್ನು ಗಮನಿಸಲಾಗಿದೆ.

4 ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ.

ಬ್ಯಾಂಕು ಸಾಲ ನೀತಿಯನ್ನು ರೂಪಿಸಿದ್ದು, ಬ್ಯಾಂಕಿನ ಉಪನಿಯಮ 67, 68 ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ವಯ ಅಗತ್ಯ ಮಾಹಿತಿ, ದಾಖಲೆ ಪಡೆದು ಸಾಲಗಳನ್ನು ನೀಡಲಾಗುತ್ತದೆ.

5 ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ.

ಅಡವು ಮಾಡಿಕೊಂಡ ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗು ಇತರೆ ಭದ್ರತೆಗಳಿಗೆ ಸಂಬಂಧಿಸಿದಂತೆ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿ ನಿಯಮಿತವಾಗಿ ಮಾಡುತ್ತಿಲ್ಲ.

**ಸಮಜಾಯಿಷಿ:**
ಕಂಡಿಕೆ ಸಂಖ್ಯೆ 11 (3) (3) ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 48)

6 ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ

ಸಾಲಗಳ ಅರ್ಜಿಗಳನ್ನು ಹೊಸದಾಗಿ ಪಡೆದು ಪರಿಶೀಲಿಸಿದಾಗ ಅಥವಾ ನವೀಕರಿಸಿದಾಗ ಮಾತ್ರ ತನಿಖಾ ವರದಿಗಳನ್ನು ಪಡೆದು ನಿರ್ವಹಿಸಲಾಗಿದೆ.

7 ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI)

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯಂತೆ ದಿನಾಂಕ 31.03.2024ಕ್ಕೆ ಬಾಕಿ ಇರುವ ಸಾಲಗಳನ್ನು ಉತ್ಪಾದಕ ಮತ್ತು ಅನುತ್ಪಾದಕ ಸಾಲಗಳೆಂದು ಗುರ್ತಿಸಿ ಆರ್ಥಿಕ ತಃಖ್ತೆಗಳಲ್ಲಿ ನಿಗಧಿ ಪಡಿಸಿದ ದರದಲ್ಲಿ ಅವಕಾಶ ಕಲ್ಪಿಸಲಾಗಿದೆ.

8 ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ.

ಹೆಚ್ಚಿಸಿದ ಸಾಲದ ಮಿತಿಗಳು ವಿಸ್ತರಣೆಗೊಂಡಂತೆ ಅಗತ್ಯ ಪೂರಕ ದಾಖಲೆಗಳನ್ನು ಭದ್ರತೆಗಾಗಿ ಪಡೆದು ಪರಿಶೀಲಿಸಲಾಗಿದೆ.

9 ಸೌಲಭ್ಯಗಳ ನವೀಕರಣ
ಓ.ಡಿ.ಸಾಲಗಳನ್ನು ಮಾತ್ರ ನವೀಕರಿಸಲಾಗುತ್ತದೆ.

10 ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.
ಯಾವುದೇ ಕೈಗಾರಿಕೆಗೆ ಸಾಲ ನೀಡುತ್ತಿಲ್ಲ.

**ಇ ಕರಡು ಮತ್ತು ಸಂಶಯಾಸ್ಪದ ಸಾಲಗಳು:**

1 ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ:

ಅನುತ್ಪಾದಕ ಆಸ್ತಿಗಳ ವರ್ಗೀಕರಣ ಮತ್ತು ಅಗತ್ಯ ಅವಕಾಶ ಕಲ್ಪಿಸಲಾಗಿದೆ.

2 ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ?

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಲಾಗಿದೆ. 31/03/2024ಕ್ಕೆ ಹಿಂದಿನ ಸಾಲಗಳದ್ದೂ ಸೇರಿ ಬ್ಯಾಂಕ್ ಗಳಿಸಿದ ಲಾಭದಿಂದ ತೆಗೆದ ಕರಡು ನಿಧಿ ರೂ.1502.04 ಲಕ್ಷಗಳು ಹಾಗೂ ಅನುತ್ಪಾದಕ ಆಸ್ತಿಗಳ ಮೇಲಿನ ಅವಕಾಶ ರೂ.1347.96 ಲಕ್ಷಗಳು ಸೇರಿದಂತೆ ಒಟ್ಟು ರೂ. 2850.00 ಲಕ್ಷಗಳು ಕರಡು ನಿಧಿಯನ್ನು ಬ್ಯಾಂಕ್ ಹೊಂದಿರುತ್ತದೆ.

3 ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.

ಮೀರೆಳೆತ ಸಾಲಗಳನ್ನು ಹೊರತುಪಡಿಸಿ, ಇನ್ನಾವುದೇ ಸಾಲಕ್ಕೆ ಆಕರಿಸಿದ ಬಡ್ಡಿಯನ್ನು ಸೇರಿಸುತ್ತಿಲ್ಲ.

4 ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ:ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGC ಯನ್ನೊಳಗೊಂಡಂತೆ.

ಬ್ಯಾಂಕಿನಲ್ಲಿ ಯಾವುದೇ ಸಾಲವನ್ನು ಕರಡು ಸಾಲವೆಂದು ಪರಿಗಣಿಸಿಲ್ಲ. ಆದ್ದರಿಂದ ಯಾವುದೇ Rehabilitation ಕಾರ್ಯಕ್ರಮ ಹೊಂದಿಲ್ಲ.

5 ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು

ಪ್ರಸಕ್ತ ಸಾಲಿಗೆ ಯಾವುದೂ ಇರುವುದಿಲ್ಲ.

6 ಸಾಲ ವಸೂಲಾತಿಯ ಕಾರ್ಯ ವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ

1) 2023-24ನೇ ಸಾಲಿನಲ್ಲಿ ಬ್ಯಾಂಕು ಸಾಲದ ನೀತಿಯನ್ನು ಪರಿಷ್ಕರಿಸಿ ಅನುಮೋದಿಸಿದೆ.

2) ಉಪನಿಯಮ 88ರಂತೆ ನೀಡಿದ ಸಾಲ ಸುಸ್ತಿಯಾದ 6 ತಿಂಗಳ ಅವಧಿಯೊಳಗೆ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಬೇಕು.

3) ಆಡಳಿತ ಮಂಡಳಿಯು ತನ್ನ ಪ್ರತಿ ಮಾಸಿಕ ಸಭೆಯಲ್ಲಿ ಎನ್.ಪಿ.ಎ ಆದ, ದೊಡ್ಡ ಪ್ರಮಾಣದ ಸಾಲಗಳ ಅನೇಕ ಪ್ರಕರಣಗಳನ್ನು ಪರಿಶೀಲಿಸುತ್ತಿದೆ. ಕೆಲವು ಪ್ರಕರಣಗಳ ವಿರುದ್ದ SARFAESI ಕಾಯಿದೆಯಡಿ ಕ್ರಮವಿಡಲು, ಕೆಲವು ಪ್ರಕರಣಗಳಲ್ಲಿ ಸಾಲಗಾರರು ಮರುಪಾವತಿಸುವ ಬಗ್ಗೆ ಭರವಸೆ ನೀಡಿರುವ ಹಿನ್ನಲೆಯಲ್ಲಿ, ಕಾದುನೋಡಿ ಅನುಸರಣಾ ಕ್ರಮವಿಡುವ ಬಗ್ಗೆ ನಿರ್ಣಯಿಸಲಾಗಿದೆ.

ಎಫ್ **<u>ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:</u>**

ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯ ಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.

ಮುಂದಿನ ಕಂಡಿಕೆಗಳಲ್ಲಿ ವಿವರಿಸಿದೆ.

ಜಿ **ಸದಸ್ಯರ ಸಾಲ ಮತ್ತು ಮುಂಗಡಗಳು**

ಬ್ಯಾಂಕಿನ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ.

ಉಪನಿಯಮ 71ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಒಳಪಟ್ಟು ಸಂಘದ ಆಡಳಿತ ಮಂಡಳಿಯು ಒಬ್ಬ ಅರ್ಹ ಸದಸ್ಯರಿಗೆ ನೀಡಬಹುದಾದ ಎಲ್ಲಾ ರೀತಿಯ ಸಾಲಗಳ ಮಿತಿಯನ್ನು ನಿಗಧಿಪಡಿಸಲು ತಿಳಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕು ಸುತ್ತೋಲೆ ಸಂಖ್ಯೆ DOR (PCB) BPD CIR NO. 10/13.05.000/ 2019-20 ದಿನಾಂಕ: 13/03/2020 ರಂತೆ, ಬ್ಯಾಂಕಿನ Tier-1 ಬಂಡವಾಳ ನಿಧಿಯ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ ಶೇ.15% ರಷ್ಟು ಹಾಗೂ ಗುಂಪುಸಾಲಗಾರರಿಗೆ ಬಂಡವಾಳ ನಿಧಿಯ ಶೇ.25%ಕ್ಕೆ ಮೀರದಂತೆ ಸಾಲದ ಮಿತಿಯನ್ನು ನಿಗಧಿಗೊಳಿಸಿದೆ.

ಭಾರತೀಯ ರಿಜರ್ವ್ ಬ್ಯಾಂಕಿನ ದಿ.22-07-2021ರ ಸೂಚನೆಗಳ ಹಿನ್ನಲೆಯಲ್ಲಿ (ಬ್ಯಾಂಕಿಂಗ್ ನಿಯಂತ್ರಣಕಾಯಿದೆ ಕಲಂ 36(1)ರಡಿ) ಸಾಲದ ನೀತಿಯನ್ನು ಪರಿಷ್ಕರಿಸಿ (ವ್ಯಕ್ತಿಗಳಿಗೆ ಸಾಲದ ಮಿತಿ ರೂ.2.40 ಕೋಟಿ, ಗುಂಪುಗಳಿಗೆ ರೂ.4.00 ಕೋಟಿ) ದಿ.01-09-2023 ರಂದು ಜಾರಿಗೊಳಿಸಿದೆ.

2 ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು.

ಈ ಕೆಳಗಿನಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

| ಸಾಲಗಳ ಸ್ವರೂಪ | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಸಾಲದ ವಿತರಣೆ | ಪ್ರಸಕ್ತ ಸಾಲಿನಲ್ಲಿ ಸಾಲ ವಸೂಲಾತಿ | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ ಶೇಕಡಾವಾರು ಪ್ರಮಾಣ + ಏರಿಕೆ/ – ಇಳಿಕೆ |
|---|---|---|---|---|---|---|
| ಜಾಮೀನು ಸಾಲ | 1,112.49 | – | 767.45 | 345.04 | 345.04 | –68.98 |
| ಓವರ್ ಡ್ರಾಫ್ಟ್ | 870.95 | 1397.15 | 1431.24 | 836.86 | 836.86 | –3.91 |
| ಠೇವಣಿ ಆಧಾರ ಸಾಲ | 446.48 | 877.07 | 957.44 | 366.11 | 366.11 | –18.00 |
| ಚಿನ್ನಾಭರಣ ಆಧಾರ ಸಾಲ | 296.98 | 567.07 | 488.16 | 375.89 | 375.89 | 26.57 |
| ಭದ್ರತಾ ಸಾಲ | 16,855.54 | 5120.38 | 5396.74 | 16579.18 | 16579.18 | –1.64 |
| ವಾಹನಾಧಾರಿತ ಸಾಲ | 22.84 | 33.00 | 17.53 | 38.31 | 38.31 | 67.73 |
| ಯಂತ್ರೋಪಕರಣ ಸಾಲ | 9.13 | – | 9.13 | – | – | –100.00 |
| ಸಿಬ್ಬಂದಿ ಸಾಲ | 387.87 | 316.50 | 303.02 | 401.35 | 401.35 | 3.48 |
| ಬಡವರಬಂಧುಸಾಲ | 0.04 | – | 0.04 | – | – | –100 |
| **ಒಟ್ಟು ರೂ** | **20,002.32** | **8,311.17** | **9,370.75** | **18,942.74** | **18,942.74** | **–5.30** |

3 ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ.

ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ ಶೇ5.30 ರಷ್ಟು ಸಾಲದ ಬಾಕಿ ಕಡಿಮೆಯಾಗಿರುತ್ತದೆ.ಹಿಂದಿನ ಸಾಲಿಗೆ ಹೋಲಿಸಿದಾಗ ಸಾಲ ವಿತರಣೆಯಲ್ಲಿ ಶೇ 45.61% ರಷ್ಟು ಹಾಗೂ ಸಾಲ ವಸೂಲಾತಿ ಪ್ರಮಾಣದಲ್ಲಿ ಹಿಂದಿನ ಸಾಲಿಗೆ ಹೋಲಿಸಿದಾಗ ಶೇ 47.61 ರಷ್ಟು ಹೆಚ್ಚಾಗಿರುತ್ತದೆ.

ರೂ ಲಕ್ಷಗಳಲ್ಲಿ

| 2021–22 | 2022–23 | 2023–24 |
|---|---|---|
| 20642.54 | 20002.32 | 18942.74 |

ಕಳೆದ ಸಾಲಿಗೆ ಹೋಲಿಸಿದಾಗ ಬ್ಯಾಂಕಿನ ಸಾಲದ ಪ್ರಮಾಣವು ಶೇ.5.30 ರಷ್ಟು ಇಳಿಕೆಯಾಗಿರುತ್ತದೆ. ದಿನಾಂಕ 31.03.2024ಕ್ಕೆ ಬ್ಯಾಂಕು ಹೊಂದಿರುವ ಠೇವಣಿಗಳು ಹಾಗು ಸಾಲಗಳ ಅನುಪಾತ ಶೇ. 58.25% ರಷ್ಟಿದೆ.

4 ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ.

ಆಡಳಿತ ಮಂಡಳಿ ಸದಸ್ಯರುಗಳ ಸಾಲಗಳು ವರದಿ ಸಾಲಿನ ಅಂತ್ಯಕ್ಕೆ ಯಾವುದೂ ಇರುವುದಿಲ್ಲ.

ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?

ಅನ್ವಯಿಸುವುದಿಲ್ಲ.

5 ಸಾಲದ ಕುಳುವಾರು ತಃಖ್ತೆಗಳು ಆಸ್ತಿ ಜವಾಬ್ದಾರಿ ತಃಖ್ತೆಗೆ ತಾಳೆ ಇರುವ ಬಗ್ಗೆ.

ಅನ್ವಯಿಸುವುದಿಲ್ಲ.

6 ಮುದ್ದತ್ತ ಮೀರಿದ ಮತ್ತು ಮುದ್ದತ್ತ ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶ ವಿರುವುದೋ ?

ಇಂತಹ ಪ್ರಕರಣಗಳು ಇರುವುದಿಲ್ಲ.

7 ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ.

ಓ.ಡಿ. ಸಾಲಗಳನ್ನು ಹೊರತುಪಡಿಸಿ ಉಳಿದಂತೆ ಯಾವುದೇ ಇತರೆ ಸಾಲಗಳನ್ನು ನವೀಕರಿಸಿದ ಪ್ರಕರಣಗಳು ಇರುವುದಿಲ್ಲ.

8 ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತಿವೆಯೇ ವಿವರಿಸಿ.

ಸಾಮಾನ್ಯವಾಗಿ ಆಭರಣಗಳ ಮೇಲಿನ ಸಾಲಗಳನ್ನು ನವೀಕರಿಸಲಾಗುತ್ತಿದ್ದು, ಈ ಸಾಲದ ಖಾತೆಗಳಿಗೆ ಸಂಬಂದಿಸಿದಂತೆ ಬಡ್ಡಿಯ ಮೊತ್ತವನ್ನು ವಸೂಲಿ ಮಾಡಿಕೊಂಡು, ಹಿಂದೆ ಪಡೆದಿದ್ದ ಸಾಲದ ಸಮಾನದ ಮೊತ್ತಕ್ಕೆ ಹೊಸ ಸಾಲ ನೀಡಿರುವುದನ್ನು ಗಮನಿಸಲಾಗಿದೆ.

9 ಹಳೇ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರು ಮಾಡಿ ಹಳೇ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ.

ಅಂತಹ ಪ್ರಕರಣಗಳು ಯಾವುದೂ ಗಮನಕ್ಕೆ ಬಂದಿಲ್ಲ

10 ಬಂಗಾರ ಅಡುವಿನ ಸಾಲ ನೀಡಿದಲ್ಲಿ ಸಂಸ್ಥೆಯಲ್ಲಿಯ ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ.

ಬ್ಯಾಂಕಿನಲ್ಲಿ ಒತ್ತೆ ಇಟ್ಟ ಚಿನ್ನಾಭರಣಗಳನ್ನು ಶಾಖೆಗಳ ಶಾಖಾ ವ್ಯವಸ್ಥಾಪಕರು ಹಾಗು ಲೆಕ್ಕಿಗರ ಜಂಟಿ ಅಭಿರಕ್ಷೆಯಲ್ಲಿ ಇಟ್ಟಿಕೊಳ್ಳಲಾಗಿರುತ್ತದೆ. ಪ್ರಸಕ್ತ ಸಾಲಿಗೆ ರೂ. 12.50 ಕೋಟಿಯಷ್ಟು ವಿಮೆ ಮಾಡಿಸಿದ್ದು, ವರ್ಷಾಂತ್ಯದವರೆಗು ಚಾಲ್ತಿಯಲ್ಲಿರುತ್ತದೆ.

11 ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು.

ದಿ.31.03.2024ರ ಅಂತ್ಯಕ್ಕೆ ರೂ.345.04 ಲಕ್ಷ ಭದ್ರತೆ ಇಲ್ಲದ ಸಾಲ ಹಾಗೂ ರೂ.18597.70 ಲಕ್ಷಗಳ ಭದ್ರತೆ ಇರುವ ಸಾಲಗಳು ಬಾಕಿ ಇರುತ್ತದೆ. ಭದ್ರತೆ ಇಲ್ಲದ ಸಾಲವು ಒಟ್ಟು ಸಾಲದ ಶೇ.1.82% ರಷ್ಟಿದೆ. ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಬ್ಯಾಂಕಿನ ನಿವ್ವಳ ಆಸ್ತಿಗಳ ಮೊತ್ತ ರೂ.50725.11ಲಕ್ಷಗಳಿಗೆ ಭದ್ರತೆ ಇಲ್ಲದ ಸಾಲಗಳ ಪ್ರಮಾಣ ಶೇ.0.68%ರಷ್ಟಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನವರು ನಿಗಧಿಪಡಿಸಿದ ಶೇ.10%ರ ಮಿತಿಯೊಳಗೆ ಇರುತ್ತದೆ.

12 ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.

ಮುಂದಿನ ಕಂಡಿಕೆಯಲ್ಲಿ ವಿವರಿಸಿದೆ.

13 ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು.

2023–24ನೇ ಸಾಲಿಗೆ ಸಂಬಂಧಿಸಿದಂತೆ, ಬಡ್ಡಿ ಲೆಕ್ಕಾಚಾರವನ್ನು ಪರಿಶೀಲಿಸಿದ್ದು, ಕ್ರಮಬದ್ಧವಾಗಿರುವುದು ಕಂಡುಬಂದಿದೆ.

14 ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು.

ಒಟ್ಟು ಸದಸ್ಯರ ಸಂಖ್ಯೆ 34325 ಅದರಲ್ಲಿ ಸಾಲ ಪಡೆದವರು 1406 ಸಾಲ ಪಡೆದವರ ಶೇಕಡವಾರು ಪ್ರಮಾಣ 4.10%.

15 ರೂ.20,000ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು.

ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ.

16 ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು.

ಹೌದು. ವರದಿ ಸಾಲಿನಲ್ಲಿ 881 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 4 ಅರ್ಜಿಗಳು ತಿರುಸ್ಕೃತಗೊಂಡು ಉಳಿದ ಎಲ್ಲಾ ಅರ್ಜಿಗಳ ಸಾಲ ಮಂಜೂರಾಗಿದೆ.

17 ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ ವಿವರಿಸುವುದು.

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಿದ್ದು, ಸದರಿ ಸಾಲಗಳ ಸಂಬಂಧ ಅಗತ್ಯ ಅವಕಾಶವನ್ನು ಕಲ್ಪಿಸಲಾಗಿದೆ.

18 ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೋ?

ಬ್ಯಾಂಕು ದಿ.31.03.2024ಕ್ಕೆ ರೂ. 1502.04 ಲಕ್ಷಗಳ ಕರಡು ಸಾಲದ ನಿಧಿಯನ್ನು ಕಾಯ್ದಿರಿಸಿದೆ. ಅಂತೆಯೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಿದ್ದು ರೂ. 1347.96 ಲಕ್ಷಗಳನ್ನು ಅನುತ್ಪಾದಕ ಆಸ್ತಿಗಳಿಗಾಗಿ ಅವಕಾಶ ಕಲ್ಪಿಸಿರುವುದು ಸೇರಿದಂತೆ ಸಾಲಿನ ಅಂತ್ಯಕ್ಕೆ ಒಟ್ಟು ರೂ. 2850.00 ಲಕ್ಷಗಳ ಅವಕಾಶ ಕಲ್ಪಿಸಿದೆ.

19 ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.

ಮುಂದಿನ ಕಂಡಿಕೆಯಲ್ಲಿ ವಿವರಿಸಿದೆ.

20 ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್‌ಆರ್–1/ಎ.1, 81–82 ದಿನಾಂಕ : 04–07–1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದರ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು.

ಪಟ್ಟಿ ಲಗತ್ತಿಸಿದೆ.

25 **ಸುಸ್ತಿ ಸಾಲಗಳ ವಿವರ**

1 ಸುಸ್ತಿ ಸಾಲದ ಮೊತ್ತ

ದಿ.31.03.2024ರ ಅಂತ್ಯಕ್ಕೆ ಬ್ಯಾಂಕಿಗೆ ಬಾಕಿ ಇರುವ ಒಟ್ಟು ಸಾಲದ ಪೈಕಿ ರೂ.1,606.30ಲಕ್ಷಗಳು ಸುಸ್ತಿ ಸಾಲ ಇರುವುದಾಗಿ ತಿಳಿಸಲಾಗಿದೆ. ಇದು ಒಟ್ಟು ಬಾಕಿಗೆ ಶೇ.8.48% ರಷ್ಟಿದೆ. ಕಳೆದ ಸಾಲಿನ ಶೇ.12.66ಕ್ಕೆ ಹೋಲಿಸಿದಾಗ, ವರದಿಸಾಲಿನಲ್ಲಿ ಶೇ.4.18ರಷ್ಟು ಕಡಿಮೆಯಾಗಿದೆ.

2 ಡಿ.ಸಿ.ಬಿ. ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಶೇಕಡ

2023–24ನೇ ಸಾಲಿನಲ್ಲಿ ಬ್ಯಾಂಕು ಹೊಂದಿದ್ದ ಸಾಲಗಳ ತಗಾದೆ, ವಸೂಲಿ, ಮತ್ತು ಬಾಕಿ ವಿವರ ಕೆಳಕಂಡಂತಿದೆ.

1) ತಗಾದೆ ರೂ. 10,204.13 ಲಕ್ಷ

2) ವಸೂಲಿ ರೂ. 8,597.83 ಲಕ್ಷ

3) ಬಾಕಿ ರೂ. 1,606.30 ಲಕ್ಷ

ಪ್ರಸಕ್ತ ಸಾಲಿನಲ್ಲಿ ಒಟ್ಟು ತಗಾದೆಗೆ ವಸೂಲಾತಿಯು ಶೇ. 84.26 ರಷ್ಟಿದೆ.

3 ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ

ರೂ. ಲಕ್ಷಗಳಲ್ಲಿ

| ಕ್ರ ಸಂ | ಅವಧಿ | ವೈಯಕ್ತಿಕ ಸಾಲ | ಭದ್ರತಾ ಸಾಲ | ಓವರ್ ಡ್ರಾಫ್ಟ್ ಸಾಲ | ವಾಹನ ಸಾಲ | ಬಡವರ ಬಂಧು ಸಾಲ |
|---|---|---|---|---|---|---|
| 1 | ಒಂದು ವರ್ಷದೊಳಗೆ | 14.69 | 62.67 | – | – | – |
| 2 | 1 ರಿಂದ 2 ವರ್ಷದೊಳಗೆ | 13.91 | 48.72 | – | – | – |
| 3 | 2 ರಿಂದ 3 ವರ್ಷದೊಳಗೆ | 8.43 | 156.17 | – | – | – |
| 4 | 3 ರಿಂದ 4 ವರ್ಷದೊಳಗೆ | 19.70 | 53.28 | 34.36 | – | – |
| 5 | 4 ರಿಂದ 5 ವರ್ಷದೊಳಗೆ | 8.01 | 38.67 | – | – | – |
| 6 | 5 ರಿಂದ 6 ವರ್ಷದೊಳಗೆ | 8.70 | 154.64 | 10.15 | – | – |
| 7 | 6 ವರ್ಷ ಮೇಲ್ಪಟ್ಟ | 24.40 | 773.73 | 168.15 | – | – |
| | **ಒಟ್ಟು ರೂ.** | **97.84** | **1287.88** | **212.66** | – | – |

| ಕ್ರ ಸಂ | ಅವಧಿ | ಚಿನ್ನಾಭರಣ ಸಾಲ | ಠೇವಣಿ ಮೇಲಿನ ಸಾಲ | ಸಿಬ್ಬಂದಿ ಸಾಲ | ಎಂ.ಎಂ.ಪಿ. ಸಾಲ | ಒಟ್ಟು |
|---|---|---|---|---|---|---|
| 1 | ಒಂದು ವರ್ಷದೊಳಗೆ | 6.21 | – | – | – | 83.57 |
| 2 | 1 ರಿಂದ 2 ವರ್ಷದೊಳಗೆ | – | – | – | – | 62.63 |
| 3 | 2 ರಿಂದ 3 ವರ್ಷದೊಳಗೆ | – | – | – | – | 164.60 |
| 4 | 3 ರಿಂದ 4 ವರ್ಷದೊಳಗೆ | – | – | – | – | 107.34 |
| 5 | 4 ರಿಂದ 5 ವರ್ಷದೊಳಗೆ | – | – | – | – | 46.68 |
| 6 | 5 ರಿಂದ 6 ವರ್ಷದೊಳಗೆ | – | – | – | – | 173.49 |
| 7 | 6 ವರ್ಷ ಮೇಲ್ಪಟ್ಟ | – | – | 1.71 | – | 967.99 |
| | **ಒಟ್ಟು ರೂ.** | **6.21** | – | **1.71** | – | **1606.30** |

| | | |
|---|---|---|
| 4 | ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ.<br><br>ಬ್ಯಾಂಕು ಒದಗಿಸಿರುವ ವಿವರಗಳ ಅನ್ವಯ ಒಟ್ಟು ಸುಸ್ತಿ ಸಾಲ ರೂ. 1606.30 ಲಕ್ಷಗಳಿಗೆ 277 ಪ್ರಕರಣಗಳಿದ್ದು, ಇವುಗಳ ಪೈಕಿ ಕೇವಲ 59 ಪ್ರಕರಣಗಳಿಗೆ ಮಾತ್ರ ಕಾನೂನು ಕ್ರಮವಿಡಲಾಗಿದ್ದು ವಿವರ ಕೆಳಕಂಡಂತಿದೆ :<br><br>1) ದಾವ ಕ್ರಮ – 15 ಪ್ರಕರಣಗಳು ರೂ. 127.23 ಲಕ್ಷ<br>2) ಅಮಾಲ್ಜಾರಿ ಕ್ರಮ – 10 ಪ್ರಕರಣಗಳು ರೂ. 46.19 ಲಕ್ಷ<br>3) SARFAESI ಕಾಯಿದೆ ಅಡಿ – 34 ಪ್ರಕರಣಗಳು ರೂ. 2239.03 ಲಕ್ಷ<br>**ಒಟ್ಟು – 59 ಪ್ರಕರಣಗಳು ರೂ. 2412.45 ಲಕ್ಷ**<br><br>ಬಾಕಿ ಇರುವ ಒಟ್ಟು 277 ಪ್ರಕರಣಗಳ ಪೈಕಿ 59 ಪ್ರಕರಣಗಳ ಮೇಲೆ ಕಾನೂನು ಕ್ರಮವಿಟ್ಟಿರುವುದಾಗಿ ತಿಳಿಸಿದ್ದು, ಇದು ಒಟ್ಟು ಪ್ರಕರಣಗಳ ಶೇ. 21.30% ರಷ್ಟಿದೆ. ಸುಸ್ತಿ ಸಾಲಗಳ ಎಲ್ಲಾ ಪ್ರಕರಣಗಳ ಸಂಬಂಧ ಕಾನೂನಾತ್ಮಕ ಕ್ರಮವಿಡಲು ಸೂಚಿಸಿದೆ.<br>**ಸಮಜಾಯಿಷಿ:**<br>ಸುಸ್ತಿ ಸಾಲದ ವಸೂಲಾತಿಗೆ ಕೂಡಲೇ ಹಿಂಬಾಲಿಕೆ ಕ್ರಮವಹಿಸಿ ವಸೂಲಾತಿಗೆ ಕ್ರಮ ತೆಗೆದುಕೊಂಡಿದ್ದರಿಂದ, ಹಿಂದಿನ ಸಾಲುಗಳ 1124 ಪ್ರಕರಣಗಳಲ್ಲಿ ವರದಿ ಸಾಲಿನಾಂತ್ಯಕ್ಕೆ 277 ಪ್ರಕರಣಗಳು ಇರುತ್ತವೆ. ಅಂದರೆ, ವರದಿ ಸಾಲಿನಲ್ಲಿ 847 ಪ್ರಕರಣಗಳು ಚುಕ್ತವಾಗಿರುತ್ತದೆ. ಅದಾಗ್ಯೂ, ಪರಿಶೋಧಕರ ಸಲಹೆಯಂತೆ ಉಳಿದ ಪ್ರಕರಣಗಳಿಗೂ ಸಹ ಇನ್ನೂ ಹೆಚ್ಚಿನ ಕಾನೂನು ಕ್ರಮಕೈಗೊಂಡು ವಸೂಲಾತಿಗೆ ಕ್ರಮವಿಡಲಾಗುವುದು. | |
| 5 | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ? | ಯಾರೂ ಸುಸ್ತಿದಾರರಾಗಿರುವುದಿಲ್ಲ. |
| 6 | ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು | ಯಾವುದೇ ಆಸ್ತಿ ಖರೀದಿಸಿರುವುದಿಲ್ಲ. |
| 7 | **1) ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು)**<br>ಒಬ್ಬನೇ ಸಾಲಗಾರ ಒಂದಕ್ಕಿಂತ ಹೆಚ್ಚು ಸಾಲಗಳನ್ನು ಪಡೆದಿರುವ ಸಂದರ್ಭಗಳಲ್ಲಿ ಅನುತ್ಪಾದಕ ಆಸ್ತಿಯ ಗುರುತಿಸುವಿಕೆಯು ಸಿಸ್ಟಮ್‌ನಲ್ಲಿ (ಸಾಫ್ಟ್‌ವೇರ್) ತನ್ನಿಂತಾನೇ ಆಗುತ್ತಿಲ್ಲ. ಆದ್ದರಿಂದ | |

ಅನುತ್ಪಾದಕ ಆಸ್ತಿಯನ್ನು ಗುರುತಿಸದೇ ಇರುವ ಸಂಭವವಿರುತ್ತದೆ ಹಾಗೂ ಮಾನವ ಹಸ್ತಕ್ಷೇಪದಿಂದ ತಪ್ಪುಗಳೂ ಸಹ ಸಂಭವಿಸಬಹುದು.

ದಿ.31.03.2024ಕ್ಕೆ ಬ್ಯಾಂಕು ಹೊಂದಿರುವ ರೂ.18942.74 ಲಕ್ಷಗಳ ಸಾಲದ ಬಾಕಿಯಲ್ಲಿ ರೂ.3,340.58 ಲಕ್ಷಗಳ ಅನುತ್ಪಾದಕ ಆಸ್ತಿಯನ್ನು ತೋರಿಸಲಾಗಿದೆ. ಸದರಿ ಅನುತ್ಪಾದಕ ಆಸ್ತಿಯು ಒಟ್ಟು ಸಾಲದ ಬಾಕಿಗೆ ಶೇ.17.64ಗಳಾಗಿರುತ್ತದೆ. 31/03/2023ಕ್ಕೆ ಇದರ ಪ್ರಮಾಣ ಶೇ.34.17 ಆಗಿತ್ತು. ಹಿಂದಿನ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಶೇ.16.53ರಷ್ಟು ಕಡಿಮೆಯಾಗಿದೆ.

ಬ್ಯಾಂಕಿನಲ್ಲಿ ಅನುತ್ಪಾದಕ ಆಸ್ತಿಗಳಿಗಾಗಿ ಮಾಡಿರುವ ಅವಕಾಶ ಹಾಗೂ ಕರಡು ಸಾಲದ ನಿಧಿ ದಿ.31.03.2024ಕ್ಕೆ ರೂ.2850.00 ಲಕ್ಷಗಳಿದ್ದು, ಇದರಿಂದಾಗಿ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.3.05 ರಷ್ಟಿದೆ. 31/03/2023ಕ್ಕೆ ಇದರ ಪ್ರಮಾಣ ಶೇ.19.72ರಷ್ಟಿತ್ತು. ವರದಿಸಾಲಿನಲ್ಲಿ ಬ್ಯಾಂಕ್ ವಸೂಲಾತಿಗಾಗಿ ತೀವ್ರ ಕ್ರಮ ಕೈಗೊಂಡು ನಿವ್ವಳ ಅನುತ್ಪಾದಕ ಆಸ್ತಿಯನ್ನು ಕಡಿಮೆಗೊಳಿಸಿದೆ.

ಪ್ರಸಕ್ತ ಸಾಲಿಗೆ ಬ್ಯಾಂಕು ಅನುತ್ಪಾದಕ ಆಸ್ತಿಗಳ ಮೇಲೆ ಮಾಡಬೇಕಾಗಿದ್ದ ಅವಕಾಶ ರೂ.2,253.36 ಲಕ್ಷಗಳು, ಆದರೆ ಮಾಡಿರುವ ಅವಕಾಶ ರೂ.2,850.00 ಲಕ್ಷಗಳು ಅಂದರೆ ಅಗತ್ಯವಾದ ಅವಕಾಶಕ್ಕಿಂತಲು ರೂ.596.64 ಲಕ್ಷಗಳ ಹೆಚ್ಚುವರಿ ಅವಕಾಶವನ್ನು ಕಲ್ಪಿಸಲಾಗಿದೆ.

ಬ್ಯಾಂಕಿನ ಅನುತ್ಪಾದಕ ಆಸ್ತಿಯು ನಿಗದಿಗೊಳಿಸಿದ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದ ಕಾರಣ ಬ್ಯಾಂಕನ್ನು ಬ್ಯಾಂಕಿಗ್ ನಿಯಂತ್ರಣ ಕಾಯಿದೆ ಕಲಂ36(1)ರಂತೆ ಆರ್.ಬಿ.ಐ ಮೇಲುಸ್ತುವಾರಿ ನಿರ್ಬಂಧಗಳನ್ನು ವಿಧಿಸಿದ್ದು ಮುಂದುವರೆದಿದೆ, ಬ್ಯಾಂಕು ಸದರಿ ಮೇಲುಸ್ತುವಾರಿಯಿಂದ ಹೊರ ಬರಬೇಕಾದರೆ ನಿಗದಿತ ಮಿತಿಗೆ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಕಡಿಮೆಗೊಳಿಸುವಂತೆ ಸೂಚಿಸಿದೆ. ಇದನ್ನು ಆರ್.ಬಿ.ಐ.ನ ಪರಿವೀಕ್ಷಣಾ ವರದಿಯಲ್ಲಿ ತಿಳಿಸಲಾಗಿದೆ.

ಅದರಂತೆ ಬ್ಯಾಂಕ್ ವರದಿ ಸಾಲಿನಲ್ಲಿ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿ ಶೇ.3.05ರಷ್ಟಿರುತ್ತದೆ. ವರದಿ ಸಾಲಿನಲ್ಲಿ ಬ್ಯಾಂಕಿನ ನಿವ್ವಳ ಎನ್.ಪಿ.ಎ. (ಶೇ.3.05ರಷ್ಟು) ಭಾರತೀಯ ರಿಸರ್ವ್ ಬ್ಯಾಂಕಿನವರು ಮೇಲುಸ್ತುವಾರಿಯಿಂದ ಹೊರಗೆ ಬರಲು ನಿಗಧಿಪಡಿಸಿದ ಶೇ.6ರ ಮಿತಿಗಿಂತ ಕಡಿಮೆ ಇರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಪತ್ರ ಬರೆದು ಮೇಲುಸ್ತುವಾರಿಯಿಂದ ಹೊರಬರಲು ಕ್ರವಿಡುವಂತೆ ಸೂಚಿಸಲಾಗಿದೆ.

**ಸಮಜಾಯಿಷಿ:**
ಕಂಡಿಕೆ ಸಂಖ್ಯೆ 12(8) ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 50)

2) ದಿನಾಂಕ 31.3.2024 ಕ್ಕೆ ಇರುವ ಎಲ್ಲ ಸಾಲಗಳು ರಿಸರ್ವ್ ಬ್ಯಾಂಕಿನ (IRAC) ಸುತ್ತೋಲೆಯಂತೆ ವರ್ಗೀಕರಿಸಲಾಗಿದೆಯೇ ?

ವರ್ಗೀಕರಿಸಲಾಗಿದೆ.

3) ಈ ಮೇಲಿನಂತೆ ವರ್ಗೀಕರಿಸಲಾಗಿರುವ ಅನುತ್ಪಾದಕ ಆಸ್ತಿಗಳಿಗೆ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಪ್ರತಿಶತರಷ್ಟು ಕಲ್ಪಿಸಲಾಗಿದೆಯೇ?

ಕಲ್ಪಿಸಲಾಗಿದೆ.

4) ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಕಲ್ಪಿಸುವುದರಲ್ಲಿ ಏನಾದರು ಕೊರತೆ ಇದೇಯೇ ? ಇದ್ದಲ್ಲಿ ರಕ್ಕಮುಗಳನ್ನು ಕಡ್ಡಾಯವಾಗಿ ನಮೂದಿಸುವುದು.

ಅವಕಾಶದಲ್ಲಿ ಕೊರತೆಯಾಗಿರುವುದಿಲ್ಲ.

5) ಕೊರತೆ ಇರುವ ರಕ್ಕಮಿನ ಅವಕಾಶ ಕಲ್ಪಿಸಲು ಬ್ಯಾಂಕಿನ ಆಡಳಿತ ಮಂಡಳಿಯವರು ನಿರಾಕರಿಸಿದಲ್ಲಿ ಈ ಕುರಿತು ವರದಿ ಪುಟ (4) ರಲ್ಲಿ ಸೂಚಿಸಿದಂತೆ ಅರ್ಹತಾತ್ಮಕ ಅಭಿಪ್ರಾಯ ನೀಡಲಾಗಿದೆಯೇ?

ಅನ್ವಯಿಸುವುದಿಲ್ಲ.

6) ಕಡಿಮೆ ಅವಕಾಶ ಕಲ್ಪಿಸಿರುವುದರಿಂದ ಬ್ಯಾಂಕಿನ ಪ್ರಸಕ್ತ ಸಾಲಿನ ನಿವ್ವಳ ಲಾಭದ ಮೇಲೆ ಬೀರುವ ಪರಿಣಾಮ ಹಾಗೂ ಸದರಿ ನಿವ್ವಳ ಲಾಭ ಕ.ಸ. ಸಂಘಗಳ ನಿಯಮ (22) ರ ವ್ಯತಿರಿಕ್ತವಾಗಿದ್ದರಿಂದ ಪ್ರಮಾಣೀಕರಿಸದೇ ಈ ಕುರಿತು ವಿವರವಾಗಿ ವಿಮರ್ಷಿಸುವುದು.

ಅನ್ವಯಿಸುವುದಿಲ್ಲ.

8 ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು.

ಯಾವುದೆ ಸಾಲಗಳು ಸುಸ್ತಿ ಇರುವುದಿಲ್ಲ.

| | |
|---|---|
| 9 ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ | ದಿ.31.03.2024ಕ್ಕೆ ಆದ್ಯತಾ ವಲಯದ ಸಾಲದ ಬಾಕಿ ರೂ. 6,099.99 ಲಕ್ಷಗಳು ಇದ್ದು, ಒಟ್ಟು ಎ.ಎನ್.ಬಿ.ಸಿ.ಯ ಮೊತ್ತ ರೂ. 30,102.32 ಲಕ್ಷಗಳಿಗೆ ಶೇ. 20.26% ರಷ್ಟಾಗುತ್ತದೆ. |
| 10 ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾರ್ಥಿರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ. | ದಿನಾಂಕ 31.03.2024ಕ್ಕೆ ದುರ್ಬಲ ವರ್ಗದವರಿಂದ ಬರಬೇಕಾದ ಸಾಲದ ಬಾಕಿ ರೂ. 1466.37 ಲಕ್ಷಗಳು, ಬ್ಯಾಂಕಿನ ಎ.ಎನ್.ಬಿ.ಸಿ.ಯ ಮೊತ್ತಕ್ಕೆ ಶೇ.4.87% ರಷ್ಟಿದೆ. |
| 11 ಸಾಲಾರ್ಥಿರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ | ದಿನಾಂಕ 31.03.2024ಕ್ಕೆ ದುರ್ಬಲ ವರ್ಗದವರಿಂದ ಬಾಕಿ ಇರುವ ಸಾಲಗಳು ಆದ್ಯತಾ ವಲಯದಿಂದ ಬಾಕಿ ಇರುವ ಸಾಲಗಳ ಶೇ.24.04% ರಷ್ಟಿದೆ. |
| 12 ಮೈಕ್ರೋ ಎಂಟರ್‌ಪ್ರೈಸಸ್ ನೀಡಿದ ಸಾಲದ ಪ್ರಮಾಣ | ದಿನಾಂಕ 31.3.2024ಕ್ಕೆ ಮೈಕ್ರೋ ಎಂಟರ್‌ಪ್ರೈಸಸ್‌ರವರಿಂದ ರೂ. 2734.16 ಲಕ್ಷಗಳು ಬಾಕಿಯಿದ್ದು, ಒಟ್ಟು ಎ.ಎನ್.ಬಿ.ಸಿ.ಯ ಶೇ. 9.08 ರಷ್ಟಿದೆ. |

ಈ ಮೇಲ್ಕಂಡಂತೆ ಆದ್ಯತಾ ವಲಯ ದುರ್ಬಲ ವರ್ಗ ಹಾಗೂ ಮೈಕ್ರೋ ಎಂಟರ್ ಪ್ರೈಸಸ್ ರವರಿಗೆ ನೀಡಿರುವ ಸಾಲ, ಬ್ಯಾಂಕಿನ ಸರಾಸರಿ ಎ.ಎನ್.ಬಿ.ಸಿ. ಮೊಬಲಗಿಗೆ ಕ್ರಮವಾಗಿ ಶೇ.60 ಶೇ.11.50 ಮತ್ತು ಶೇ.7.50 ಇರಬೇಕು. ಬ್ಯಾಂಕ್ ಸದರಿ ಮಿತಿಯನ್ನು ತಲುಪದ ಕಾರಣ ಭಾರತೀಯ ರಿಸರ್ವ್ ಬ್ಯಾಂಕಿನ ದಿ.10.05.2019ರ ಸೂಚನೆಯಂತೆ ದಿ.23.07.2023 ಮತ್ತು 02.02.2024 ರಂದು ರೂ.125 ಕೋಟಿಗಳ ಆದ್ಯತಾ ವಲಯ ಪ್ರಮಾಣ ಪತ್ರಗಳನ್ನು ಆರ್.ಬಿ.ಐ.ನ ಕುಬೇರ ಪೋರ್ಟಲ್‌ನಿಂದ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಮುಖಾಂತರ ಖರೀದಿಸಿದ್ದು, ತದನಂತರ ಬ್ಯಾಂಕಿನ ಆದ್ಯತಾ ವಲಯ ದುರ್ಬಲ ವರ್ಗ ಹಾಗೂ ಮೈಕ್ರೋ ಎಂಟರ್‌ಪ್ರೈಸಸ್‌ನ ಸಾಲದ ಪ್ರಮಾಣ ದಿ.31.03.2024ಕ್ಕೆ ಕ್ರಮವಾಗಿ ಸರಾಸರಿ ಎ.ಎನ್.ಬಿ.ಸಿ.ಯ ಮೊತ್ತ ರೂ 24,297.94 ಲಕ್ಷಗಳಿಗೆ ಶೇ.77.89, ಶೇ.13.84, ಶೇ.12.00 ಗಳಷ್ಟಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿಗೊಳಿಸಿದ ಮಿತಿಯಲ್ಲಿರುತ್ತದೆ.

**<u>ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು</u>:**

[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನತೆ, ಉಪನಿಯಮಕ್ಕೆ ವಿರುದ್ಧವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ, ಬಡ್ಡಿ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು.

ಬ್ಯಾಂಕಿನಲ್ಲಿ 9 ಶಾಖೆಗಳಿದ್ದು, ಸದರಿ ಶಾಖೆಗಳ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಕಂಡುಬಂದ ನ್ಯೂನತಾಂಶಗಳು ಕೆಳಕಂಡಂತಿದೆ.

1) ಬ್ಯಾಂಕಿನ ನಿಯುವಮಾವಳಿ ಪ್ರಕಾರ, ಪ್ರತಿ ಮೂರು ವರ್ಷಕ್ಕೆ ಅಡವಮಾನ ಆಸ್ತಿಗಳ ಮರುವಮೌಲ್ಯಮಾಪನವಮಾಡಿಸತಕ್ಕದ್ದು. ಆದರೆ ಕೆಲವೂಂದು ಪ್ರಕರಣಗಳಲ್ಲಿ ಇಂತಹ ಮೌಲ್ಯಮಾಪನಮಾಡಿಸದೆ ಇರುವುದು ಕಂಡುಬಂದಿದೆ. ಆದ್ದರಿಂದ ಅನ್ವಯಿಸುವ ಪ್ರಕರಣಗಳಿಗೆ, ಪ್ರತಿ ಮೂರು ವರ್ಷಕ್ಕೆ ಆಸ್ತಿಗಳ ಮರುಮೌಲ್ಯಮಾಪನವನ್ನು ಮಾಡಿಸುವುದು ಅವಶ್ಯಕವಾಗಿರುತ್ತದೆ.

   **ಸಮಜಾಯಿಷಿ:**
   ಬ್ಯಾಂಕಿನಲ್ಲಿ ಸದಸ್ಯರಿಗೆ ನೀಡಿರುವ ಸಾಲದ ಪ್ರಕರಣಗಳಲ್ಲಿ, ಉತ್ತಮ ಆಸ್ತಿಗಳ ವರ್ಗೀಕರಣದಲ್ಲಿರುವ ಸಾಲದ ಪ್ರಕರಣಗಳಲ್ಲಿ ಪುನರ್ ಮೌಲ್ಯಮಾಪನ ಕೈಗೊಂಡಿರುವುದಿಲ್ಲ. ಅನುತ್ಪಾದಕ ಆಸ್ತಿಗಳ ಪ್ರಕರಣಗಳಲ್ಲಿ ಸ್ಥಿರಾಸ್ತಿಗಳ ಪುನರ್ ಮೌಲ್ಯಮಾಪನ ಮಾಡುವ ಪರಿಪಾಠವಿರುತ್ತದೆ.

2) ಸಾಲ ಮಂಜೂರಾದ ನಂತರ ಅಡಮಾನವಿಟ್ಟಿರುವ ಆಸ್ತಿಗಳನ್ನು ಕಾಲಕಾಲಕ್ಕೆ ಪರಿವೀಕ್ಷಿಸುವ ಪದ್ಧತಿ ಇರುವುದಿಲ್ಲ ಆದ್ದರಿಂದ ಕ್ರಮಬದ್ದವಾಗಿ ಪಾಲಿಸಲು ಸೂಚಿಸಿದೆ.

   **ಸಮಜಾಯಿಷಿ:**
   ಬ್ಯಾಂಕಿನಲ್ಲಿ ಸಾಲ ಪಡೆದ ಸದಸ್ಯರುಗಳ ಸ್ಥಿರಾಸ್ತಿಯನ್ನು ಅಡವಮಾನ ಮಾಡಿಕೊಂಡು, ಸದರಿಯವರುಗಳಿಂದ ಪ್ರತಿ ವರ್ಷವೂ EC ಹಾಗೂ ಆಸ್ತಿ ತೆರಿಗೆ ಪಾವತಿ ರಸೀತಿಯನ್ನು ಪಡೆದು ಪರಿಶೀಲಿಸಲಾಗುತ್ತಿದೆ. ಉಪ ನೋಂದಣಿ ಕಛೇರಿಯಲ್ಲಿನ ತಾಂತ್ರಿಕ ದೋಷದಿಂದ ಕೆಲವು ಪ್ರಕರಣಗಳಲ್ಲಿ EC ಪಡೆಯಲು ವಿಳಂಬವಾಗಿದೆ. ಅದಾಗ್ಯೂ, ಲೆಕ್ಕ ಪರಿಶೋಧಕರ ಸೂಚನೆಯನ್ನು ಕ್ರಮಬದ್ಧವಾಗಿ ಪಾಲಿಸಲಾಗುವುದು.

3) ಅಡಮಾನ ಸಾಲಗಳನ್ನು ನೀಡಿದಾಗ ಕಟ್ಟಡ ವಿಮೆಯನ್ನು ಬ್ಯಾಂಕ್ ನೀಡುವ ಸಾಲದ ಮೊತ್ತಕ್ಕೆ

ಮಾತ್ರ ಮಾಡಲಾಗುತ್ತಿದೆ. ಆದರೆ ಬ್ಯಾಂಕ್ ಅಡಮಾನ ಮಾಡಲಾದ ಕಟ್ಟಡಗಳ ಒಟ್ಟು ಮೌಲ್ಯದ ಮೇಲೆ ವಿಮೆಯನ್ನು ಮಾಡಿಸುವುದು ಅವಶ್ಯಕವಾಗಿದೆ.

**ಸಮಜಾಯಿಷಿ:**

ಲೆಕ್ಕ ಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ.

4) ಬ್ಯಾಂಕಿನಲ್ಲಿ ಕಾಲಕಾಲಕ್ಕೆ ಸಾಲಗಳ ಬಾಕಿಗಳ ಬಗ್ಗೆ ಸಾಲಗಾರರ ಧೃಡೀಕರಣ ಪಡೆಯುವ ಪದ್ಧತಿ ಇರುವುದಿಲ್ಲ.

**ಸಮಜಾಯಿಷಿ:**

ಕಂಡಿಕೆ ಸಂಖ್ಯೆ 11(3)(2) ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 48)

5) ಶಾಖೆಗಳಲ್ಲಿ ಸ್ಥಿರಾಸ್ತಿ ಆಸ್ತಿಯನ್ನು ಅಡಮಾನ ಮಾಡಿಕೊಂಡು ಸಾಲಗಳನ್ನು ನೀಡಲಾಗುತ್ತಿದೆ. ಸದರಿ ಸಾಲಗಳನ್ನು ಮಂಜೂರು ಮಾಡುವಾಗ ಮಾತ್ರ ಸದರಿ ಆಸ್ತಿಗಳ ಇಸಿ, ಖಾತಾ ದೃಡೀಕರಣ/ ಆಸ್ತಿ ಖಾತಾ ಪತ್ರ ಮತ್ತು ತೆರಿಗೆ ಪಾವತಿ ರಸೀದಿಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ. ಆದರೆ ಸದರಿ ಆಸ್ತಿಗಳ ಸಂಬಂಧ ಕೆಲವೊಂದು ಪ್ರಕರಣಗಳಲ್ಲಿ ಪ್ರತೀ ವರ್ಷವೂ ಇ.ಸಿ, ಖಾತಾ ದೃಡೀಕರಣ/ ಆಸ್ತಿ ಖಾತಾ ಪತ್ರ ಮತ್ತು ತೆರಿಗೆ ಪಾವತಿ ರಸೀದಿಯನ್ನು ಪಡೆಯುವ ಪದ್ದತಿ ಇರುವುದಿಲ್ಲ. ಬ್ಯಾಂಕಿನ ಆಂತರಿಕ ಹತೋಟಿ ದೃಷ್ಠಿಯಿಂದ ಕಾಲ ಕಾಲಕ್ಕೆ ಇವುಗಳನ್ನು ಪಡೆಯುವುದು ಅತ್ಯವಶಕವಾಗಿರುತ್ತದೆ.

**ಸಮಜಾಯಿಷಿ:**

ಕಂಡಿಕೆ ಸಂಖ್ಯೆ 25 (2) ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 85)

6) ಸಾಲಗಳನ್ನು ಮಂಜೂರು ಮಾಡುವಾಗ ಸಿಬಿಲ್ ವರದಿಯನ್ನು ಪಡೆಯಲಾಗುತ್ತಿದೆ ಆದರೆ ಅದೇ ಸಾಲಗಾರರಿಗೆ ಹೆಚ್ಚುವರಿ ಸಾಲವನ್ನು ವಿತರಿಸುವಾಗ ಸಿಬಿಲ್ ಪುನಃ ಪಡೆದು ಪರಿಶೀಲಿಸಲಾಗುತ್ತಿಲ್ಲ. ಎಲ್ಲಾ ರೀತಿಯ ಸಾಲಗಳನ್ನು ಮಂಜೂರು ಮಾಡುವಾಗ ಮತ್ತು ಹೆಚ್ಚುವರಿ ಸಾಲಗಳನ್ನು ಮಂಜೂರು ಮಾಡುವಾಗ ಸಿಬಿಲ್ ವರದಿಯನ್ನು ಪಡೆಯುವುದು ಅತ್ಯಗತ್ಯವಾಗಿದೆ.

**ಸಮಜಾಯಿಷಿ:**

ಲೆಕ್ಕ ಪರಿಶೋಧಕರ ಸಲಹೆಯನ್ನು ಗಮನಿಸಲಾಗಿದ್ದು, ಕ್ರಮವಿಡಲಾಗುವುದು.

7) ಬ್ಯಾಂಕಿನಿಂದ ನೀಡಲಾಗುವ ವ್ಯವಹಾರ ಸುಧಾರಣೆ ಸಾಲ (Business improvement loan), ಮೀರಳತೆ ಸಾಲ ಮತ್ತು ನಗದುದ್ದರಿ ಸಾಲಗಳಿಗೆ ಲೆಕ್ಕಪರಿಶೋಧಕರಿಂದ ಪ್ರಮಾಣಿತಗೊಂಡ ಆರ್ಥಿಕ ಹಣಕಾಸು ತಃಖ್ತೆಗಳನ್ನು ಕೆಲವೂಂದು ಪ್ರಕರಣಗಳಲ್ಲಿ ಪಡೆದಿರುವುದಿಲ್ಲ.

**ಸಮಜಾಯಿಷಿ:**

ಕಂಡಿಕೆ ಸಂಖ್ಯೆ 24(ಡಿ)(3) ರಲ್ಲಿ ವಿವರಣೆ ನೀಡಿದ್ದು, (ವರದಿ ಪುಟ ಸಂಖ್ಯೆ 74) ಮುಂದುವರೆದು ಲೆಕ್ಕ ಪರಿಶೋಧಕರ ಗಮನಿಕೆಯಂತೆ ಪಡೆಯದೇ ಇರುವ ಪ್ರಕರಣಗಳಲ್ಲಿ ಪಡೆಯಲು ಕ್ರಮವಿಡಲಾಗುವುದು.

8) ಬ್ಯಾಂಕಿನಲ್ಲಿ ಕೆಲವೂಂದು ಸಾಲ ಮಂಜೂರು ಮಾಡುವಾಗ ಪಡೆಯುವ ಸಿಬಿಲ್ ವರದಿಯಲ್ಲಿ ಸಿಬಿಲ್ ಅಂಕಗಳು 700 ಕ್ಕಿಂತ ಕಡಿಮೆ ಇರುತ್ತದೆ ಮತ್ತು ಸಿಬಿಲ್ ವರದಿಯಲ್ಲಿ ಸಾಲಗಾರರ ಅವಧಿಮೀರಿದ ಸಾಲವನ್ನು ಹೊಂದಿದ್ದರು ಸಾಲವನ್ನು ಮಂಜೂರು ಮಾಡಲಾಗುತ್ತಿದೆ.

**ಸಮಜಾಯಿಷಿ:**

ಲೆಕ್ಕ ಪರಿಶೋಧಕರು ಗಮನಿಸಿರುವ ಮೇಲ್ಕಂಡ ಅಂಕಗಳ ಸಾಲಗಳ ಎಲ್ಲಾ ಪ್ರಕರಣಗಳು ಉತ್ತಮ ಆಸ್ತಿಗಳ ವರ್ಗೀಕರಣದಲ್ಲಿರುತ್ತವೆ. ಸಾಲ ಮಂಜೂರು ಮಾಡುವಾಗ ಸಿಬಿಲ್ ವರದಿಯಲ್ಲಿ ದಾಖಲಾಗಿದ್ದ ಸುಸ್ಥಿಯನ್ನು ಚುಕ್ತಮಾಡಿಸಿ ಸಾಲ ವಿತರಣೆ ಮಾಡಲಾಗಿರುತ್ತದೆ.

9) ಆರ್‌ಬಿಐ ಸುತ್ತೋಲೆ UBD.BPD. (PCB). MC.NO.1 /13.05.000/2013-14 DTD.01.07.2013- Master Circular – Exposure Norms and Statutory/ Other Restrictions – UCBs ರನ್ವಯ ರೂ.10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ದ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆ ಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.

**ಸಮಜಾಯಿಷಿ:**

ಕಂಡಿಕೆ ಸಂಖ್ಯೆ 24(ಡ)(3) ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 74)

**26) ಬ್ಯಾಂಕಿನ ಸ್ಥಿರಾಸ್ತಿ-ಚರಾಸ್ತಿಗಳ ಪರಿಶೀಲನೆ**

| ಎ | ಸ್ಥಿರಾಸ್ತಿ | ವಿವರ | ವಿಸ್ತೀರ್ಣ | ಮೊತ್ತ ರೂ. |
|---|---|---|---|---|
| 1 | <u>ಬ್ಯಾಂಕು ಹೊಂದಿರುವ ಸ್ಥಿರಾಸ್ತಿಯ ವಿವರಗಳು</u> | | | |
| | ಅ) ನಂ.106. ಆರ್.ವಿ.ರಸ್ತೆ, ವಿ.ವಿ.ಪುರಂ ಬೆಂಗಳೂರು – 560 004 | ಕಟ್ಟಡ | 40*80 ಚ.ಅಡಿ | 95,51,393 |
| | ಆ) ನಂ.188. ಆರ್.ವಿ.ರಸ್ತೆ, ಮಾವಳ್ಳಿ, ಬೆಂಗಳೂರು – 560 004 | ಕಟ್ಟಡ | 2381 ಚ.ಅಡಿ | 1,43,89,507 |
| | ಒಟ್ಟು | | | 2,39,40,900 |

1) ಸ್ಥಿರಾಸ್ತಿಯಲ್ಲಿ 2 ನಿವೇಶನಗಳ ಮೂಲ ಬೆಲೆ ರೂ. 1,77,02,166/–

2) ದಿನಾಂಕ 01.04.2023ರಲ್ಲಿ ಕಟ್ಟಡಗಳ ಪುಸ್ತಕ ಬೆಲೆ ರೂ. 62,38,734/–

3) 2023–24 ರಲ್ಲಿ ಕಟ್ಟಡ ಖಾತೆಗೆ ಜಮಾ ಆಗಿದ್ದು –

4) 2023–24ಕ್ಕೆ ಶೇ.5%ರಂತೆ ಸವಕಳಿ <u>(–)ರೂ.3,11,940/–</u> <u>ರೂ.59,26,794/–</u>

**ದಿನಾಂಕ 31.03.2024ಕ್ಕೆ ಸ್ತಿರಾಸ್ತಿ ಬೆಲೆ ಒಟ್ಟು <u>ರೂ.2,36,28,960/–</u>**

| | |
|---|---|
| **1** ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಹಾಗೂ 'ಕ''ಡ' ಉತಾರೆ ಪರಿಶೀಲಿಸಿದ ಬಗ್ಗೆ ವಿಮರ್ಷೆ | ಕ್ರಮಬದ್ದವಾಗಿದೆ |
| **2** ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಬರೆದಿಡಲಾಗಿದೆ |
| **3** ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು |
| **4** ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ವಿಮೆ ಮಾಡಿಸಿದೆ. ಚಾಲ್ತಿಯಲ್ಲಿದೆ |
| **5** ಸ್ಥಿರಾಸ್ತಿಗಳ ಮೇಲೆ ನಿಬಂದಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ನಿಬಂಧಕರ ಸುತ್ತೋಲೆ ಅನ್ವಯ ಸವಕಳಿ ತೆಗೆಯಲಾಗಿದೆ. |
| **6** ಗೋಡಾನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ | ಗೋಡಾನುಗಳಿರುವುದಿಲ್ಲ |
| **7** ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿ ಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ? | ಬಾಡಿಗೆಗೆ ಯಾವುದನ್ನು ನೀಡಿರುವುದಿಲ್ಲ |
| **8** ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು. | ಯಾವುದೇ ಕಟ್ಟಡ ನಿರ್ಮಾಣ ಆಗಿಲ್ಲ. |
| **9** ವರದಿ ಸಾಲಿನಲ್ಲಿ ವಿಲೇಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಷೆ. | ಸ್ಥಿರಾಸ್ತಿಗಳನ್ನು ವಿಲೇವಾರಿ ಮಾಡಿಲ್ಲ |
| **10** ಸ್ಥಿರಾಸ್ತಿಯ ತೆರಿಗೆಯನ್ನು ತಹಲ್‌ವರೆಗೂ ಪಾವತಿಸಲಾಗಿದೆಯೇ? | ಪಾವತಿಸಿದೆ. |

| | |
|---|---|
| ಬಿ ಚರಾಸ್ತಿ | |
| 1 ಸಂಘವು ಹೊಂದಿರುವ ಚರಾಸ್ತಿ ವಿವರಗಳು | ದಿನಾಂಕ 31.03.2024ಕ್ಕೆ ಬ್ಯಾಂಕಿನಲ್ಲಿ ಒಟ್ಟು ಚರಾಸ್ತಿಗಳ ವಿವರ. (ಸವಕಳಿ ತೆಗೆದ ನಂತರ)<br>(ರೂ.ಗಳಲ್ಲಿ)<br>1) ಪೀಠೋಪಕರಣಗಳು – 1,08,23,330–00<br>2) ಗಣಕಯಂತ್ರಗಳು – 3,55,123–00<br>ಒಟ್ಟು – 1,11,78,453–00 |
| | ಪೀಠೋಪಕರಣಗಳ ಮೌಲ್ಯದಲ್ಲಿ ವಿದ್ಯುತ್ ಉಪಕರಣಗಳ ಮೌಲ್ಯ ರೂ. 13,32,446 ಗಳು ಇರುತ್ತದೆ. |
| 2 ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ |
| 3 ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು |
| 4 ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ವಿಮೆ ಮಾಡಿಸಿದೆ. ದಿನಾಂಕ 13.02.2025 ರವರೆಗೆ ಚಾಲ್ತಿಯಲ್ಲಿರುತ್ತದೆ. |
| 5 ಚರಾಸ್ತಿಗಳ ಮೇಲೆ ನಿಬಂದಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ಬ್ಯಾಂಕಿನ ಕಟ್ಟಡಗಳು, ಪೀಠೋಪಕರಣಗಳು, ಹಾಗೂ ವಿದ್ಯುತ್ ಉಪಕರಣಗಳ ಮೇಲೆ ನಿಭಂಧಕರ ಸುತ್ತೋಲೆ ಅನ್ವಯ ಹಾಗೂ ಗಣಕಯಂತ್ರಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ನಿಗಧಿತ ದರದಲ್ಲಿ ಸವಕಳಿ ತೆಗೆಯಲಾಗಿದೆ. |
| ವರದಿ ಸಾಲಿನಲ್ಲಿ ವಿಲೇಮಾಡಿರುವ ಚರಾಸ್ತಿಗಳ ಕುರಿತು ವಿಮರ್ಷೆ | ಬ್ಯಾಂಕ್ ವರದಿಸಾಲಿನಲ್ಲಿ ಕಾಚರಕನಹಳ್ಳಿಯ ಶಾಖೆಯ ಹಳೆ ಕಟ್ಟಡದಿಂದ ಹೊಸ ಶಾಖೆ ಕಟ್ಟಡಕ್ಕೆ ಸ್ಥಳಾಂತರಿಸುವ ಸಂದರ್ಭದಲ್ಲಿ ಹಳೆಯ ಶಾಖಾ ಆವರಣದಲ್ಲಿ ಸ್ಥಿರ ಪೀಠೋಪಕರಣಗಳನ್ನು ಬಿಟ್ಟು, ಉಳಿದವುಗಳನ್ನು ಹೊಸ ಶಾಖೆಗೆ ಸ್ಥಳಾಂತರಿಸಿ ಅಳವಡಿಸಿ ಕೊಳ್ಳಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಹಳೆ ಶಾಖಾ ಆವರಣದಲ್ಲಿ ಉಳಿದುಕೊಂಡ ಸ್ಥಿರ ಪೀಠೋಪಕರಣ ಪುಸ್ತಕ ಮೌಲ್ಯ ರೂ.2,38,504 ಗಳನ್ನು ದಿನಾಂಕ 22.03.2024ರಂದು ಆಡಳಿತ |

| | |
|---|---|
| | ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮತಿ ಪಡೆದು ಲಾಭ ನಷ್ಟ ತಃಖ್ತೆಯಲ್ಲಿ ನಷ್ಟಕ್ಕೆ ಒಳಪಡಿಸಿ ಚುಕ್ತಗೊಳಿಸಲಾಗಿದೆ. |
| ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಷೆ | ಯಾವುದೂ ಇಲ್ಲ |

6 ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಷೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ?

ವರದಿ ಸಾಲಿನ ಅಂತ್ಯಕ್ಕೆ ಬ್ಯಾಂಕ್ ತನ್ನ ಸ್ವಂತಕ್ಕೆ ಯಾವುದೇ ವಾಹನವನ್ನು ಹೊಂದಿರುವುದಿಲ್ಲ.

| | |
|---|---|
| 7 ವರದಿ ಸಾಲಿನಲ್ಲಿ ವಿಲೇವಾರಿ ಮಾಡಿರುವ ವಾಹನದ ಕುರಿತು ವಿಮರ್ಷೆ. | ವರದಿ ಸಾಲಿನಲ್ಲಿ ಬ್ಯಾಂಕಿನ ಹಳೆಯ ವಾಹನ ಹೊಂಡ ಸಿಟಿ ಸಂಖ್ಯೆ ಕೆ.ಎ. 05 ಎಂ.ವೈ. 7823 ಯನ್ನು ದಿನಾಂಕ 22.03.2024ರಂದು ಬಹಿರಂಗ ಹರಾಜು ನೆಡೆಸಲಾಗಿದ್ದು. ಮಾರಾಟದ ಬಹಿರಂಗ ಹರಾಜನ್ನು ಸಹಕಾರ ಸಂಘಗಳ ನಿಭಂದಕರ ಪತ್ರ ಸಂಖ್ಯೆ ಯುಬಿಸಿ–1/ಬೆಂ.ಪ್ರಾ/368/2023–24ಯಲ್ಲಿನ ನಿಬಂದನೆಗೆ ಒಳಪಟ್ಟು ನಡೆಸಲಾಗಿದ್ದು, ಸದರಿಯವರ ವರದಿಯನ್ನು ಪರಿಶೀಲಿಸಲಾಗಿದ್ದು ಮಾರಾಟ ಪ್ರಕ್ರಿಯೆಯು ಕ್ರಮಬದ್ದವಾಗಿರುತ್ತದೆ. ಮಾರಾಟದ ದಿನಾಂಕಕ್ಕೆ ಸದರಿ ವಾಹನದ ಪುಸ್ತಕ ಮೌಲ್ಯ ರೂ.3,12,850/– ಗಳಷ್ಟು ಇದ್ದು, ಸದರಿ ವಾಹನವನ್ನು ರೂ.5,39,000/– ಗಳ ಮೊತ್ತಕ್ಕೆ ಮಾರಾಟ ಮಾಡಲಾಗಿದೆ. ಸದರಿ ವ್ಯವಹಾರದ ಪ್ರಕ್ರಿಯೆಯನ್ನು ಲೆಕ್ಕಪುಸ್ತಕದಲ್ಲಿ ಕ್ರಮಬದ್ದವಾಗಿ ಅಳವಡಿಸಿಕೊಂಡು ವಾಹನದ ಮೌಲ್ಯವನ್ನು ಚುಕ್ತಗೂಳಿಸಿಕೂಂಡಿದೆ. |

**8 ಬ್ಯಾಂಕೇತರ ಆಸ್ತಿಗಳು: (Non Banking Assets)**

| ಜಮೀನು ಆಸ್ತಿಯ ವಿವರ | ವಿ.ಪಿ.ಸಿ./ಸಿ.ಟಿ.ಎಸ್. ನಂ. | ಖರೀದಿಯ ಮೌಲ್ಯ |
|---|---|---|
| ಯಾವುದೂ ಇರುವುದಿಲ್ಲ | | |

**27) ಅ. ಇತರೆ ಬರತಕ್ಕವುಗಳು : ವಿವರ ಈ ಕೆಳಗಿನಂತಿದೆ.**

| ಕ್ರ | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| 1 | ಶಾಖಾ ಕ್ಲಿಯರಿಂಗ್ ಖಾತೆ | 81,23,770.00 |
| 2 | ಸಾಲವಸೂಲಾತಿ ವೆಚ್ಚ ಬರಬೇಕಾದುದು | 64,23,288.00 |

| | | | |
|---|---|---|---|
| | 3 | ಬಾಡಿಗೆ ಮುಂಗಡ | 39,58,520.00 |
| | 4 | ಸಾಲಗಾರರಿಂದ ಬರಬೇಕಾದ ವಿಮಾ ಮೊಬಲಗು | 71,212.00 |
| | 5 | ಇ-ಸ್ಟಾಂಪಿಂಗ್ ಭದ್ರತಾ ಠೇವಣಿ | 1,50,000.00 |
| | 6 | ಆದಾಯ ತೆರಿಗೆ ಮುಂಗಡ | 2,59,80,916.00 |
| | 7 | ವಿಮೆ, ಎ.ಎಂ.ಸಿ. ಹಾಗೂ ಇತರೆ | 1,81,488.00 |
| | 8 | ಟೆಲಿಫೋನ್ ಡೆಪಾಸಿಟ್ | 1,11,893.00 |
| | 9 | ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಂಗಳೂರು | 85,180.00 |
| | 10 | ಕೆ.ಇ.ಬಿ. ಡೆಪಾಸಿಟ್ | 1,93,707.00 |
| | 11 | ಮುದ್ರಣ ಸಾಮಗ್ರಿ ಸಾದಿಲ್ವಾರು ದಾಸ್ತಾನು | 19,68,685.71 |
| | 12 | ಇ-ಸ್ಟಾಂಪಿಂಗ್ ವಿತರಣಾ ಮುಂಗಡ | 1,47,401.00 |
| | 13 | ಜಿ.ಎಸ್. ಟಿ ಬರಬೇಕ್ಕಾದ್ದು | 19,52,041.00 |
| | 14 | ಮುಂದೂಡಿದ ತೆರಿಗೆ ಆಸ್ತಿ (DTA) | 57,34,200.00 |
| | | **ಒಟ್ಟು** | **5,50,82,301.71** |

**1. ಶಾಖಾ ಕ್ಲಿಯರಿಂಗ್ ಖಾತೆ – ರೂ.81,23,770.00**

ಸದರಿ ಲೆಕ್ಕದಲ್ಲಿ ರೂ. 81,23,770–00ಗಳಿದ್ದು, ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಎರಡೂ ಕಡೆ ತೋರಿಸಲಾಗಿದೆ. ಸದರಿ ಮೊಬಲಗು ಏಪ್ರಿಲ್ ಮಾಹೆಯಲ್ಲಿ ಚುಕ್ತವಾಗಿರುತ್ತದೆ.

**2. ಸಾಲ ವಸೂಲಾತಿ ವೆಚ್ಚ ಬರಬೇಕಾದುದು – ರೂ.64,23,288.00**

ದಿ.31.03.2024ಕ್ಕೆ ಬ್ಯಾಂಕಿನಿಂದ ಸಾಲ ವಸೂಲಾತಿ ಸಂಬಂಧ ಆಗುವ ವೆಚ್ಚಗಳ ಮೊತ್ತ ರೂ. 64,23,288.00 ಗಳಿದ್ದು, ಸದರಿ ಮೊಬಲಗನ್ನು ಸಾಲಗಾರರಿಂದ ವಸೂಲಿ ಮಾಡಿದ ನಂತರ ಬ್ಯಾಂಕಿನ ಲಾಭಕ್ಕೆ ತೆಗೆದುಕೊಳ್ಳುವುದು.

**3. ಬಾಡಿಗೆ ಮುಂಗಡ – ರೂ. 39,58,520.00**

ಬ್ಯಾಂಕು ಕೇಂದ್ರ ಕಛೇರಿಗೆ ಹೊಂದಿಕೊಂಡ ಶಾಖೆಯಲ್ಲದೆ 8 ಶಾಖೆಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಕಟ್ಟಡಗಳಿಗೆ ನೀಡಿರುವ ಬಾಡಿಗೆ ಮುಂಗಡ ರೂ.39,58,520/–ಗಳು ಮುಂದುವರೆದಿದೆ. ಕಟ್ಟಡ ಮಾಲೀಕರೊಂದಿಗೆ ದೀರ್ಘಾವದಿ ಕರಾರು ಮಾಡಿಕೊಳ್ಳಲಾಗಿದೆ.

4. **ಸಾಲಗಾರರಿಂದ ಬರಬೇಕಾದ ವಿಮಾ ಮೊಬಲಗು – ರೂ. 71,212.00**

ಕುಳುವಾರು ಪಟ್ಟಿಯ ಅನ್ವಯ ಐ.ಪಿ. ಸಾಲಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ ದಿ.31.03.2024ಕ್ಕೆ ರೂ.71,212/–ಗಳ ವಿಮೆಯನ್ನು ಸಾಲಗಾರರು ಭರಿಸಬೇಕಾಗಿದ್ದು, ಅವರ ಪರವಾಗಿ ಬ್ಯಾಂಕ್ ಭರಿಸಿರುತ್ತದೆ. ಸಾಲಗಾರರಿಂದ ಮೇಲಿನಂತೆ ವಸೂಲಿಯಾಗಬೇಕಾದ ವಿಮಾ ಮೊಬಲಗನ್ನು ಸಾಲದ ಬಾಕಿಯೆಂದು ಪರಿಗಣಿಸಿ ಸದರಿ ಸಾಲಗಾರರ ಖಾತೆಗೆ ವರ್ಗಾಯಿಸಿ, ಸಾಲದ ವಸೂಲಾತಿ ರೀತಿಯಲ್ಲಿ ವಸೂಲಿ ಮಾಡಲು ಸೂಚಿಸಿದೆ.

5. **ಇ–ಸ್ಟಾಂಪಿಂಗ್ ಭದ್ರತಾ ಠೇವಣಿ– ರೂ.1,50,000/–**

ಹಿಂದಿನ ಸಾಲಿನಂತೆ ಮುಂದುವರೆದಿದ್ದು, ವರ್ಷಾಂತ್ಯಕ್ಕೆ ದೃಢೀಕರಿಸಿಕೊಂಡಿರುವುದಿಲ್ಲ.

**ಸಮಜಾಯಿಷಿ:**

ಸಂಬಂಧಪಟ್ಟ ಇಲಾಖೆಗೆ ಪತ್ರ ಮುಖೇನ ವರ್ಷಾಂತ್ಯದ ಅಂತ್ಯಕ್ಕೆ ಇರುವ ಮೊಬಲಗಿಗೆ ದೃಢೀಕರಣ ಪತ್ರ ನೀಡುವಂತೆ ಕೋರಿದ್ದರೂ ಸಹ ಸ್ಪಂದಿಸಿರುವುದಿಲ್ಲ. ಅದಾಗ್ಯೂ ಕ್ರಮವಿಟ್ಟು ದೃಢೀಕರಿಸಿಕೊಳ್ಳಲಾಗುವುದು.

6. **ಆದಾಯ ತೆರಿಗೆ ಮುಂಗಡ– ರೂ. 2,59,80,916/–**

ಸದರಿ ಮುಂಗಡವನ್ನು 2018–19ರಿಂದ ಪಾವತಿಸಿರುವುದು ಮುಂದುವರೆದಿರುತ್ತದೆ.

7. **ವಿಮೆ, ಎ.ಎಂ.ಸಿ. ಹಾಗೂ ಇತರೆ ಸಂಬಂಧ ಮುಂಗಡ ಪಾವತಿ – ರೂ. 1,81,488.00**

ದಿ. 31.03.2024ಕ್ಕೆ ಮುಂದುವರೆದಿದೆ.

8. ಸೇವಾ ಅರೆ ಸರ್ಕಾರಿ ಸಂಸ್ಥೆಗಳಾದ ದೂರವಾಣಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುತ್ ಮಂಡಳಿ ಇವುಗಳಲ್ಲಿ ತೊಡಗಿಸಿರುವ ಸೇವೆಗೆ ಸಂಬಂಧಪಟ್ಟ ಭದ್ರತಾ ಠೇವಣಿಗಳು ಹಿಂದಿನಂತೆ ಮುಂದುವರೆದಿದೆ.

9. ಮುದ್ರಣ ಮತ್ತು ಲೇಖನ ಸಾಮಾಗ್ರಿ ದಾಸ್ತಾನು, ಇವುಗಳಿಗೆ ಸಂಬಂಧಿಸಿದಂತೆ ದಿ.31.03.2024ಕ್ಕೆ ಕುಳುವಾರು ಪಟ್ಟಿ ಲಭ್ಯವಿದ್ದು, ತಾಳೆ ಇರುತ್ತದೆ. ದಿ.31.03.2024ಕ್ಕೆ ಮುದ್ರಣ ಮತ್ತು ಲೇಖನ ಸಾಮಗ್ರಿ ದಾಸ್ತಾನನ್ನು ಪರಿಶೀಲಿಸಿ ದೃಢೀಕರಿಸಿರುವುದಿಲ್ಲ.

**ಸಮಜಾಯಿಷಿ:**

ಬ್ಯಾಂಕಿನ ಆಡಳಿತ ಕಛೇರಿಯ ವ್ಯವಸ್ಥಾಪಕರು ಪ್ರತಿ ತ್ರೈ ಮಾಸಿಕಕ್ಕೊಮ್ಮೆ ಶಾಖಾವಾರು ಮುದ್ರಣ ಹಾಗೂ ಲೇಖನ ಸಾಮಗ್ರಿಗಳನ್ನು ಪರಿಶೀಲಿಸಿದ ವರದಿಯನ್ನು ಆಡಳಿತ ಮಂಡಲಿ ಸಭೆಗೆ ಮಂಡಿಸಿ, ಅಂಗೀಕರಿಸಲಾಗುತ್ತಿದೆ.

10. **ಇ–ಸ್ಟಾಂಪಿಂಗ್ ಲೆಕ್ಕ**

ದಿ.31.03.2024ಕ್ಕೆ ರೂ. 1,47,401.00 ಗಳ ಬೆಲೆಯ ಇ–ಸ್ಟಾಂಪಿಂಗ್ ಇರುವುದಾಗಿ ತಿಳಿಸಲಾಗಿದೆ.

**11. ಜಿ.ಎಸ್.ಟಿ. ಬರಬೇಕಾದ್ದು ರೂ. 19,52,041.00**

ದಿ.31.03.2024ಕ್ಕೆ ರೂ 19,52,041.00 ಮುಂದುವರೆದಿದೆ. ಸರಕು ಮತ್ತು ಸೇವಾ ತೆರಿಗೆ ಪೋರ್‌ಟಲ್ ಮತ್ತು ಪುಸ್ತಕದ ಮೊತ್ತಕ್ಕೆ ಸಮನ್ವಯಗೊಳಿಸಲು ಸೂಚಿಸಿದೆ.

**12. ಮುಂಡೂಡಿದ ತೆರಿಗೆ ಆಸ್ತಿ (DTA) ರೂ. 57,34,200.00**

ವರದಿ ಸಾಲಿನಲ್ಲಿ ರೂ. 57,34,200.00 ಗಳು ಸದರಿ ಬಾಬ್ತಿನಲ್ಲಿ ಮುಂದುವರೆದಿರುತ್ತದೆ.

| | |
|---|---|
| ಎ ಚೆಕ್ಕು, ಬಿಲ್ಲು, ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವರೋ ವಿವರಿಸಿ. | ವರದಿ ಸಾಲಿನಲ್ಲಿ ಬಿಲ್ಲು ಡಿಸ್ಕೌಂಟ್ ವ್ಯವಹಾರ ಮಾಡಲಾಗಿದ್ದು, ವರ್ಷಾಂತ್ಯಕ್ಕೆ ಬಾಕಿ ಇರುವುದಿಲ್ಲ. |
| ಬಿ ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಪಾವತಿಸಿದ ಬಡ್ಡಿ ಮತ್ತು ಗಳಿಸಿದ ಬಡ್ಡಿ ವಿವರಗಳು ಕೆಳಕಂಡಂತಿವೆ<br>1. ಸರಾಸರಿ ಠೇವಣಿಗಳು ರೂ. 35,007.20 ಲಕ್ಷ<br>ಬಡ್ಡಿ ಪಾವತಿ ರೂ. 2,082.87 ಲಕ್ಷ<br>ಠೇವಣಿಗಳ ವೆಚ್ಚದ ಪ್ರಮಾಣ ಶೇ. 5.95<br>2. ಸಾಲಗಳ ಮತ್ತು ಹೂಡಿಕೆಗಳ ಸರಾಸರಿ ಮೊಬಲಗು ರೂ. 41,665.82 ಲಕ್ಷ<br>ಬಡ್ಡಿ ಗಳಿಕೆ ರೂ. 4,182.59 ಲಕ್ಷ<br>ಗಳಿಕೆಯ ಪ್ರಮಾಣ ಶೇ. 10.04<br>ನಿವ್ವಳ ಗಳಿಕೆ ಶೇ. 5.95 (–) 10.04=ಶೇ.4.09 |
| ಸಿ ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ? | ಪರಿಶೀಲಿಸಿದ್ದು ತಾಳೆ ಇರುತ್ತದೆ. |
| ಡಿ ಲಾಕರ್‌ಗಳ ಬಗ್ಗೆ | ವಿವರ ಈ ಕೆಳಗಿನಂತಿದೆ |

ದಿ.31.03.2024ಕ್ಕೆ ಬ್ಯಾಂಕಿನ ಎಲ್ಲಾ ಶಾಖೆಗಳು ಸೇರಿ ಒಟ್ಟು 1041 ಲಾಕರ್‌ಗಳಿದ್ದು, ಸದರಿ ಲಾಕರ್‌ಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ | ಶಾಖೆ | ಒಟ್ಟು ಲಾಕರ್‌ಗಳು | ಒಟ್ಟು ಭರ್ತಿಯಾಗಿರುವ ಲಾಕರ್‌ಗಳು | ಬಾಡಿಗೆ ಬಾಕಿಯಿರುವ ಲಾಕರ್ ಸಂಖ್ಯೆ | ಬಾಡಿಗೆ ಬಾಕಿ |
|---|---|---|---|---|---|
| 1 | ವಿ.ವಿ. ಪುರಂ | 232 | 173 | 3 | 31,500/– |
| 2 | ಅವಿನ್ಯೂ ರಸ್ತೆ | 60 | 13 | – | – |
| 3 | ವಿಜಯನಗರ | 257 | 194 | 6 | 26,000/– |
| 4 | ಸುಬ್ರಮಣ್ಯನಗರ | 117 | 101 | – | – |
| 5 | ಪದ್ಮನಾಭನಗರ | 82 | 54 | 1 | 21,900/– |
| 6 | ಕಾಚರಕನಹಳ್ಳಿ | 84 | 26 | 2 | 49,000/– |
| 7 | ಯಶವಂತಪುರ | 63 | 7 | 1 | 18,800/– |
| 8 | ನಾಗರಭಾವಿ | 83 | 42 | – | – |
| 9 | ಕೋಣನಕುಂಟೆ | 63 | 46 | – | – |
| | | ಬ್ಯಾಂಕು ತನ್ನೆಲ್ಲಾ ಎಸ್.ಎಲ್.ಆರ್. ಹೂಡಿಕೆಗಳ ಖರೀದಿ ಮತ್ತು ಮಾರಾಟ ವ್ಯವಹಾರವನ್ನು ಎಸ್.ಬಿ.ಐ ನ ಡಿ.ಎಫ್.ಹೆಚ್.ಐ.ಲಿ., ಸಂಸ್ಥೆಯಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ನಡೆಸಲಾಗುತ್ತದೆ. ಪ್ರಧಾನವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ಹೂಡಿಕೆಗಳ ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ. |
| | iii) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ | ಆಡಳಿತ ಮಂಡಳಿಯ ಉಸ್ತುವಾರಿಯಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗು ಅವರ ಸಿಬ್ಬಂದಿ ಹೂಡಿಕೆ ವ್ಯವಹಾರದ ಪರಿಶೀಲನೆ ಮತ್ತು ಲೆಕ್ಕಪತ್ರಗಳೊಂದಿಗೆ ಸಮನ್ವಯಗೊಳಿಸುವ ಬಗ್ಗೆ ಕ್ರಮವಿಟ್ಟಿರುತ್ತಾರೆ. |
| | iv) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ | ಕಾಲಕಾಲಕ್ಕೆ FBIL/FIMMDAಯಿಂದ ಪ್ರಕಟಗೊಳ್ಳುವ ಹೂಡಿಕೆಗಳ ಮೌಲ್ಯವನ್ನು ಆಧರಿಸಿ ಹೂಡಿಕೆಗಳ ಮೌಲ್ಯಮಾಪನವನ್ನು ಮಾಡಲಾಗುತ್ತಿದೆ. |
| | v) ಆರ್‌ಬಿಐ ಮಾರ್ಗಸೂಚಿಗಳನ್ವಯ Investment portfolio ರಚಿಸಿರುವ ಬಗ್ಗೆ ಮತ್ತು ಹೂಡಿಕೆಗಳ ಏರಿಳಿತಗಳ ಮೇಲೆ ಸವಕಳಿ ಅವಕಾಶ ಕಲ್ಪಿಸಿರುವ ಬಗ್ಗೆ | ಬ್ಯಾಂಕಿನ ಆಡಳಿತ ಮಂಡಳಿ ನಿರ್ಣಯಿಸಿದಂತೆ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಮೇಲುಸ್ತುವಾರಿಯಲ್ಲಿ ಬ್ಯಾಂಕಿನ ಹೂಡಿಕೆ ಸಮಿತಿಯನ್ನು ಏರ್ಪಾಡು ಮಾಡಿದ್ದು, ಸದರಿ ಸಮಿತಿ ಬ್ಯಾಂಕಿನ ಆಡಳಿತ ಮಂಡಳಿ ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕಿನಲ್ಲಿ ಹೂಡಿಕೆಗಳಿಗೆ ಸಂಬಂಧಿಸಿದಂತೆ, ಹೂಡಿಕೆಗಳ ಸವಕಳಿ ನಿಧಿ ರೂ. 441.24 ಲಕ್ಷ, ಏರಿಳಿತ ನಿಧಿ ರೂ. 604.40 ಲಕ್ಷಗಳನ್ನು ಕ್ರೋಢೀಕರಿಸಿದೆ. |
| | vi) Investment portfolio ದಲ್ಲಿ ಉಲ್ಲೇಖಿಸದೇ ಇರುವ ಹೂಡಿಕೆಗಳು ಮತ್ತು ಅವುಗಳ ನಗದೀಕರಣ ಬಗ್ಗೆ. | ಯಾವುದೂ ಇರುವುದಿಲ್ಲ. |
| | vii) SGL/BRs ಪದ್ಧತಿ, ಸಾಲಾಂತ್ಯಕ್ಕೆ ಇರುವ SGL/BRs ಮೇಲಿನ | ಬ್ಯಾಂಕು ಎಸ್.ಎಲ್.ಆರ್. ಹೂಡಿಕೆಗಳನ್ನು ಎಸ್.ಬಿ.ಐ– ಡಿ.ಎಫ್.ಹೆಚ್.ಐ. ಲಿ., ಮುಂಬೈ |

| | | |
|---|---|---|
| | ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ. | ಇಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ವ್ಯವಹರಿಸಲಾಗುತ್ತಿದೆ. |
| | viii) ಹೂಡಿಕೆಗಳ ನಿರ್ವಹಣೆ ಬಗ್ಗೆ ಬ್ಯಾಂಕಿನವರು ನಿಯತಕಾಲಿಕವಾಗಿ ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ. | ಆಂತರಿಕ ಲೆಕ್ಕಪರಿಶೋಧನೆ ಹಾಗು ಪರಿವೀಕ್ಷಣೆ ಮಾಡಲಾಗುತ್ತಿದೆ. |
| | ix) ಹೂಡಿಕೆಗಳ ಮೇಲಿನ ಆದಾಯವನ್ನು ಲೆಕ್ಕಪತ್ರಗಳಲ್ಲಿ ದಾಖಲಿಸುವ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮಗಳು | ಹೂಡಿಕೆಗಳ ಮೇಲೆ ಬಂದ ಆದಾಯವನ್ನು, ಲಾಭ ನಷ್ಟ ಖಾತೆಗೆ ವರ್ಗಾಯಿಸಲಾಗುತ್ತಿದೆ. |
| | x) ಹೂಡಿಕೆಗಳ ಮೇಲೆ ಪ್ರಾಪ್ತವಾದ ಆದರೆ ಸ್ವೀಕೃತಿಯಾಗದೆ ಇರುವ ಆದಾಯವನ್ನು ಪರಿಗಣಿಸುವ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮ. | ಸರ್ಕಾರಿ ಪತ್ರಗಳ ಮೇಲಿನ ಸ್ವೀಕೃತಿಯಾಗದ ಬಡ್ಡಿಯನ್ನು ಮಾತ್ರ, ಬ್ಯಾಂಕಿನ ಲಾಭದ ಖಾತೆಗೆ ವರ್ಗಾಯಿಸಿ ಬರಬೇಕಾದ ಬಡ್ಡಿ ಎಂಬ ಲೆಕ್ಕಶೀರ್ಷಿಕೆಯಲ್ಲಿ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಲಾಗುತ್ತಿದೆ. |
| | xi) ಅವಧಿ ಪೂರ್ಣ ಹೂಡಿಕೆಗಳು ಮತ್ತು ಅವುಗಳನ್ನು ಸಕಾಲದಲ್ಲಿ ನಗದೀಕರಿಸುವ ಬಗ್ಗೆ. | ಸಕಾಲದಲ್ಲಿ ನವೀಕರಿಸಲಾಗುತ್ತಿದೆ. |
| | xii) ಹೂಡಿಕೆಗಳ ಮೇಲೆ ಸರಾಸರಿ ಆದಾಯ | ಶೇ.6.99% |
| | xiii) REPOಗಳ ಮೇಲೆ ಅನುಸರಿಸುತ್ತಿರುವ ನಿಯಮಗಳು | ಈ ಬ್ಯಾಂಕಿಗೆ ಅನ್ವಯಿಸುವುದಿಲ್ಲ. |
| **26** | **ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ :**<br>I. ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.<br>ಬ್ಯಾಂಕಿನ ಉಪನಿಯಮ 105ರಲ್ಲಿ ಬ್ಯಾಂಕು ಗಳಿಸಿದ ಲಾಭವನ್ನು ವಿಭಜನೆ ಮಾಡುವ ಕ್ರಮವನ್ನು ತಿಳಿಸಲಾಗಿದೆ. | |
| | II. SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ? | ಹೌದು. ಮೇಲಿನ ಕಂಡಿಕೆಯಲ್ಲಿ ವಿವರಿಸಿದೆ. |
| | III. ರೂ.100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ? | ಹೌದು. ದಿ.31.03.2024ಕ್ಕೆ ರೂ. 604.40/– ಲಕ್ಷಗಳ ಹೂಡಿಕೆಗಳ ಏರಿಳಿತ ನಿಧಿ ಇದ್ದು, ಇದು ಬ್ಯಾಂಕು ಹೊಂದಿರುವ ವಿಕ್ರಯಕ್ಕಾಗಿ ಲಭ್ಯವಿರುವ (ಎ.ಎಫ್.ಎಸ್.) ಹೂಡಿಕೆಗಳ |

| | | |
|---|---|---|
| | | ಮೊತ್ತ ರೂ.11,108.55 ಲಕ್ಷಗಳಿಗೆ ಶೇ.5.44% ರಷ್ಟಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದಂತೆ ಕನಿಷ್ಟ ಶೇ. 5 ಕ್ಕಿಂತ ಹೆಚ್ಚಿಗೆ ನಿರ್ವಹಣೆ ಮಾಡಲಾಗಿದೆ. |

**27** **ಸಾಲ ಮತ್ತು ಮುಂಗಡಗಳು:**

**ಮುಂಗಡಗಳು**

**ಎ) ಸಾಲ ವಿತರಣೆ ನಿಯಮ:**

ಸಾಲ ವಿತರಣೆ ಬಗ್ಗೆ ಬ್ಯಾಂಕ್‌ನಲ್ಲಿ ಅಸ್ತಿತ್ವದಲ್ಲಿರುವ ಮತ್ತು ಅನುಸರಣೆ ಯಲ್ಲಿರುವ ನಿಯಮಗಳು – ವಿವೇಕ ಪೂರ್ಣ ಮಾನದಂಡಗಳು, ಕೈಗಾರಿಕಾ ವಲಯಕ್ಕೆ ನಿಗದಿಪಡಿಸಿದ ಸಾಲದ ಮಿತಿ ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸುವ ಬಗ್ಗೆ, ಹತೋಟಿ ಮತ್ತು ಅನುಪಾಲನೆ ಬಗ್ಗೆ.

ಉಪನಿಯಮ 5(15) ಮತ್ತು 68ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳಿಗೆ ಒಳಪಟ್ಟು ಬ್ಯಾಂಕಿನ ಆಡಳಿತ ಮಂಡಳಿ ಅಂಗೀಕರಿಸಿದ ಸೂಕ್ತ ಭದ್ರತೆಗಳ ಆಧಾರದ ಮೇಲೆ ಸಾಲಗಳು ಹಾಗೂ ಬ್ಯಾಂಕ್‌ಖಾತರಿಯನ್ನು ನೀಡಲು ಅವಕಾಶವಿರುತ್ತದೆ.

ಬ್ಯಾಂಕು ರೂಪಿಸಿರುವ ಸಾಲದ ನಿಯಮಗಳ ಪ್ರಕಾರ (ನಿಯಮ 26.1ರಂತೆ) ಪ್ರತಿ ವರ್ಷವು ಬ್ಯಾಂಕಿನ ಆಡಳಿತಮಂಡಳಿ ಭಾರತೀಯ ರಿಸರ್ವ್ ಬ್ಯಾಂಕು ನಿಗಧಿ ಪಡಿಸಿರುವ ಸಾಲದ ಮಿತಿಯಂತೆ, ಪ್ರತಿ ವ್ಯಕ್ತಿಯ ಹಾಗೂ ಗುಂಪಿನ ಗರಿಷ್ಠ ಸಾಲ ಪಡೆಯುವ ಅರ್ಹತೆಯನ್ನು ನಿಗಧಿಪಡಿಸಬೇಕೆಂದು ತಿಳಿಸಿದೆ. ಭಾರತೀಯರಿಸರ್ವ್ ಬ್ಯಾಂಕು ತನ್ನ ಸುತ್ತೋಲೆಯ ಸಂಖ್ಯೆDOR(PCB)BPD,CIR NO10/13.05.000/2019–20 ದಿನಾಂಕ 13/03/2020 ರಂತೆ ಬ್ಯಾಂಕು ಹೊಂದಿರುವ Tier–1 ಬಂಡವಾಳ ನಿಧಿಯ ಶೇ.15%ರಷ್ಟು ವ್ಯಕ್ತಿಗಳಿಗೆ, ಶೇ.25%ರಷ್ಟು ಗುಂಪುಗಳಿಗೆ ಸಾಲ ನೀಡಬಹುದೆಂದು ಮಿತಿಯನ್ನು ನಿಗಧಿಪಡಿಸಿದೆ. ಇದನ್ನು ಬ್ಯಾಂಕು ಪ್ರತಿ ವರ್ಷವು ಆಯಾ ಸಾಲಿನ ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಲೆಕ್ಕ ಹಾಕಬೇಕೆಂದು ತಿಳಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOS(UCB)(BG)(SAF)NO 75550/12.07.144 2021–22 ದಿ.22.07.2021 ರಂತೆ, ಬ್ಯಾಂಕು SAF ನಿಯಂತ್ರಣಕ್ಕೆ (Supervisory Action Frame) ಗೆ ಒಳಪಟ್ಟಿರುವುದರಿಂದ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಅವುಗಳಲ್ಲಿ ವ್ಯಕ್ತಿಗಳ ಹಾಗು ಗುಂಪುಗಳಿಗೆ ಸಾಲ ನೀಡಿರುವ ಮಿತಿಯನ್ನು (Exposure) ಈಗಿರುವುದಕ್ಕಿಂತ ಶೇ. 50% ರಷ್ಟು ಕಡಿಮೆ ಮಾಡಲು ಸೂಚಿಸಿದೆ. ಇದರನ್ವಯ ಬ್ಯಾಂಕ್ ದಿ. 24.08.2023 ರ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿದ್ದು, ಇದು ದಿ. 01.09.2023 ಜಾರಿಗೆ ಬಂದಿರುವುದೆಂದು ತಿಳಿಸಲಾಗಿದೆ.

**ಬಿ) ಸಾಲಗಳ ಮೌಲ್ಯಾಂಕನ (Credit Appraisal)**

ಸಾಲಗಳ ಮೌಲ್ಯಾಂಕನಕ್ಕಾಗಿ ಉತ್ತಮ ಪದ್ಧತಿಯನ್ನು ಹೊಂದಲಾಗಿದೆಯೇ? ಹಾಗೂ ಸಾಲಗಾರರು ಸಾಲ ಪಡೆಯುವ ಅರ್ಹತೆಯನ್ನು ಹೊಂದಿರುವುದನ್ನು ನಿರ್ಧರಿಸುವುದಕ್ಕೆ ಸಾಕಷ್ಟು ಅಂಕಿ ಅಂಶಗಳನ್ನು/ಮಾಹಿತಿಗಳನ್ನು ಹೊಂದಲಾಗಿದೆಯೇ ಮತ್ತು ಅವುಗಳನ್ನು ಪಾಲಿಸಲಾಗುತ್ತಿದೆಯೇ?

ವಿವರ ಈ ಕೆಳಗಿನಂತಿದೆ.

ಉಪನಿಯಮ 5(15) ಮತ್ತು 68ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳಿಗೆ ಒಳಪಟ್ಟು ಬ್ಯಾಂಕಿನ ಆಡಳಿತ ಮಂಡಳಿ ಅಂಗೀಕರಿಸಿದ ಸೂಕ್ತ ಭದ್ರತೆಗಳ ಆಧಾರದ ಮೇಲೆ ಸಾಲಗಳು ಹಾಗು ಬ್ಯಾಂಕ್ ಖಾತರಿಯನ್ನು ನೀಡಲು ಅವಕಾಶವಿರುತ್ತದೆ.

ಬ್ಯಾಂಕು ರೂಪಿಸಿರುವ ಸಾಲದ ನಿಯಮಗಳ ಪ್ರಕಾರ (ನಿಯಮ 26.1ರಂತೆ) ಪ್ರತಿ ವರ್ಷವು ಬ್ಯಾಂಕಿನ ಆಡಳಿತ ಮಂಡಳಿ ಭಾರತೀಯ ರಿಸರ್ವ್ ಬ್ಯಾಂಕು ನಿಗಧಿ ಪಡಿಸಿರುವ ಸಾಲದ ಮಿತಿಯಂತೆ, ಪ್ರತಿ ವ್ಯಕ್ತಿಯ ಹಾಗೂ ಗುಂಪಿನ ಗರಿಷ್ಟ ಸಾಲ ಪಡೆಯುವ ಅರ್ಹತೆಯನ್ನು ನಿಗಧಿಪಡಿಸಬೇಕೆಂದು ತಿಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕು ತನ್ನ ಸುತ್ತೋಲೆಯ ಸಂಖ್ಯೆ DOR(PCB)BPD,CIR NO 10/13.05.000/2019-20 ದಿನಾಂಕ 13/03/2020 ರಂತೆ ಬ್ಯಾಂಕು ಹೊಂದಿರುವ Tier-1 ಬಂಡವಾಳ ನಿಧಿಯ ಶೇ.15% ರಷ್ಟು ವ್ಯಕ್ತಿಗಳಿಗೆ, ಶೇ.25% ರಷ್ಟು ಗುಂಪುಗಳಿಗೆ ಸಾಲ ನೀಡಬಹುದೆಂದು ಮಿತಿಯನ್ನು ನಿಗಧಿಪಡಿಸಿದೆ. ಇದನ್ನು ಬ್ಯಾಂಕು ಪ್ರತಿ ವರ್ಷವು ಆಯಾ ಸಾಲಿನ ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಲೆಕ್ಕ ಹಾಕಬೇಕೆಂದು ತಿಳಿಸಲಾಗಿದೆ.

ಭಾರತೀಯ ರಿಜರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOS(UCB)(BG)(SAF)NO 75550/ 12.07.144 2021-22 ದಿ.22.07.2021 ರಂತೆ, ಬ್ಯಾಂಕು SAF ನಿಯಂತ್ರಣಕ್ಕೆ (Supervisory Action Frame) ಗೆ ಒಳಪಟ್ಟಿರುವುದರಿಂದ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಅವುಗಳಲ್ಲಿ ವ್ಯಕ್ತಿಗಳ ಹಾಗು ಗುಂಪುಗಳಿಗೆ ಸಾಲ ನೀಡಿರುವ ಮಿತಿಯನ್ನು (Exposure) ಈಗಿರುವುದಕ್ಕಿಂತ ಶೇ. 50% ರಷ್ಟು ಕಡಿಮೆ ಮಾಡಲು ಸೂಚಿಸಿದೆ. ಇದರನ್ವಯ ಬ್ಯಾಂಕ್ ದಿ.24.08.2023 ರ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಕೈಗೊಂಡಿದ್ದು, ಇದು ದಿ.01-09-2023 ಜಾರಿಗೆ ಬಂದಿರುವುದೆಂದು ತಿಳಿಸಲಾಗಿದೆ.

| ಕ್ರ. ಸಂ. | ವಿವರ | ಸಾಲ ನೀಡಿಕೆಯು ಬಂಡವಾಳ ನಿಧಿಯ ಶೇಕಡಾವಾರು ಪ್ರಮಾಣ | ಅರ್ಹತೆ ಹೊಂದಿರುವುದು | ನಿಗಧಿಗೊಳಿಸಿದ್ದು |
|---|---|---|---|---|
| 1 | ವ್ಯಕ್ತಿಗಳು | ಶೇ.15% | ರೂ. 2.45 ಕೋಟಿ | ರೂ. 2.40 ಕೋಟಿ |
| 2 | ಗುಂಪುಗಳು | ಶೇ.25% | ರೂ. 4.09 ಕೋಟಿ | ರೂ. 4.00 ಕೋಟಿ |

ಬ್ಯಾಂಕಿನ ಆಡಳಿತ ಮಂಡಳಿಯು ದಿ. 31.5.2023ರ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಾಲ ವಿತರಣೆ ಹಾಗು ವಸೂಲಾತಿಯ ಬಗ್ಗೆ ಈ ಕೆಳಕಂಡ ಗುರಿಗಳನ್ನು ನಿಗಧಿಪಡಿಸಿದೆ.

1) 2023-24ನೇ ಸಾಲಿಗೆ ಸಾಲ ವಿತರಣೆ ರೂ. 88.35 ಕೋಟಿ.
2) 2023-24ನೇ ಸಾಲಿಗೆ ಸಾಲ ವಸೂಲಾತಿ ರೂ. 58.37 ಕೋಟಿ.

ಪ್ರಸಕ್ತ ಸಾಲಿನಲ್ಲಿ ಸಾಧಿಸಿದ ಗುರಿ

1) ಸಾಲ ವಿತರಣೆ ರೂ. 75.38 ಕೋಟಿ.
2) ಸಾಲ ವಸೂಲಾತಿ ರೂ. 85.98 ಕೋಟಿ.

**ಭಾರತೀಯ ರಿಜರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOR(PCB).BPD.CIR.No.10/ 13.05.000/2019-20 ದಿ.13-03-2020 ರಂತೆ, ಯು.ಸಿ.ಬಿ.ಯು ತಮ್ಮ ಒಟ್ಟು ಸಾಲಗಳಲ್ಲಿ ಕನಿಷ್ಠ ಶೇಕಡ 50 ಪ್ರತಿಶತವನ್ನು 25ಲಕ್ಷ ಮೀರದ ಸಾಲಗಳಲ್ಲಿ ಅಥವಾ ಬ್ಯಾಂಕಿನ ಶ್ರೇಣಿ 1 (Tier-I) ಬಂಡವಾಳದ 0.2% ಮೀರದಂತೆ (ಪ್ರತಿ ಸಾಲಕ್ಕೆ) ತೊಡಗಿಸಿಕೊಳ್ಳಬೇಕು ಮತ್ತು ಇದು ಒಬ್ಬ ಸಾಲಗಾರರಿಗೆ ಗರಿಷ್ಠ 1 ಕೋಟಿ ಮಿತಿಯಲ್ಲಿರಬೇಕು. ಇದನ್ನು ದಿನಾಂಕ 31-03-2024 ರ ಒಳಗೆ ಅಳವಡಿಸಿಕೊಳ್ಳಬೇಕಾಗಿರುತ್ತದೆ. ದಿನಾಂಕ 31-03-2024 ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಪ್ರಕಾರ ಇದು ಅಂದಾಜು 31% ಇರುತ್ತದೆ. ಇದನ್ನು ಶೇ 50%ಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಸಾಲ ವಿತರಣೆ ಮತ್ತು ಸಾಲ ವಸೂಲಾತಿ ಗುರಿಗಳನ್ನು ವಾಸ್ತವಿಕ ನೆಲೆಯ ಮೇಲೆ ಗುರುತಿಸಬೇಕಾಗಿದ್ದು, ಅದನ್ನು ಆಡಳಿತ ಮಂಡಳಿ ಮನಗಾಣಬೇಕಾಗಿದೆ.

ಕ್ಲಿಷ್ಟಕರವಾದ ದೀರ್ಘಾವಧಿಯ ಹಳೆ ಬಾಕಿಗಳ ವಸೂಲಾತಿಗೆ ಆದ್ಯ ಗಮನ ನೀಡಬೇಕಾಗಿದೆ.

ಉಪನಿಯಮ 68ರಂತೆ ಈ ಕೆಳಕಂಡ ಸಾಲಗಳನ್ನು ನೀಡಲು ಅವಕಾಶವಿರುತ್ತದೆ.

1) ಜಾಮೀನು ಸಾಲ

2) ಚರ ಮತ್ತು ಸ್ಥಿರ ಸ್ವತ್ತುಗಳ ಆಧಾರ ಸಾಲ

3) ಸರ್ಕಾರಿ / ಅರೆಸರ್ಕಾರಿ ಭದ್ರತೆ ಪತ್ರಗಳ, ಉಗ್ರಾಣ ರಸೀದಿಗಳ ಆಧಾರದ ಮೇಲೆ ಸಾಲ

4) ಚಿನ್ನಾಭರಣ ಆಧಾರ ಸಾಲ.

ಸಿ) **ಸಾಲ ಮಂಜೂರಾತಿ/ ವಿತರಣೆ**

ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?

ವಿವರ ಈ ಕೆಳಗಿನಂತಿದೆ.

ಉಪನಿಯಮ 67ರಂತೆ ಪ್ರತಿ ವರ್ಷವು ಸಾಲ ನೀಡಿಕೆಯ ಸಂಬಂಧ ಸಾಲದ ನೀತಿಗಳನ್ನು ರೂಪಿಸಲು ತಿಳಿಸಲಾಗಿದೆ. ಪ್ರಸಕ್ತ ಸಾಲಿಗೆ ಬ್ಯಾಂಕುದಿ.27-06-2022ರಂದುಸಾಲದ ನೀತಿಯನ್ನು ಅನುಮೋದಿಸಿದೆ. ಪ್ರಸಕ್ತ ಸಾಲಿನಲ್ಲಿ ಚಿನ್ನಾಭರಣ ಸಾಲಗಳ ಮೇಲೆ ರೂ.10.00 ಲಕ್ಷಗಳವರೆಗೆ ಶಾಖಾ ವ್ಯವಸ್ಥಾಪಕರು ಹಾಗೂ ಜಾಮೀನು ಸಾಲ, ಸರ್ಕಾರಿ / ಅರೆಸರ್ಕಾರಿ ಭದ್ರತೆ ಸಾಲ, ಇವುಗಳ ಸಂಬಂಧ ರೂ.1 ಲಕ್ಷಗಳ ವರೆಗೆ ಸಾಲವನ್ನು ಬ್ಯಾಂಕಿನ ಶಾಖಾ ವ್ಯವಸ್ಥಾಪಕರು. ರೂ.2 ಲಕ್ಷಗಳವರೆಗೆ ಸಾಲವನ್ನು ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ರೂ.3 ಲಕ್ಷಗಳವರೆಗೆ ಸಾಲವನ್ನು ಪ್ರಧಾನ ವ್ಯವಸ್ಥಾಪಕರು ನೀಡಿರುತ್ತಾರೆ.

ಈ ಮಿತಿಗಿಂತ ಮೇಲ್ಪಟ್ಟಎಲ್ಲಾ ಸಾಲಗಳನ್ನು ಸಾಲದಉಪಸಮಿತಿಯ ಪರಿಶೀಲನೆಗೆ ಒಳಪಡಿಸಿ ಅದರಅನುಮೋದನೆ ನಂತರ ಆಡಳಿತ ಮಂಡಳಿಯ ಸ್ಥಿರೀಕರಣ ಪಡೆಯಲಾಗಿರುತ್ತದೆ.

ಡಿ) **ದಾಖಲೀಕರಣ ಸಂಗ್ರಹಣೆ (Documentation)**

ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು, ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)

ಪಡೆಯಲಾಗಿದೆ.

**ಇ) ನವೀಕರಣ / ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ / ಮೇಲ್ವಿಚಾರಣೆ :**

i) ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ ಹಾಗೂ ಅವುಗಳ ಒಪ್ಪಿಕೊಳ್ಳುವಿಕೆ.

ಸಾಲ ಮಂಜೂರಾತಿ / ವಿತರಣೆಗೆ ಮೊದಲು ಸಾಲಗಾರನ ಸಾಲ ಪಡೆಯುವ ಸಾಮರ್ಥ್ಯಹಾಗೂ ಮರುಪಾವತಿ ಸಾಮರ್ಥ್ಯದ ಅವಲೋಕನೆ, ಸಾಲ ವಿತರಣೆಯ ನಂತರ ಸೂಕ್ತ ಮೇಲುಸ್ತುವಾರಿಗೆ (Pre-sanction appraisal and Post-sanction supervision) ಸಂಬಂಧಿಸಿದ ಮಾನದಂಡಗಳನ್ನು ರಚಿಸಿಕೊಂಡು ಅದರಂತೆ ಬ್ಯಾಂಕು ಕಾರ್ಯ ನಿರ್ವಹಿಸಬೇಕಾಗಿದೆ.

ii) ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿಯಾಗುತ್ತಿರುವ ಬಗ್ಗೆ.

ಪಡೆಯಲಾಗುತ್ತಿದೆ.

iii) ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ.

ಆರ್‌ಬಿಐ ಸುತ್ತೋಲೆ UBD.BPD.(PCB). MC.NO.1 /13.05.000/2013-14 DTD.01.07.2013- Master Circular – Exposure Norms and Statutory/ Other Restrictions – UCB ರನ್ವಯ ರೂ. 10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ಧ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.

iv) ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ.

ಬ್ಯಾಂಕು ಸಾಲ ನೀತಿಯನ್ನು ರೂಪಿಸಿದ್ದು, ಬ್ಯಾಂಕಿನ ಉಪನಿಯಮ 67, 68 ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ವಯ ಆಗತ್ಯ ಮಾಹಿತಿ, ದಾಖಲೆ ಪಡೆದು ಸಾಲಗಳನ್ನು ನೀಡಲಾಗುತ್ತದೆ.

v) ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ.

vi) ನಿಯತಕಾಲಿಕವಾಗಿ ದಾಸ್ತಾನು ಪರಿಶೋಧನೆ ನಿರ್ವಹಿಸುತ್ತಿರುವ ಬಗ್ಗೆ.

ಅಡವು ಮಾಡಿಕೊಂಡ ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗು ಇತರೆ ಭದ್ರತೆಗಳಿಗೆ ಸಂಬಂಧಿಸಿದಂತೆ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿ ನಿಯಮಿತವಾಗಿ ಮಾಡುತ್ತಿಲ್ಲ.

vii) ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ

ಸಾಲಗಳ ಅರ್ಜಿಗಳನ್ನು ಹೊಸದಾಗಿ ಪಡೆದು ಪರಿಶೀಲಿಸಿದಾಗ ಅಥವಾ ನವೀಕರಿಸಿದಾಗ ಮಾತ್ರ ತನಿಖಾ ವರದಿಗಳನ್ನು ಪಡೆದು ನಿರ್ವಹಿಸಲಾಗಿದೆ.

viii) ಕ್ರೆಡಿಟ್ ರೇಟಿಂಗ್ ನೀಡುವಾಗ ಪಾಲಿಸುತ್ತಿರುವ ಮಾನದಂಡಗಳು

2020–21ನೇ ಸಾಲಿನಿಂದ ಕ್ರಮಬದ್ದವಾಗಿ ಮಾಡಲಾಗುತ್ತಿದೆ.

ix) ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI)

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯಂತೆ ದಿ.31.03.2024ಕ್ಕೆ ಬಾಕಿ ಇರುವ ಸಾಲಗಳನ್ನು ಉತ್ಪಾದಕ ಮತ್ತು ಅನುತ್ಪಾದಕ ಸಾಲಗಳೆಂದು ಗುರುತಿಸಿ ಆರ್ಥಿಕ ತಃಖ್ತೆಗಳಲ್ಲಿ ನಿಗಧಿ ಪಡಿಸಿದ ದರದಲ್ಲಿ ಅವಕಾಶ ಕಲ್ಪಿಸಲಾಗಿದೆ.

x) ಲೀಸಿಂಗ್, ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್ ಕಾರ್ಡ್ ವ್ಯವಹಾರಗಳ ಸುಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆ.

ಈ ವ್ಯವಸ್ಥೆ ಇರುವುದಿಲ್ಲ.

xi) ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ.

ಹೆಚ್ಚಿಸಿದ ಸಾಲದ ಮಿತಿಗಳು ವಿಸ್ತರಣೆಗೊಂಡಂತೆ ಅಗತ್ಯ ಪೂರಕ ದಾಖಲೆಗಳನ್ನು ಭದ್ರತೆಗಾಗಿ ಪಡೆದು ಪರಿಶೀಲಿಸಲಾಗಿದೆ.

xii) ಸೌಲಭ್ಯಗಳ ನವೀಕರಣ

ಓ.ಡಿ.ಸಾಲಗಳನ್ನು ಮಾತ್ರ ನವೀಕರಿಸಲಾಗುತ್ತದೆ.

xiii) ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.

ಯಾವುದೇ ಕೈಗಾರಿಕೆಗೆ ಸಾಲ ನೀಡುತ್ತಿಲ್ಲ.

**ಎಫ್) ಕರಡು ಮತ್ತು ಸಂಶಯಾಸ್ಪದ ಸಾಲಗಳು:**

i) ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿರುವ ವ್ಯವಸ್ಥೆಗಳು ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸಿ ಅನುಸರಿಸುತ್ತಿರುವ ಬಗ್ಗೆ ಹಾಗೂ ಈ ಕುರಿತು ಆರ್.ಬಿ.ಐ. ಮಾರ್ಗಸೂಚಿಗಳ ಪಾಲನೆ ಬಗ್ಗೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಲಾಗಿದೆ.

ii) ಬ್ಯಾಂಕ್ ವಿತರಿಸಿದ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕ್ರೆಡಿಟ್ ಕಾರ್ಡ್ ಸಾಲ ವಸೂಲಾತಿ ಬಗ್ಗೆ.

ಈ ವ್ಯವಸ್ಥೆ ಇರುವುದಿಲ್ಲ.

iii) ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ

ಅನುತ್ಪಾದಕ ಆಸ್ತಿಗಳ ವರ್ಗೀಕರಣ ಮತ್ತು ಅಗತ್ಯ ಅವಕಾಶ ಕಲ್ಪಿಸಲಾಗಿದೆ.

iv) ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಲಾಗಿದೆ. 31/03/2024ಕ್ಕೆ ಹಿಂದಿನ ಸಾಲಗಳದ್ದೂ ಸೇರಿ ಬ್ಯಾಂಕ್ ಗಳಿಸಿದ ಲಾಭದಿಂದ ತೆಗೆದ ಕರಡು ನಿಧಿ ರೂ.1502.04 ಲಕ್ಷಗಳು ಹಾಗೂ ಅನುತ್ಪಾದಕ ಆಸ್ತಿಗಳ ಮೇಲಿನ ಅವಕಾಶ ರೂ.1,347.96 ಲಕ್ಷಗಳು ಸೇರಿದಂತೆ ಒಟ್ಟು ರೂ.2,850.00 ಲಕ್ಷಗಳ ಕರಡು ನಿಧಿಯನ್ನು ಬ್ಯಾಂಕ್ ಹೊಂದಿರುತ್ತದೆ.

v) ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.

ಮೀರೆಳೆತ ಸಾಲಗಳನ್ನು ಹೊರತುಪಡಿಸಿ, ಇನ್ನಾವುದೇ ಸಾಲಕ್ಕೆ ಆಕರಿಸಿದ ಬಡ್ಡಿಯನ್ನು ಸೇರಿಸುತ್ತಿಲ್ಲ.

vi) ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು DICGC/ECGC ಯನ್ನೊಳಗೊಂಡಂತೆ.

vii) ಪುನ:ಸ್ವಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ

ಬ್ಯಾಂಕಿನಲ್ಲಿ ಯಾವುದೇ ಸಾಲವನ್ನು ಕರಡು ಸಾಲವೆಂದು ಪರಿಗಣಿಸಿಲ್ಲ. ಆದ್ದರಿಂದ ಯಾವುದೇ Rehabilitation ಕಾರ್ಯಕ್ರಮ ಹೊಂದಿಲ್ಲ.

viii) ಸಾಲ ವಸೂಲಾತಿ ಮೊಬಲಗನ್ನು ಸಾಲದ ಅಸಲಿಗೆ, ಬಡ್ಡಿಗೆ ಹೊಂದಾಣಿಕೆ ಮಾಡುವ ಬಗ್ಗೆ ಇರುವ ವ್ಯವಸ್ಥೆ.

ಮೀರೆಳೆತ ಸಾಲಗಳನ್ನು ಹೊರತುಪಡಿಸಿ, ಇನ್ನಾವುದೇ ಸಾಲಕ್ಕೆ ಆಕರಿಸಿದ ಬಡ್ಡಿಯನ್ನು ಸೇರಿಸುತ್ತಿಲ್ಲ.

ix) ರಾಜಿ ಸಂಧಾನದ ಮೂಲಕ ಏಕಕಾಲದಲ್ಲಿ ಸಾಲಗಳನ್ನು ಇತ್ಯರ್ಥಗೊಳಿಸಿರುವ ಪ್ರಕರಣಗಳು – ರೂ. 1.00 ಕೋಟಿಗೂ ಮೀರಿದ ಇಂತಹ ಪ್ರಕರಣಗಳು ಮತ್ತು ಆರ್.ಬಿ.ಐ. ನಿಗದಿಗೊಳಿಸಿರುವ ಮಿತಿಗಿಂತ ಹೆಚ್ಚಿನ ಮೊಬಲಗು ವಿನಾಯಿತಿ ನೀಡಿರುವ ಪ್ರಕರಣಗಳ ಬಗ್ಗೆ.

ವಿವರ ಈ ಕೆಳಕಂಡಂತಿದೆ.

1. ರಾಜಿ ಪರಿಹಾರ ನೀತಿ ಮತ್ತು ತಾಂತ್ರಿಕ ವಜಾ (Compromise Settlement and Technical Write off)

ಬ್ಯಾಂಕ್ ದಿನಾಂಕ 26.07.2023ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಭಾರತೀಯ ರಿಝರ್ವ್ ಬ್ಯಾಂಕಿನ ಪತ್ರ ಸಂಖ್ಯೆ RBI/2023–24/40/DOR.STR.20/21.04.048 /2023–24; dated : 08.06.2023 ರಂತೆ ರಾಜಿ ಪರಿಹಾರ ನೀತಿ ಮತ್ತು ತಾಂತ್ರಿಕ ವಜಾ ಪಾಲಿಸಿಯನ್ನು ಅಳವಡಿಸಿಕೊಂಡು ದಿನಾಂಕ 01.08.2023ರಿಂದ ಸಂಧಾನ ಸಮಿತಿಯನ್ನು (Negotiating committee) ರಚಿಸಿಕೊಂಡಿರುತ್ತದೆ. ಅದರಂತೆ ಸಂಧಾನ ಸಮಿತಿಯು ಪಾಲಿಸಿಯ ಮಾನದಂಡಗಳನ್ವಯ ವರದಿ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ದಿನಾಂಕ 01.08.2023 ರಿಂದ 31.03.2024ರವರೆಗೆ ಸ್ವೀಕರಿಸಿದ ಖಾತೆಗಳ ಮತ್ತು ಆಡಳಿತ ಮಂಡಳಿಯ ಮಂಜೂರಾತಿ / ಅನುಮೋದನೆಯ ನಿಬಂಧನೆಗಳಂತೆ ಚುಕ್ತವಾದ ಖಾತೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

| ಚುಕ್ತವಾದ ಖಾತೆಗಳು | | ಸಾಲದ ಮೊತ್ತ | | ಸಂಧಾನ ಸಮಿತಿ ಶಿಫಾರಸ್ಸು ಮಾಡಿರುವ ಮೊತ್ತ | | ವಸೂಲಾದ ಮೊತ್ತ | | ಅನುತ್ಪಾದಕ ಆಸ್ತಿ ನಿಧಿಯಿಂದ ಹೊಂದಾಣಿಕೆ ಮೊತ್ತ |
|---|---|---|---|---|---|---|---|---|
| | ಸಂಖ್ಯೆ | ಅಸಲು | ಬಡ್ಡಿ | ಅಸಲು | ಬಡ್ಡಿ | ಅಸಲು | ಬಡ್ಡಿ | |
| ಭದ್ರತಾ ಸಾಲ | 15 | 862.28 | 911.66 | 850.46 | 372.72 | 850.46 | 399.27 | 11.82 |
| ಭದ್ರತಾ ರಹಿತ ಸಾಲ | 471 | 261.71 | 1050.64 | 155.76 | 0.00 | 165.93 | 23.18 | 95.78 |
| **ಒಟ್ಟು** | **486** | **1123.99** | **1962.30** | **1006.22** | **372.72** | **1016.39** | **422.45** | **107.60** |

2. ಹಿಂದಿನ ವರ್ಷಗಳಲ್ಲಿ ಹೆಚ್ಚುವರಿಯಾಗಿ ಅವಕಾಶ ಮಾಡಿದ ಅನುತ್ಪಾದಕ ನಿಧಿಯ ಮೊತ್ತದಲ್ಲಿ, ಪ್ರಸಕ್ತ ವರ್ಷದಲ್ಲಿ ರೂ.778.55 ಲಕ್ಷಗಳನ್ನು ಹಿಂಪಡೆದು, ಸದರಿ ಮೊತ್ತದಲ್ಲಿ ರೂ.327.69 ಲಕ್ಷಗಳನ್ನು ಆದಾಯವೆಂದು ಪರಿಗಣಿಸಿ ಲಾಭನಷ್ಟದ ಖಾತೆಗೆ ಜಮೆ ತೆಗೆದುಕೊಳ್ಳಲಾಗಿದೆ ಮತ್ತು ಇನ್ನುಳಿದ ಮೊತ್ತ ರೂ.450.86 ಲಕ್ಷಗಳಲ್ಲಿ ರೂ.107.60ಲಕ್ಷಗಳನ್ನು ರಾಜಿ ಪರಿಹಾರ ನೀತಿಯಡಿಯಲ್ಲಿ (compromise settlement) ಹಾಗು ರೂ.343.26 ಲಕ್ಷಗಳನ್ನು ತಾಂತ್ರಿಕ ವಜಾ ಅಡಿಯಲ್ಲಿ (technical write off)

| | |
|---|---|
| | ಸಾಲ ಚುಕ್ತಗೊಳಿಸಲು ಅನುತ್ಪಾದಕ ನಿಧಿಯಿಂದ ಹೊಂದಾಣಿಕೆ ಮಾಡಿಕೊಂಡಿರುವುದನ್ನು ಗಮನಿಸಿದೆ. ಇದರಿಂದಾಗಿ ಪ್ರಸಕ್ತ ಸಾಲಿಗೆ ಲಾಭದಲ್ಲಿ ರೂ.3,27,69,188/–ಗಳ ಹೆಚ್ಚಳವಾಗಿದೆ.<br><br>x) ಸಕ್ಷಮ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು<br>ಪ್ರಸಕ್ತ ಸಾಲಿಗೆ ಯಾವುದೂ ಇರುವುದಿಲ್ಲ.<br><br>xi) ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ.<br>1) 2023–24ನೇ ಸಾಲಿನಲ್ಲಿ ಬ್ಯಾಂಕು ಸಾಲದ ನೀತಿಯನ್ನು ಪರಿಷ್ಕರಿಸಿ ಅನುಮೋದಿಸಿದೆ.<br>2) ಉಪನಿಯಮ 88ರಂತೆ ನೀಡಿದ ಸಾಲ ಸುಸ್ತಿಯಾದ 6 ತಿಂಗಳ ಅವಧಿಯೊಳಗೆ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಬೇಕು.<br>3) ಆಡಳಿತ ಮಂಡಳಿಯು ತನ್ನ ಪ್ರತಿ ಮಾಸಿಕ ಸಭೆಯಲ್ಲಿ ಎನ್.ಪಿ.ಎ ಆದ, ದೊಡ್ಡ ಪ್ರಮಾಣದ ಸಾಲಗಳ ಅನೇಕ ಪ್ರಕರಣಗಳನ್ನು ಪರಿಶೀಲಿಸುತ್ತಿದೆ. ಕೆಲವು ಪ್ರಕರಣಗಳ ವಿರುದ್ದ SARFAESI ಕಾಯಿದೆಯಡಿ ಕ್ರಮವಿಡಲು, ಕೆಲವು ಪ್ರಕರಣಗಳಲ್ಲಿ ಸಾಲಗಾರರು ಮರುಪಾವತಿಸುವ ಬಗ್ಗೆ ಭರವಸೆ ನೀಡಿರುವ ಹಿನ್ನಲೆಯಲ್ಲಿ, ಕಾದುನೋಡಿ ಅನುಸರಣಾ ಕ್ರಮವಿಡುವ ಬಗ್ಗೆ ನಿರ್ಣಯಿಸಲಾಗಿದೆ.<br>xii) ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಇಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನ ನಿಯಮಗಳು.<br>ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆ ಅನ್ವಯ ಮೊದಲ 70 ಅತಿ ಹೆಚ್ಚು ಮೊಬಲಗಿನ ಬಾಕಿ ಇರುವ ಸುಸ್ತಿದಾರರ ಖಾತೆಗಳನ್ನು ಪರಿಶೀಲಿಸಿ, ಅದರ ವಸೂಲಿಗಾಗಿ ಕ್ರಮವಿಡಲಾಗುತ್ತಿದೆ.<br>**ಜಿ) ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:**<br>ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.<br>ಮುಂದಿನ ಕಂಡಿಕೆಗಳಲ್ಲಿ ವಿವರಿಸಿದೆ. |
| **28** | **ಸುಸ್ತಿ ಸಾಲಗಳ ವಿವರ**<br>1) ಶೇಕಡಾವಾರು ಸುಸ್ತಿ ಸಾಲಗಳ ಬಗ್ಗೆ ವಿಮರ್ಶೆ<br>ದಿ.31.03.2024ಕ್ಕೆ ಒಟ್ಟು ವಸೂಲಾಗಬೇಕಾದ ಸಾಲದ ಪೈಕಿ ರೂ. 1,606.30 ಲಕ್ಷಗಳು ಸುಸ್ತಿ ಸಾಲ ಇರುವುದಾಗಿ ತಿಳಿಸಲಾಗಿದೆ. ಇದು ಒಟ್ಟು ಬಾಕಿಗೆ ಶೇ. 8.48% ರಷ್ಟಿದೆ.<br>1) ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು)<br>ಲಗತ್ತಿಸಲಾಗಿದೆ. |

| | |
|---|---|
| | ಒಬ್ಬನೇ ಸಾಲಗಾರ ಒಂದಕ್ಕಿಂತ ಹೆಚ್ಚು ಸಾಲಗಳನ್ನು ಪಡೆದಿರುವ ಸಂದರ್ಭಗಳಲ್ಲಿ ಅನುತ್ಪಾದಕ ಆಸ್ತಿಯ ಗುರುತಿಸುವಿಕೆಯು ಸಿಸ್ಟಮ್‌ನಲ್ಲಿ (ಸಾಫ್ಟ್‌ವೇರ್) ತನ್ನಿಂತಾನೇ ಆಗುತ್ತಿಲ್ಲ. ಆದ್ದರಿಂದ ಅನುತ್ಪಾದಕ ಆಸ್ತಿಯನ್ನು ಗುರುತಿಸದೇ ಇರುವ ಸಂಭವವಿರುತ್ತದೆ ಹಾಗೂ ಮಾನವ ಹಸ್ತಕ್ಷೇಪದಿಂದ ತಪ್ಪುಗಳೂ ಸಹ ಸಂಭವಿಸಬಹುದು.<br><br>ದಿ.31.03.2024ಕ್ಕೆ ಬ್ಯಾಂಕು ಹೊಂದಿರುವ ರೂ.18942.74 ಲಕ್ಷಗಳ ಸಾಲದ ಬಾಕಿಯಲ್ಲಿ ರೂ.3,340.58 ಲಕ್ಷಗಳ ಅನುತ್ಪಾದಕ ಆಸ್ತಿಯನ್ನು ತೋರಿಸಲಾಗಿದೆ. ಸದರಿ ಅನುತ್ಪಾದಕ ಆಸ್ತಿಯು ಒಟ್ಟು ಸಾಲದ ಬಾಕಿಗೆ ಶೇ.17.64ಗಳಾಗಿರುತ್ತದೆ. 31/03/2023ಕ್ಕೆ ಇದರ ಪ್ರಮಾಣ ಶೇ.34.17 ಆಗಿತ್ತು. ಹಿಂದಿನ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಶೇ.16.53ರಷ್ಟು ಕಡಿಮೆಯಾಗಿದೆ.<br><br>ಬ್ಯಾಂಕಿನಲ್ಲಿ ಅನುತ್ಪಾದಕ ಆಸ್ತಿಗಳಿಗಾಗಿ ಮಾಡಿರುವ ಅವಕಾಶ ಹಾಗೂ ಕರಡು ಸಾಲದ ನಿಧಿ ದಿ.31.03.2024ಕ್ಕೆ ರೂ.2850.00 ಲಕ್ಷಗಳಿದ್ದು, ಇದರಿಂದಾಗಿ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.3.05 ರಷ್ಟಿದೆ. 31/03/2023ಕ್ಕೆ ಇದರ ಪ್ರಮಾಣ ಶೇ.19.72ರಷ್ಟಿತ್ತು. ವರದಿಸಾಲಿನಲ್ಲಿ ಬ್ಯಾಂಕ್ ವಸೂಲಾತಿಗಾಗಿ ತೀವ್ರ ಕ್ರಮ ಕೈಗೊಂಡು ನಿವ್ವಳ ಅನುತ್ಪಾದಕ ಆಸ್ತಿಯನ್ನು ಕಡಿಮೆಗೊಳಿಸಿದೆ.<br><br>ಪ್ರಸಕ್ತ ಸಾಲಿಗೆ ಬ್ಯಾಂಕು ಅನುತ್ಪಾದಕ ಆಸ್ತಿಗಳ ಮೇಲೆ ಮಾಡಬೇಕಾಗಿದ್ದ ಅವಕಾಶ ರೂ.2,253.36 ಲಕ್ಷಗಳು, ಆದರೆ ಮಾಡಿರುವ ಅವಕಾಶ ರೂ.2,850.00 ಲಕ್ಷಗಳು ಅಂದರೆ ಅಗತ್ಯವಾದ ಅವಕಾಶಕ್ಕಿಂತಲು ರೂ.596.64 ಲಕ್ಷಗಳ ಹೆಚ್ಚುವರಿ ಅವಕಾಶವನ್ನು ಕಲ್ಪಿಸಲಾಗಿದೆ.<br><br>ಬ್ಯಾಂಕಿನ ಅನುತ್ಪಾದಕ ಆಸ್ತಿಯು ನಿಗದಿಗೊಳಿಸಿದ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದ ಕಾರಣ ಬ್ಯಾಂಕನ್ನು ಬ್ಯಾಂಕಿಗ್ ನಿಯಂತ್ರಣ ಕಾಯಿದೆ ಕಲಂ36(1)ರಂತೆ ಆರ್.ಬಿ.ಐ ಮೇಲುಸ್ತುವಾರಿ ನಿರ್ಬಂಧಗಳನ್ನು ವಿಧಿಸಿದ್ದು ಮುಂದುವರೆದಿದೆ, ಬ್ಯಾಂಕು ಸದರಿ ಮೇಲುಸ್ತುವಾರಿಯಿಂದ ಹೊರ ಬರಬೇಕಾದರೆ ನಿಗದಿತ ಮಿತಿಗೆ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಕಡಿಮೆಗೊಳಿಸುವಂತೆ ಸೂಚಿಸಿದೆ. ಇದನ್ನು ಆರ್.ಬಿ.ಐ.ನ ಪರಿವೀಕ್ಷಣಾ ವರದಿಯಲ್ಲಿ ತಿಳಿಸಲಾಗಿದೆ.<br><br>ಅದರಂತೆ ಬ್ಯಾಂಕ್ ವರದಿ ಸಾಲಿನಲ್ಲಿ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿ ಶೇ.3.05ರಷ್ಟಿರುತ್ತದೆ. ವರದಿ ಸಾಲಿನಲ್ಲಿ ಬ್ಯಾಂಕಿನ ನಿವ್ವಳ ಎನ್.ಪಿ.ಎ. (ಶೇ.3.05ರಷ್ಟು) ಭಾರತೀಯ ರಿಸರ್ವ್ ಬ್ಯಾಂಕಿನವರು ಮೇಲುಸ್ತುವಾರಿಯಿಂದ ಹೊರಗೆಬರಲು ನಿಗಧಿಪಡಿಸಿದ ಶೇ.6ರ ಮಿತಿಗಿಂತ ಕಡಿಮೆ ಇರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಪತ್ರ ಬರೆದು ಮೇಲುಸ್ತುವಾರಿಯಿಂದ ಹೊರಬರಲು ಕ್ರವಿಡುವಂತೆ ಸೂಚಿಸಲಾಗಿದೆ. |
| 29 | ಆಸ್ತಿ– ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕ್‌ನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದುತ್ತದೆಯೇ?<br>ತಾಳೆ ಹೊಂದುತ್ತವೆ. |
| 30 | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು.<br>ಯಾರು ಸುಸ್ತಿದಾರರಾಗಿರುವುದಿಲ್ಲ. |

| | |
|---|---|
| 31 | a) (i) ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ<br>ದಿ.31.03.2024ಕ್ಕೆ ಆದ್ಯತಾ ವಲಯದ ಸಾಲದ ಬಾಕಿ ರೂ. 6,099.99 ಲಕ್ಷಗಳು. ಇದು ಒಟ್ಟು ಎ.ಎನ್.ಬಿ.ಸಿ.ಯ ಮೊತ್ತ ರೂ. 30,102–32 ಲಕ್ಷಗಳಿಗೆ ಶೇ. 20.26% ರಷ್ಟಾಗುತ್ತದೆ.<br>(ii) ಸಾಲಾಖೈರಿಗೆ ನೀಡಿರುವ ಒಟ್ಟು ಮುಂಗಡದ ಶೇಕಡಾವಾರು ಪ್ರಮಾಣ<br>ಆದ್ಯತಾ ವಲಯದವರಿಗೆ ನೀಡಿರುವ ಸಾಲದ ಬಾಕಿಯು 31.3.2024 ಕ್ಕೆ ಒಟ್ಟು ಸಾಲದ ಶೇ. 32.20 ರಷ್ಟಿದೆ.<br>(iii) ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ.<br>ದಿ.31.03.2024ಕ್ಕೆ ದುರ್ಬಲ ವರ್ಗದವರಿಂದ ಬರಬೇಕಾದ ಸಾಲದ ಬಾಕಿ ರೂ. 1466.37 ಲಕ್ಷಗಳು, ಬ್ಯಾಂಕಿನ ಎ.ಎನ್.ಬಿ.ಸಿ.ಯ ಮೊತ್ತಕ್ಕೆ ಶೇ.4.87ರಷ್ಟಿದೆ.<br>(iv) ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ<br>ದಿ.31.03.2024ಕ್ಕೆ ದುರ್ಬಲ ವರ್ಗದವರಿಂದ ಬಾಕಿ ಇರುವ ಸಾಲಗಳು ಆದ್ಯತಾ ವಲಯದಿಂದ ಬಾಕಿ ಇರುವ ಸಾಲಗಳ ಶೇ. 24.03 ರಷ್ಟಿದೆ.<br>b) ಎಲ್ಲಾ ತರಹದ ಸಾಲ, ಮುಂಗಡ, ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ ಇತ್ಯಾದಿಗಳ ಮೇಲೆ (ವ್ಯಾಖ್ಯಾನ) ವಿವರಣೆ<br>ಈ ಮೇಲ್ಕಂಡಂತೆ ಆದ್ಯತಾ ವಲಯ ದುರ್ಬಲ ವರ್ಗಹಾಗೂ ಮೈಕ್ರೋ ಎಚಿಟರ್ ಪ್ರೈಸಸ್ ರವರಿಗೆ ನೀಡಿರುವ ಸಾಲ, ಬ್ಯಾಂಕಿನ ಸರಾಸರಿ ಎ.ಎನ್.ಬಿ.ಸಿ. ಮೊಬಲಗಿಗೆ ಕ್ರಮವಾಗಿ ಶೇ.60 ಶೇ.11.50 ಮತ್ತು ಶೇ.7.50 ಇರಬೇಕು. ಬ್ಯಾಂಕ್ ಸದರಿ ಮಿತಿಯನ್ನು ತಲುಪದ ಕಾರಣ ಭಾರತೀಯ ರಿಸರ್ವ್ ಬ್ಯಾಂಕಿನ ದಿ.10.05.2019ರ ಸೂಚನೆಯಂತೆ ದಿ.23.07.2023 ಮತ್ತು 02.02.2024 ರಂದು ರೂ.125 ಕೋಟಿಗಳ ಆದ್ಯತಾ ವಲಯ ಪ್ರಮಾಣ ಪತ್ರಗಳನ್ನು ಆರ್.ಬಿ.ಐ.ನ ಕುಬೇರ ಪೋರ್ಟಲ್‌ನಿಂದ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಮುಖಾಂತರ ಖರೀದಿಸಿದ್ದು, ತದನಂತರ ಬ್ಯಾಂಕಿನ ಆದ್ಯತಾ ವಲಯ ದುರ್ಬಲ ವರ್ಗ ಹಾಗೂ ಮೈಕ್ರೋ ಎಚಿಟರ್‌ಪ್ರೈಸಸ್‌ನ ಸಾಲದ ಪ್ರಮಾಣ ದಿ.31.03.2024ಕ್ಕೆ ಕ್ರಮವಾಗಿ ಸರಾಸರಿ ಎ.ಎನ್.ಬಿ.ಸಿ.ಯ ಮೊತ್ತ ರೂ. 24297.94 ಲಕ್ಷಗಳಿಗೆ ಶೇ.77.89, ಶೇ.13.84, ಶೇ.12.00ಗಳಷ್ಟಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿಗೊಳಿಸಿದ ಮಿತಿಯಲ್ಲಿರುತ್ತದೆ. |

**ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:**

[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನ್ಯತೆ, ಉಪನಿಯಮಕ್ಕೆ ವಿರುದ್ದವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇಇರುವ ಬಗ್ಗೆ, ಬಡ್ಡಿಆಕರಣೆ ಸರಿಇಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು.]

ಬ್ಯಾಂಕಿನಲ್ಲಿ 9 ಶಾಖೆಗಳಿದ್ದು, ಸದರಿ ಶಾಖೆಗಳ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಕಂಡುಬಂದ ನ್ಯೂನತಾಂಶಗಳು ಕೆಳಕಂಡಂತಿದೆ.

1) ಬ್ಯಾಂಕಿನ ನಿಯಮಾವಳಿ ಪ್ರಕಾರ. ಪ್ರತಿ ಮೂರು ವರ್ಷಕ್ಕೆ ಅಡಮಾನ ಆಸ್ತಿಗಳ ಮರು ಮೌಲ್ಯಮಾಪನ ಮಾಡಿಸತಕ್ಕದ್ದು, ಆದರೆ ಕೆಲವೊಂದು ಪ್ರಕರಣಗಳಲ್ಲಿ ಇಂತಹ ಮೌಲ್ಯಮಾಪನ ಮಾಡಿಸದೆ ಇರುವುದು ಕಂಡುಬಂದಿದೆ. ಆದ್ದರಿಂದ ಅನ್ವಯಿಸುವ ಪ್ರಕರಣಗಳಿಗೆ ಪ್ರತಿ ಮೂರು ವರ್ಷಕ್ಕೆಆಸ್ತಿಗಳ ಮರುಮೌಲ್ಯಮಾಪನವನ್ನು ಮಾಡಿಸುವುದು ಅವಶ್ಯಕವಾಗಿರುತ್ತದೆ.

2) ಸಾಲ ಮಂಜೂರಾದ ನಂತರ ಅಡಮಾನವಿಟ್ಟಿರುವ ಆಸ್ತಿಗಳನ್ನು ಕಾಲಕಾಲಕ್ಕೆ ಪರಿವೀಕ್ಷಿಸುವ ಪದ್ದತಿ ಇರುವುದಿಲ್ಲ ಆದ್ದರಿಂದ ಕ್ರಮಬದ್ದವಾಗಿ ಪಾಲಿಸಲು ಸೂಚಿಸಿದೆ.

3) ಅಡಮಾನ ಸಾಲಗಳನ್ನು ನೀಡಿದಾಗ ಕಟ್ಟಡ ವಿಮೆಯನ್ನು ಬ್ಯಾಂಕ್ ನೀಡುವ ಸಾಲದ ಮೊತ್ತಕ್ಕೆ ಮಾತ್ರ ಮಾಡಲಾಗುತ್ತಿದೆ. ಆದರೆ ಬ್ಯಾಂಕ್ ಅಡಮಾನ ಮಾಡಲಾದ ಕಟ್ಟಡಗಳ ಒಟ್ಟು ಮೌಲ್ಯದ ಮೇಲೆ ವಿಮೆಯನ್ನು ಮಾಡಿಸುವುದು ಅವಶ್ಯಕವಾಗಿದೆ.

4) ಬ್ಯಾಂಕಿನಲ್ಲಿ ಕಾಲಕಾಲಕ್ಕೆ ಸಾಲಗಳ ಬಾಕಿಗಳ ಬಗ್ಗೆ ಸಾಲಗಾರರ ಧೃಡೀಕರಣ ಪಡೆಯುವ ಪದ್ಧತಿ ಇರುವುದಿಲ್ಲ.

5) ಶಾಖೆಗಳಲ್ಲಿ ಸ್ಥಿರಾಸ್ತಿ ಆಸ್ತಿಯನ್ನು ಅಡಮಾನ ಮಾಡಿಕೊಂಡು ಸಾಲಗಳನ್ನು ನೀಡಲಾಗುತ್ತಿದೆ. ಸದರಿ ಸಾಲಗಳನ್ನು ಮಂಜೂರು ಮಾಡುವಾಗ ಮಾತ್ರ ಸದರಿ ಆಸ್ತಿಗಳ ಇಸಿ, ಖಾತಾ ದೃಡೀಕರಣ/ಆಸ್ತಿ ಖಾತಾ ಪತ್ರ ಮತ್ತು ತೆರಿಗೆ ಪಾವತಿ ರಸೀದಿಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ. ಆದರೆ ಸದರಿ ಆಸ್ತಿಗಳ ಸಂಬಂಧ ಕೆಲವೊಂದು ಪ್ರಕರಣಗಳಲ್ಲಿ ಪ್ರತೀ ವರ್ಷವೂ ಇ.ಸಿ, ಖಾತಾ ದೃಡೀಕರಣ/ಆಸ್ತಿ ಖಾತಾ ಪತ್ರ ಮತ್ತು ತೆರಿಗೆ ಪಾವತಿ ರಸೀದಿಯನ್ನು ಪಡೆಯುವ ಪದ್ದತಿ ಇರುವುದಿಲ್ಲ. ಬ್ಯಾಂಕಿನ ಆಂತರಿಕ ಹತೋಟಿ ದೃಷ್ಠಿಯಿಂದ ಕಾಲ ಕಾಲಕ್ಕೆ ಇವುಗಳನ್ನು ಪಡೆಯುವುದು ಅತ್ಯವಶ್ಯಕವಾಗಿರುತ್ತದೆ.

6)ಸಾಲಗಳನ್ನು ಮಂಜೂರು ಮಾಡುವಾಗ ಸಿಬಿಲ್ ವರದಿಯನ್ನು ಪಡೆಯಲಾಗುತ್ತಿದೆ ಆದರೆ ಅದೇ ಸಾಲಗಾರರಿಗೆ ಹೆಚ್ಚುವರಿ ಸಾಲವನ್ನು ವಿತರಿಸುವಾಗ ಸಿಬಿಲ್ ಪುನಃ ಪಡೆದು ಪರಿಶೀಲಿಸಲಾಗುತ್ತಿಲ್ಲ. ಎಲ್ಲಾ ರೀತಿಯ ಸಾಲಗಳನ್ನು ಮಂಜೂರು ಮಾಡುವಾಗ ಮತ್ತು ಹೆಚ್ಚುವರಿ ಸಾಲಗಳನ್ನು ಮಂಜೂರು ಮಾಡುವಾಗ ಸಿ.ಬಿ.ಲ್ ವರದಿಯನ್ನು ಪಡೆಯುವುದು ಅತ್ಯಗತ್ಯವಾಗಿದೆ.

7) ಬ್ಯಾಂಕಿನಿಂದ ನೀಡಲಾಗುವ ವ್ಯವಹಾರ ಸುಧಾರಣೆ ಸಾಲ (Business improvement loan), ಮೀರಳತೆ ಸಾಲ ಮತ್ತು ನಗದುದ್ದರಿ ಸಾಲಗಳಿಗೆ ಲೆಕ್ಕಪರಿಶೋಧಕರಿಂದ ಪ್ರಮಾಣಿತಗೊಂಡ ಆರ್ಥಿಕ ಹಣಕಾಸು ತಃಖ್ತೆಗಳನ್ನು ಕೆಲವೊಂದು ಪ್ರಕರಣಗಳಲ್ಲಿ ಪಡೆದಿರುವುದಿಲ್ಲ.

8) ಬ್ಯಾಂಕಿನಲ್ಲಿ ಕೆಲವೊಂದು ಸಾಲ ಮಂಜೂರು ಮಾಡುವಾಗ ಪಡೆಯುವ ಸಿಬಿಲ್ ವರದಿಯಲ್ಲಿ ಸಿಬಿಲ್ ಅಂಕಗಳು 700ಕ್ಕಿಂತ ಕಡಿಮೆ ಇರುತ್ತದೆ ಮತ್ತು ಸಿಬಿಲ್ ವರದಿಯಲ್ಲಿ ಸಾಲಗಾರರ ಅವಧಿಮೀರಿದ ಸಾಲವನ್ನು ಹೊಂದಿದ್ದರು ಸಾಲವನ್ನು ಮಂಜೂರು ಮಾಡಲಾಗುತ್ತಿದೆ.

9) ಆರ್‌ಬಿಐ ಸುತ್ತೋಲೆ UBD.BPD. (PCB). MC.NO.1 /13.05.000/2013–14 DTD.01.07.2013– Master Circular – Exposure Norms and Statutory/ Other Restrictions – UCBs ರನ್ವಯ ರೂ.10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ದ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ

ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆ ಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.

32. **ನಾನ್ ಬ್ಯಾಂಕಿಂಗ್ ಆಸ್ತಿಗಳು:**
ವರದಿ ಸಾಲಿನ ಅಂತ್ಯಕ್ಕೆ ಯಾವುದೇ ಬ್ಯಾಂಕೇತರ ಆಸ್ತಿಗಳನ್ನು ಹೊಂದಿರುವುದಿಲ್ಲ.

33. **ಆಸ್ತಿ ಜವಾಬ್ದಾರಿ ನಿರ್ವಹಣೆ**

i) ಈ ಸಂಬಂಧ ಜಾರಿಯಲ್ಲಿರುವ ಕಾರ್ಯನೀತಿ ಮತ್ತು ಆರ್.ಬಿ.ಐ. ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ.
ಬ್ಯಾಂಕಿನ ಆಡಳಿತ ಮಂಡಳಿಯು, ಬ್ಯಾಂಕಿನ ಉಪನಿಯಮ, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, ಹಾಗು ಆರ್.ಬಿ.ಐ.ನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ.

ii) ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆ ಕುರಿತು
ಬ್ಯಾಂಕು ಶೇ.100% ಗಣಕೀಕೃತವಾಗಿದ್ದು, ಲೆಕ್ಕಪತ್ರಗಳನ್ನು ಬಾಕಿ ಉಳಿಯದಂತೆ ಸಿದ್ದಪಡಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ, ಯಾವುದೇ ಮಾಹಿತಿ ತಕ್ಷಣ ಲಭ್ಯವಾಗುತ್ತಿದೆ.

iii) ನಿಯತಕಾಲಿಕವಾಗಿ ದ್ರವ್ಯಾಸ್ಥಿ ನಿರ್ವಹಣೆಯಾಗುತ್ತಿರುವ ಬಗ್ಗೆ.
ಆರ್.ಬಿ.ಐ.ನ ಸೂಚನೆಗಳನ್ವಯ ದ್ರವ್ಯಾಸ್ಥಿಯನ್ನು ಯಾವುದೇ ಲೋಪಗಳಾಗದಂತೆ ನಿರ್ವಹಿಸಲಾಗುತ್ತಿದೆ.

34 **ಡೆಡ್‌ಸ್ಟಾಕು : ವಿವರಣೆ**
ದಿ. 31.03.2024ಕ್ಕೆ ಬ್ಯಾಂಕಿನಲ್ಲಿ ಒಟ್ಟು ಚರಾಸ್ತಿಗಳ ವಿವರ (ಸವಕಳಿ ತೆಗೆದ ನಂತರ)

| | | |
|---|---|---|
| 1) ಪೀಠೋಪಕರಣಗಳು | – | 1,08,23,330/– |
| 2) ಗಣಕಯಂತ್ರಗಳು | – | 3,55,123/– |
| ಒಟ್ಟು | – | 1,11,78,453/– |

ಪೀಠೋಪಕರಣಗಳ ಮೌಲ್ಯದಲ್ಲಿ ವಿದ್ಯುತ್ ಉಪಕರಣಗಳ ಮೌಲ್ಯ ರೂ.13,32,446/–ಗಳು ಇರುತ್ತದೆ.

35 **ಕಟ್ಟಡ– ವಿವರಣೆ :**

| ಎ ಸ್ಥಿರಾಸ್ತಿ | ವಿವರ | ವಿಸ್ತೀರ್ಣ | ಮೊತ್ತ ರೂ. |
|---|---|---|---|
| **1 <u>ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು</u>** | | | |
| ಅ) ನಂ.106. ಆರ್.ವಿ.ರಸ್ತೆ, ವಿ.ವಿ.ಪುರಂ ಬೆಂಗಳೂರು – 560 004 | ಕಟ್ಟಡ | 40*80 ಚ.ಅಡಿ | 95,51,393 |
| ಆ) ನಂ.188. ಆರ್.ವಿ.ರಸ್ತೆ, ಮಾವಳ್ಳಿ, ಬೆಂಗಳೂರು – 560 004 | ಕಟ್ಟಡ | 2381 ಚ.ಅಡಿ | 1,43,89,507 |
| ಒಟ್ಟು | | | 2,39,40,900 |

| | | |
|---|---|---|
| | 1) ಸ್ಥಿರಾಸ್ತಿಯಲ್ಲಿ 2 ನಿವೇಶನಗಳ ಮೂಲ ಬೆಲೆ ರೂ.1,77,02,166/–<br>2) ದಿನಾಂಕ 01.04.2023ರಲ್ಲಿ ಕಟ್ಟಡಗಳ ಪುಸ್ತಕ ಬೆಲೆ ರೂ. 62,38,734/–<br>3) 2023–24 ರಲ್ಲಿ ಕಟ್ಟಡ ಖಾತೆಗೆ ಜಮಾ ಆಗಿದ್ದು ರೂ. –<br>4) 2023–24ಕ್ಕೆ ಶೇ.5%ರಂತೆ ಸವಕಳಿ (–)ರೂ.3,11,940/– ರೂ.59,26,794/–<br>**ದಿನಾಂಕ 31.03.2024ಕ್ಕೆ ಸ್ತಿರಾಸ್ತಿ ಬೆಲೆ ಒಟ್ಟುರೂ.2,36,28,960/–** | |
| 36 | ಬಿಲ್ಸ್, ಡಿಸ್ಕೌಂಟ್, ಕ್ಲಿಯರಿಂಗ್, ಡ್ರಾಫ್ಟ್ ಇತ್ಯಾದಿಗಳು | ವರ್ಷಾಂತ್ಯಕ್ಕೆ ಯಾವುದೇ ಬಾಕಿ ಇಲ್ಲ. |
| 37 | ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಪಾವತಿಸಿದ ಬಡ್ಡಿ ಮತ್ತು ಗಳಿಸಿದ ಬಡ್ಡಿ ವಿವರಗಳು ಕೆಳಕಂಡಂತಿವೆ.<br>1) ಸರಾಸರಿ ಠೇವಣಿಗಳು ರೂ.35,007.20 ಲಕ್ಷ.<br>ಬಡ್ಡಿ ಪಾವತಿ ರೂ.2,082.87 ಲಕ್ಷ.<br>ಠೇವಣಿಗಳ ವೆಚ್ಚದ ಪ್ರಮಾಣ ಶೇ. 5.95<br>2) ಸಾಲಗಳ ಮತ್ತು ಹೂಡಿಕೆಗಳ ಸರಾಸರಿ ಮೊಬಲಗು ರೂ.41,665.82 ಲಕ್ಷ<br>ಬಡ್ಡಿ ಗಳಿಕೆ ರೂ.4,182.59 ಲಕ್ಷ.<br>ಗಳಿಕೆಯ ಪ್ರಮಾಣ ಶೇ. 10.04<br>ನಿವ್ವಳ ಗಳಿಕೆ ಶೇ.5.95 (–) 10.04 = ಶೇ.4.09 |
| 38 | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ? | ತಾಳೆ ಹೊಂದುತ್ತದೆ |
| 39 | ಆಂತರಿಕ ಹತೋಟಿ<br>a) ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ ಕೈಪಿಡಿಗಳ ಬಗ್ಗೆ<br>b) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ | ಪಾಲಿಸಲಾಗುತ್ತಿದೆ. |

| | | |
|---|---|---|
| | (i) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಲೆಕ್ಕಪತ್ರಗಳನ್ನು ಶೇ.100% ರಷ್ಟು ಗಣಕೀಕೃತಗೊಳಿಸಿದ್ದು, ಲೆಕ್ಕಪತ್ರಗಳನ್ನು ಆಗಿಂದಾಗ್ಗೆ ಸಮನ್ವಯ ಮಾಡಿಕೊಳ್ಳಲಾಗುತ್ತಿದೆ. |
| | (ii) ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ | ಹಿಂಬಾಲಿಕೆ ಕ್ರಮ ಇಡಲಾಗಿದೆ. |
| | c) **ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ** | |
| | i) ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ ಕ್ರಮದ ಬಗ್ಗೆ ವಿವರಣೆ. | ಬ್ಯಾಂಕಿನ ಶಾಖೆಗಳಲ್ಲಿ ಲೆಕ್ಕಪತ್ರಗಳನ್ನು ಶೇ.100% ರಷ್ಟು ಗಣಕೀಕೃತಗೊಳಿಸಲಾಗಿದೆ. |
| | ii) ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ಯಾವುದೇ ಅಸಾಮಾನ್ಯ ಎಂಟ್ರಿಗಳು ಇರುವುದಿಲ್ಲ. |
| | iii) ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ | ಬ್ಯಾಂಕಿನಲ್ಲಿ ಲೆಕ್ಕಪತ್ರಗಳನ್ನು ಸಮನ್ವಯ ಮಾಡಿಕೊಳ್ಳುವ ಪದ್ದತಿಯಿದ್ದು, ಅದರಂತೆ ಹೆಚ್ಚಿನ ಮೊತ್ತದ ಹಾಗು ಧೀರ್ಘಕಾಲದ ಬಾಕಿಗಳನ್ನು ಗುರುತಿಸಲಾಗುತ್ತಿದೆ. |
| | iv) ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಎಲ್ಲಾ ಬ್ಯಾಂಕ್ ಲೆಕ್ಕಗಳನ್ನು, ಹೊಂದಾಣಿಕೆ ಲೆಕ್ಕಗಳನ್ನು ಆಗಿಂದಾಗ್ಗೆ ಸಮನ್ವಯ ಮಾಡಿಕೊಳ್ಳಲಾಗುತ್ತಿದೆ. |
| | v) ಹಳೆಯ ಬಾಕಿಯಲ್ಲಿರುವ ನಮೂದುಗಳ ಬಗ್ಗೆ ಆರ್.ಬಿ.ಐ. ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ. | ಬ್ಯಾಂಕು ಆರ್.ಬಿ.ಐ. ಸೂಚನೆಗಳನ್ನು ಪಾಲಿಸಲಾಗುತ್ತಿದೆ. |
| | **d) ಶಾಖೆಗಳ ಪರಿವೀಕ್ಷಣೆ:** | |
| | i) ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ | ಬ್ಯಾಂಕಿನಲ್ಲಿ ಅಂತರಿಕ ಲೆಕ್ಕಪರಿಶೋಧನೆ ವ್ಯವಸ್ಥೆಯಿದ್ದು, ಆಂತರಿಕ ಲೆಕ್ಕಪರಿಶೋಧನೆ ನಡೆಯುತ್ತಿದೆ. ಆಂತರಿಕ |

| | | |
|---|---|---|
| | ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ) ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ | ಲೆಕ್ಕಪರಿಶೋಧನಾ ವರದಿಗಳನ್ನು ತ್ರೈಮಾಸಿಕವಾಗಿ ನೀಡುತ್ತಿದ್ದು, ಬ್ಯಾಂಕಿನ ಲೆಕ್ಕಪರಿಶೋಧನಾ ಸಮಿತಿಯು ತ್ರೈಮಾಸಿಕವಾಗಿ ಪರಿಶೀಲಿಸುತ್ತಿದ್ದು, ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗುತ್ತಿದೆ. |
| | ii) ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ | ಆಂತರಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಹಿಂಬಾಲಿಕೆ ಮತ್ತು ಅನುಪಾಲನಾ ಕ್ರಮವಿಡಲಾಗುತ್ತಿದೆ. |
| | e) **ಜಾಗರೂಕತೆ**<br>i. ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. | ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |
| | ii. ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | ಅನ್ವಯಿಸುವುದಿಲ್ಲ |
| | iii. ಅಮಾನತ್ತು ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ | ಆಗಿಂದಾಗ್ಗೆ ಸಮನ್ವಯ ಮಾಡಿಕೊಳ್ಳಲಾಗುತ್ತಿದೆ ಮತ್ತು ಲೆಕ್ಕಗಳನ್ನು ಹೊಂದಾಣಿಕೆ ಮಾಡಿ ಕೊಳ್ಳಲು ಅಗತ್ಯ ಕ್ರಮವಿಡಲಾಗುತ್ತಿದೆ. |
| | iv. ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಪರಿಶೀಲಿಸಲಾಗಿದೆ |
| 40. | ಆಡಳಿತ /ಸಿಬ್ಬಂದಿ | ದಿ.25.01.2020 ರಂದು ನಡೆದ ಬ್ಯಾಂಕಿನ ಚುನಾವಣೆಯಲ್ಲಿ 13 ಜನ ನಿರ್ದೇಶಕರು ಚುನಾಯಿತರಾಗಿದ್ದು, ಇಬ್ಬರು ವೃತ್ತಿಪರ ನಿರ್ದೇಶಕರು ಸೇರಿ 15 ಜನ ನಿರ್ದೇಶಕರಿರುತ್ತಾರೆ. |

| | | |
|---|---|---|
| | | ಬ್ಯಾಂಕಿಗೆ ಒಟ್ಟು 160 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 99 ಹುದ್ದೆಗಳು ಭರ್ತಿಯಾಗಿವೆ. ಖಾಲಿ ಹುದ್ದೆಗಳು 61. ಇದರಲ್ಲಿ 1 ಪ್ರಧಾನ ವ್ಯವಸ್ಥಾಪಕರ ಹುದ್ದೆ, 1 ಉಪ ಪ್ರಧಾನ ವ್ಯವಸ್ಥಾಪಕರ ಹುದ್ದೆ, 6 ವ್ಯವಸ್ಥಾಪಕರ ಹುದ್ದೆ ಹಾಗೂ ಇನ್ನಿತರೆ 53 ಹುದ್ದೆಗಳು ಖಾಲಿ ಇರುತ್ತದೆ. |
| 41. | ಆಕಸ್ಮಿಕ ವೆಚ್ಚಗಳು | ಯಾವುದು ಇರುವುದಿಲ್ಲ. |
| 42. | ಬೋನಸ್ಸು/ ಎಕ್ಸ್‌ಗ್ರೇಷಿಯಾ ಇತ್ಯಾದಿ | ಬೋನಸ್ ನೀಡಿರುವುದಿಲ್ಲ. |
| 43. | ಲಾಭ ವಿಲೇವಾರಿ | ಬ್ಯಾಂಕು 2022-23ರಲ್ಲಿ ನಷ್ಟ ಹೊಂದಿರುವುದರಿಂದ ಲಾಭ ವಿಲೇವಾರಿ ಅನ್ವಯಿಸುವುದಿಲ್ಲ. |
| 44. | **ಡಿವಿಡೆಂಡ್:**<br>ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಶೇಕಡಾವಾರು ಡಿವಿಡೆಂಡ್‌ನ್ನು ಘೋಷಿಸಲಾಗಿದೆಯೇ? | ಹಿಂದಿನ ಸಾಲಿನಲ್ಲಿ ಬ್ಯಾಂಕು ನಷ್ಟದಲ್ಲಿದ್ದರಿಂದ ಡಿವಿಡೆಂಡ್‌ನ್ನು ನೀಡಿರುವುದಿಲ್ಲ. |
| 45. | **ಸಭೆಗಳು**<br>a) ಕೊನೆಯ ಸರ್ವ ಸದಸ್ಯರ ಮಹಾ ಸಭೆ ನಡೆದ ದಿನಾಂಕ ಹಾಗೂ ಅದು ಯಾವ ಸಾಲಿಗೆ ಸಂಬಂಧಿಸಿದ್ದು, ಎಂಬುದರ ಬಗ್ಗೆ | ದಿ. 23.09.2023 ರಂದು 2022-23ನೇ ಸಾಲಿಗೆ ಮಹಾಸಭೆ ನಡೆಸಲಾಗಿದೆ. |
| | b) ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕರ ಮಂಡಳಿ ನಡೆಸಿದ ಸಭೆಗಳ ಸಂಖ್ಯೆ | 2023-24ನೇ ಸಾಲಿನಲ್ಲಿ 16 ಆಡಳಿತ ಮಂಡಳಿ ಸಭೆಗಳು ಮತ್ತು 53 ಉಪ ಸಮಿತಿ ಸಭೆಗಳು ನಡೆದಿರುತ್ತವೆ. |
| | c) ಆಡಳಿತ ಮಂಡಳಿ ಮತ್ತು ಪ್ರಧಾನ ಕಾರ್ಯ ನಿರ್ವಹಣಾಧಿಕಾರಿಯ ಕಾರ್ಯಕ್ಷಮತೆಯ ಬಗ್ಗೆ ಸಮಗ್ರ ವಿವರಣೆ. | ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬ್ಯಾಂಕಿನ ಎಲ್ಲಾ ವಲಯಗಳ ಬಗ್ಗೆ ಸೂಕ್ತ ಜ್ಞಾನ ಹೊಂದಿದ್ದು, ಹೊಂದಾಣಿಕೆಯೊಂದಿಗೆ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. |

| | | |
|---|---|---|
| 46 | **ತನಿಖೆ / ಹಿಂದಿನ ತನಿಖೆಯ ದಿನಾಂಕ**<br>a) ಆರ್.ಬಿ.ಐ ಯಿಂದ | ಭಾರತೀಯ ರಿಸರ್ವ್ ಬ್ಯಾಂಕಿನಿಂದ 2022-23ನೇ ಸಾಲಿನ ತನಿಖೆ ನಡೆದಿದ್ದು, ದಿನಾಂಕ 20.11.2023 ರಂದು ವರದಿ ನೀಡಿರುತ್ತಾರೆ. ಸದರಿ ವರದಿಗೆ ಬ್ಯಾಂಕ್ ದಿನಾಂಕ 28.12.2023ರಂದು ಅನುಪಾಲನಾ ವರದಿಯನ್ನು ಸಲ್ಲಿಸಿದೆ. ಸದರಿ ಅನುಪಾಲನಾ ವರದಿಗೆ ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 03.05.2024ರಂದು ಪತ್ರ ಮುಖೇನ ಮತ್ತೊಮ್ಮೆ ಕೆಲವೊಂದು ಅಂಶಗಳಿಗೆ ಸಮಜಾಯಿಷಿ ನೀಡಲು ತಿಳಿಸಿದೆ. ಬ್ಯಾಂಕ್ ದಿನಾಂಕ 17.05.2024ರಂದು ಸಮಜಾಯಿಷಿಯನ್ನು ಸಲ್ಲಿಸಿದೆ. ವರದಿಗಳು ಲಭ್ಯವಿದೆ. |
| 47 | **ಶಾಖೆಗಳ ಬಗ್ಗೆ ವಿವರಣೆ:** | |
| | ಎ) ಆರ್ಥಿಕ ಸ್ಥಿತಿ ಮತ್ತು ಶಾಖೆಗಳ ಸ್ವಾವಲಂಬನೆ ಬಗ್ಗೆ | ಬ್ಯಾಂಕು 9 ಶಾಖೆಗಳನ್ನು ಹೊಂದಿದ್ದು, ಎಲ್ಲಾ ಶಾಖೆಗಳು ಲಾಭದಲ್ಲಿ ನಡೆಯುತ್ತಿವೆ. |
| | ಬಿ) ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ? | ವಿಳಂಬವಿಲ್ಲದೆ ಸಲ್ಲಿಸಲಾಗುತ್ತಿದೆ. |
| | ಸಿ) ಹೊಂದಾಣಿಕೆ ಲೆಕ್ಕಗಳ ಬಗ್ಗೆ – "ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ"– ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತು ಲೆಕ್ಕಗಳ ಸ್ಥಿತಿಯ ಬಗ್ಗೆ | ಕೇಂದ್ರ ಮತ್ತು ಶಾಖೆಗಳ ಲೆಕ್ಕಗಳನ್ನು ಸಮನ್ವಯ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ. |
| 48 | **ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ (Automation & Computerisation)** | |
| | i) ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಕಾರ್ಯದಲ್ಲಿನ ಪ್ರಗತಿ. | ಬ್ಯಾಂಕು ಶೇ.100%ರಷ್ಟು ಗಣಕೀಕೃತಗೊಂಡಿದೆ. |
| | ii) ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳ ಕುರಿತು ವಿಮರ್ಶೆ | ಯಾವುದೂ ಇರುವುದಿಲ್ಲ. |

| | | |
|---|---|---|
| | iii) ಗಣಕೀಕರಣಗೊಳಿಸಿರುವ ಶಾಖೆಗಳ ಸಂಖ್ಯೆ ಹಾಗೂ ಗಣಕೀಕರಣಗೊಂಡ ಪ್ರಮಾಣ | ಶೇ.100% |
| | iv) ತುರ್ತು ಪರಿಸ್ಥಿತಿಯಲ್ಲಿ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸುವ ಬಗ್ಗೆ ಪಾಲಿಸುತ್ತಿರುವ ನಿಯಮ (Backups/ Offsite storage) | ಬ್ಯಾಂಕಿನಲ್ಲಿ ತುರ್ತು ಪರಿಸ್ಥಿತಿಯನ್ನು ನಿರ್ವಹಿಸಲು ಬ್ಯಾಕ್‌ಅಪ್ ವ್ಯವಸ್ಥೆಯನ್ನು ಹೊಂದಿದೆ. |
| | v) E.D.P. ಲೆಕ್ಕಪರಿಶೋಧನೆ ಜಾರಿಯಲ್ಲಿರುವ ಬಗ್ಗೆ ಮತ್ತು ಅಳವಡಿಕೆ ಪ್ರಮಾಣ. | ಪ್ರಸಕ್ತ ಸಾಲಿನ ಅಂತ್ಯದ ವರೆಗೆ ಇ.ಡಿ.ಪಿ. ಲೆಕ್ಕ ಪರಿಶೋಧನೆ ಆಗಿರುತ್ತದೆ. ಪ್ರಸಕ್ತ ದಿನಾಂಕಕ್ಕೆ ವರದಿ ನೀಡಿರುವುದಿಲ್ಲ. |
| | vi) ಇ–ಬ್ಯಾಂಕಿಂಗ್: ಜಾರಿಯಲ್ಲಿರುವ ಮಾರ್ಗಸೂಚಿಗಳು, ಈ ಕುರಿತು ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ತಾಂತ್ರಿಕತೆಯನ್ನು ಅಪ್‌ಡೇಟ್ ಮಾಡುವ ಬಗ್ಗೆ, ವಿಮರ್ಶೆಯ ವಿಧಾನ ಮತ್ತು ಲೆಕ್ಕಪರಿಶೋಧನೆ ಬಗ್ಗೆ. | ಈ ವ್ಯವಸ್ಥೆ ಇರುವುದಿಲ್ಲ. |
| | vii) ಗಣಕೀಕರಣ ಮತ್ತು ಸ್ವಯಂ ಚಾಲಿತ ವ್ಯವಸ್ಥೆ ಬಗ್ಗೆ ಸಲಹೆ ಸೂಚನೆಗಳು, ಯಾವುದಾದರೂ ಇದ್ದಲ್ಲಿ. | ಬ್ಯಾಂಕು ಪೂರ್ಣವಾಗಿ ಗಣಕೀಕರಣಗೊಂಡಿದೆ. ಪ್ರಸಕ್ತ ಸಾಲಿಗೆ ಇ.ಡಿ.ಪಿ. / ಐ.ಎಸ್. ಲೆಕ್ಕ ಪರಿಶೋಧನೆ ನಡೆದಿರುತ್ತದೆ. ಪ್ರಸ್ತುತ ದಿನಾಂಕಕ್ಕೆ ವರದಿಯನ್ನು ನೀಡಿರುವುದಿಲ್ಲ.<br><br>ಬ್ಯಾಂಕು ಅಳವಡಿಸಿರುವ ತಂತ್ರಾಂಶದಲ್ಲಿ ಒಬ್ಬನೇ ಸಾಲಗಾರ ಒಂದಕ್ಕಿಂತ ಹೆಚ್ಚು ಸಾಲಗಳನ್ನು ಪಡೆದಿರುವ ಸಂದರ್ಭಗಳಲ್ಲಿ ಅನುತ್ಪಾದಕ ಆಸ್ತಿಯು ಗುರುತಿಸುವಿಕೆಯು ಸಿಸ್ಟಮ್‌ನಲ್ಲಿ (ಸಾಫ್ಟ್‌ವೇರ್) ತನ್ನಿಂತಾನೇ ಆಗುತ್ತಿಲ್ಲ. ಆದ್ದರಿಂದ ಅನುತ್ಪಾದಕ ಆಸ್ತಿಯನ್ನು ಗುರುತಿಸದೇ ಇರುವ ಸಂಭವವಿರುತ್ತದೆ ಹಾಗೂ ಮಾನವ ಹಸ್ತಕ್ಷೇಪದಿಂದ ತಪ್ಪುಗಳೂ ಸಹ ಸಂಭವಿಸಬಹುದು. |

| | | |
|---|---|---|
| 49. | **ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ಬಗ್ಗೆ ವಿಶ್ಲೇಷಣೆ** | |
| | (A) *ಲಾಭದಾಯಕತ್ವ:* | |
| | a. ಹಿಂದಿನ ಸಾಲಿಗಿಂತ ವರದಿ ಸಾಲಿನಲ್ಲಿ ಜಮಾ–ಖರ್ಚಿನ ಪ್ರಮುಖ ಅಂಶಗಳಲ್ಲಿ ಆಗಿರತಕ್ಕ ಏರಿಳಿತಗಳ ಬಗ್ಗೆ ಮುಖ್ಯ ಅನುಪಾತ ಗಳೊಂದಿಗೆ ವಿಶ್ಲೆಷಣೆ. | ಯಾವುದೇ ಗಮನಾರ್ಹವಾದ ಏರಿಳಿತಗಳು ಇರುವುದಿಲ್ಲ. |
| | b. ಲೆಕ್ಕಗಳ ನಿರ್ವಹಣೆಯಲ್ಲಿನ / ಕಾರ್ಯನೀತಿಯಲ್ಲಿನ ಬದಲಾವಣೆ ಯಿಂದಾಗಿ ವರದಿ ಸಾಲಿನ ಲಾಭ–ನಷ್ಟದ ಮೇಲಾದ ಪರಿಣಾಮಗಳ ಬಗ್ಗೆ | ಲೆಕ್ಕಪತ್ರಗಳ ನಿರ್ವಹಣೆಯಲ್ಲಿ, ಯಾವುದೇ ಬದಲಾವಣೆ ಇಲ್ಲ. |
| | (B) ಆಸ್ತಿ– ಜವಾಬ್ದಾರಿ ತ:ಖ್ತೆಯಲ್ಲಿ ಈ ಮೇಲೆ ವಿವರಿಸದೇ ಬಾಕಿ ಉಳಿದ ಎಲ್ಲಾ ಅಂಶಗಳ ಬಗ್ಗೆ ವಿಶ್ಲೇಷಣೆ. | ಯಾವುದೂ ಇಲ್ಲ. |
| 50 | **ಆಂತರಿಕ ವ್ಯವಸ್ಥೆ ಮತ್ತು ನಿಯಂತ್ರಣ (Systems & Control)** | |
| | i) ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ / ಗಣಕಯಂತ್ರ ಮತ್ತು Software ಗಳ E.D.P. ಲೆಕ್ಕಪರಿಶೋಧನೆ ಹಾಗೂ ಪರಿವೀಕ್ಷಣೆ ಬಗ್ಗೆ ಬ್ಯಾಂಕು ಹೊಂದಿರುವ ವ್ಯವಸ್ಥೆ ಮತ್ತು ನಿಯಂತ್ರಣ. | ಬ್ಯಾಂಕು ನೇಮಿಸಿದ ಆಂತರಿಕ ಲೆಕ್ಕಪರಿಶೋಧಕರು, ಶಾಸನಬದ್ಧ ಲೆಕ್ಕಪರಿಶೋಧಕರು, ಇ.ಡಿ.ಪಿ. ಲೆಕ್ಕಪರಿಶೋಧಕರು ತಮ್ಮ ವ್ಯಾಪ್ತಿಯ ಕಾರ್ಯವನ್ನು ಪೂರೈಸಿ ವರದಿ ಸಲ್ಲಿಸಲಾಗುತ್ತಿದೆ. |
| | ii) ಎಂ.ಐ.ಎಸ್. ಅಸ್ಥಿತ್ವದಲ್ಲಿರುವ ಬಗ್ಗೆ. ಮಾಹಿತಿಗಳ ಕ್ರೋಢೀಕರಣ ಮತ್ತು ನಿಖರತೆ ಬಗ್ಗೆ. | ಬ್ಯಾಂಕಿನಲ್ಲಿ ಎಂ.ಐ.ಎಸ್. ಅಸ್ತಿತ್ವದಲ್ಲಿಲ್ಲ. ಆದರೂ ಮಾಹಿತಿಗಳ ಕ್ರೋಢೀಕರಣ ಮತ್ತು ಅವುಗಳ ನಿಖರತೆ ಬಗ್ಗೆ ಯಾವುದೇ ಕೊರತೆ ಇರುವುದಿಲ್ಲ. |

| | | |
|---|---|---|
| | iii) ಆರ್.ಬಿ.ಐ. ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿದ ಮಾಹಿತಿಗಳ ನಂಬಲಾರ್ಹತೆ ಬಗ್ಗೆ ಜಾರಿಯಲ್ಲಿರುವ ನಿಯಮಗಳು. | ಬ್ಯಾಂಕಿನಲ್ಲಿ ಶಾಸನಬದ್ಧ ಲೆಕ್ಕಪರಿಶೋಧನೆ ಹಾಗು ಆಂತರಿಕ ಲೆಕ್ಕಪರಿಶೋಧನೆ ಸಂಬಂಧ ಕಾಲಕಾಲಕ್ಕೆ ಅಗತ್ಯ ಕ್ರಮವಿಡಲಾಗುತ್ತಿದೆ. |
| 51. | **ಇತರೆ ವಿಷಯಗಳು:** | |
| | i) ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಆಗಿರುವ ಬದಲಾವಣೆ ಬಗ್ಗೆ ಟಿಪ್ಪಣಿ. | ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಹಿಂದಿನಿಂದ ಮುಂದುವರೆಸಿದ್ದ ನೀತಿ ನಿಯಮಗಳನ್ನು ಅನುಸರಿಸಿದ್ದು, ಯಾವುದೇ ಬದಲಾವಣೆ ಇಲ್ಲ. |
| | ii) Under writing ಹಾಗೂ ನಿಷ್ಪನ್ನ (Derivatives) ಇವುಗಳ ನಿರ್ವಹಣೆ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮಗಳು. | ಬ್ಯಾಂಕು ಎಲ್ಲಾ ಲೆಕ್ಕಪತ್ರಗಳನ್ನು ಗಣಕೀಕರಣ ಗೊಳಿಸಿದ್ದು, ಇದು ಉದ್ಭವಿಸುತ್ತಿಲ್ಲ. |
| | iii) ಆದಾಯ ತೆರಿಗೆ, ಬಡ್ಡಿ ತೆರಿಗೆ, ಗ್ರಾಚ್ಯುಟಿ, ಪಿಂಚಣಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿದೆ. |
| | iv) ಬ್ಯಾಂಕಿನ ಆಸ್ತಿ–ಜವಾಬ್ದಾರಿ ತ:ಖ್ತೆ ಖಾತೆಗಳನ್ನು ಹೊರತುಪಡಿಸಿದ ಕ್ಲೇಮ್‌ಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | ಎಲ್ಲಾ ರೀತಿಯ ಅಗತ್ಯ ಪ್ರಮಾಣದ ಅವಕಾಶಗಳನ್ನು ಕಲ್ಪಿಸಿದೆ. |
| | v) ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತ:ಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. | ಯಾವುದೇ ಗಮನಾರ್ಹವಾದ ಅಂಶಗಳು ಕಂಡುಬಂದಿಲ್ಲ. |

| | | |
|---|---|---|
| | vi) ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ – ಸಮನ್ವಯಕ್ಕೊಳಪಟ್ಟಿರುವ ತ:ಖ್ತೆಗಳ ಬಗ್ಗೆ ವಿವರಣೆ. | ಬ್ಯಾಂಕು ಶಿಲ್ಕುಗಳು ಸಮನ್ವಯ ಪಟ್ಟಿಗೆ ಒಳಪಟ್ಟು, ಸದರಿ ಬ್ಯಾಂಕುಗಳು ನೀಡಿದ ದೃಢೀಕರಣಕ್ಕೆ ತಾಳೆ ಇರುತ್ತದೆ. |
| | vii) NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್ವರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ಧತಿ ಬಗ್ಗೆ | ಈ ಬ್ಯಾಂಕಿಗೆ ಅನ್ವಯಿಸುವುದಿಲ್ಲ. |
| | viii) CRAR ನ ಬಗ್ಗೆ ವಿಶ್ಲೇಷಣೆ | ಬ್ಯಾಂಕು ಪ್ರಸಕ್ತ ಸಾಲಿಗೆ ಶೇ.26.61%ರಷ್ಟು ಸಿ.ಆರ್.ಎ.ಆರ್. ಹೊಂದಿದೆ. |
| | (i) ಹಿಂದಿನ ಸಾಲಿನ ಲಾಭದ ಶೇ.1% ಕ್ಕಿಂತ ಹೆಚ್ಚಿಗೆ ಕೊಡುಗೆ/ ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ | ವರದಿ ಸಾಲಿನಲ್ಲಿ ಯಾವುದೇ ಕೊಡುಗೆ ನೀಡಿರುವುದಿಲ್ಲ |
| | (ii) ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ | ಬ್ಯಾಂಕಿನ ಪ್ರಚಲಿತ ಆರ್ಥಿಕ ಪರಿಸ್ಥಿತಿಗೆ ಅನುಸಾರ ಆರ್.ಬಿ.ಐ. ಸೂಚನೆಗಳನ್ವಯ ಬಡ್ಡಿ ದರಗಳನ್ನು ನಿಗಧಿಗೊಳಿಸಿದೆ. |
| | ix) ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ. | ಯಾವುದೂ ಇಲ್ಲ. |
| 52. | **ಬ್ಯಾಂಕಿನ ಅಧೀನ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ:** | |
| | i) ಅಧೀನ ಸಂಸ್ಥೆಗಳು ಬ್ಯಾಂಕಿಗೆ ವರದಿ ಮಾಡಲು ಜಾರಿಯಲ್ಲಿರುವ ವ್ಯವಸ್ಥೆ. | ಯಾವುದೇ ಅಧೀನ ಸಂಸ್ಥೆಗಳಿಲ್ಲ |
| | ii) ಅಧೀನ ಸಂಸ್ಥೆಗಳು ನಿವ್ವಳ ನಷ್ಟ ಅನುಭವಿಸುತ್ತಿದ್ದಲ್ಲಿ ವಿಮರ್ಶೆ | |

| | | |
|---|---|---|
| 53. | D.E.A. Fund Scheme 2014<br>ಜಾರಿಯಲ್ಲಿರುವ ಬಗ್ಗೆ | |
| | i) ಬ್ಯಾಂಕು ಪ್ರಾರಂಭವಾದಾಗಿನಿಂದ ವಾರಸುದಾರರಿಲ್ಲದ ಠೇವಣಿಗಳನ್ನು DEA Fund ಗೆ ವರ್ಗಾಯಿಸಿರುವ ಬಗ್ಗೆ. | ದಿ.31.03.2024ಕ್ಕೆ ರೂ. 2,21,69,456.50ಗಳು ಡಿ.ಇ.ಎ.ಎಫ್. ಲೆಕ್ಕದಲ್ಲಿ ಇರುತ್ತದೆ. ಕಾಲಕಾಲಕ್ಕೆ ವರ್ಗಾಯಿಸಲಾಗುತ್ತಿದೆ. |
| | ii) ಈ ಕುರಿತು ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಿರುವ ಬಗ್ಗೆ. | ಎಲ್ಲಾ ನಿಯತಕಾಲಿಕೆಗಳನ್ನು ಸಲ್ಲಿಸಲಾಗುತ್ತಿದೆ. |
| | iii) ಈ ಕುರಿತು ಸಮನ್ವಯ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ. | ಸಮನ್ವಯ ಮಾಡಿಕೊಂಡಿರುವುದಿಲ್ಲ. |
| | iv) ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕು ಹೊಂದಿರುವ ವ್ಯವಸ್ಥೆ | ಬ್ಯಾಂಕಿನ ಸಿಬ್ಬಂದಿ ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಗತ್ಯವಿದ್ದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ / ಪದಾಧಿಕಾರಿಗಳು ಗ್ರಾಹಕರ ದೂರುಗಳನ್ನು ಪರಿಶೀಲಿಸಿ ಕ್ರಮವಿಡಲಾಗುತ್ತಿದೆ. |
| | v) ಗ್ರಾಹಕರ / ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ | ನಿಯಮಾನುಸಾರ ಕ್ರಮವಿಡಲಾಗುತ್ತಿದೆ. |
| | vi) ಈ ಸಂಬಂಧ ಬ್ಯಾಂಕಿನ ದಾಖಲೆಗಳನ್ನು ಪರಿಶೋಧಿಸುವ ಬಗ್ಗೆ ಇರುವ ವ್ಯವಸ್ಥೆ. | ನಿಯಮಾನುಸಾರ ಕ್ರಮವಿಡಲಾಗುತ್ತಿದೆ. |
| 54. | **ಆಡಳಿತ ಮಂಡಳಿ:** | |
| | i) ಚುನಾಯಿತ ಆಡಳಿತ ಮಂಡಳಿಯ ಕಾರ್ಯನಿರ್ವಹಣೆ, ರಚನೆ, ಸಮಿತಿಗಳು, ಸಮಿತಿಗಳ ರಚನೆ, ಕಾರ್ಪೊರೇಟ್ ಗೌವರ್ನೆನ್ಸ್, ಆಡಳಿತ | ಭಾಗ – 3, ಕಂಡಿಕೆ 30ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 98 ರಿಂದ 101) |

| | | |
|---|---|---|
| | ಮಂಡಳಿಯಲ್ಲಿನ ವೃತ್ತಿ ಪರತೆ, ನಿಯತ ಕಾಲಿಕವಾಗಿ ಸಭೆ ನಡೆಸುವ ಬಗ್ಗೆ, ಸಭೆಯಲ್ಲಿ ಚರ್ಚೆಯಾದ ವಿಷಯಗಳು, ಗೈರು ಹಾಜರಾದ ನಿರ್ದೇಶಕರು ನಿರ್ದೇಶಕರಿಂದ ಬೈಲಾ ಉಲ್ಲಂಘನೆ ನಿರ್ದೇಶಕರನ್ನು ವಜಾಗೊಳಿಸಿರುವ ವಿವರ ಯಾವುದಾದರೂ ಇದ್ದಲ್ಲಿ, ಇತ್ಯಾದಿ ಅಂಶಗಳ ಬಗ್ಗೆ (ಚುನಾಯಿತ ಆಡಳಿತ ಮಂಡಳಿ ಇಲ್ಲದೆ ಇದ್ದಲ್ಲಿ ಮೇಲಿನ ಅಂಶಗಳ ಬಗ್ಗೆ ಆಡಳಿತಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ ನೀಡುವುದು.) | |
| | ii) ಬ್ಯಾಂಕಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ನೇಮಕಾತಿ ವಿದ್ಯಾರ್ಹತೆ ಮತ್ತು ಬ್ಯಾಂಕು ನಡೆಸುವ ಸಾಮರ್ಥ್ಯ ಹೊಂದಿರುವ ಬಗ್ಗೆ. | ಬ್ಯಾಂಕಿನಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹುದ್ದೆ ಖಾಲಿ ಇದ್ದು, ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹುದ್ದೆಯಲ್ಲಿ ಶ್ರೀ. ಕೆ.ಎನ್. ಕೃಷ್ಣಯ್ಯಶೆಟ್ಟಿ ಉಪ ಪ್ರಧಾನ ವ್ಯವಸ್ಥಾಪಕರು ಪ್ರಭಾರದಲ್ಲಿರುತ್ತಾರೆ. |
| | iii) 2ನೇ ಹಂತದ ಸಿಬ್ಬಂದಿಗಳ ಕಾರ್ಯನಿರ್ವಹಣೆ, ನೇಮಕಾತಿ ತರಬೇತಿ, ಜವಾಬ್ದಾರಿ ನಿಗದಿಪಡಿಸುವಿಕೆ ರೊಟೇಷನ್ ಬಗ್ಗೆ ವಿಮರ್ಶೆ. | ಭಾಗ – 3, ಕಂಡಿಕೆ 32ರಲ್ಲಿ ವಿವರಣೆ ನೀಡಲಾಗಿದೆ. (ವರದಿ ಪುಟ ಸಂಖ್ಯೆ 101 ರಿಂದ 103) |
| 55. | ಲೆಕ್ಕಪರಿಶೋಧಕರ ಸಲಹೆ / ಸೂಚನೆಗಳು | ಭಾಗ –3, ಕಂಡಿಕೆ 36ರಲ್ಲಿ ವಿವರಿಸಿದಂತೆ. (ವರದಿ ಪುಟ ಸಂಖ್ಯೆ 110 ರಿಂದ 111) |
| 56. | ಲೆಕ್ಕಪರಿಶೋಧನಾ ಫಲಿತಾಂಶ ಹಾಗೂ ಕ್ರಮವಿಡಬೇಕಾದ ಕಂಡಿಕೆಗಳು | ಭಾಗ –3, ಕಂಡಿಕೆ 37ರಲ್ಲಿ ವಿವರಿಸಿದಂತೆ. (ವರದಿ ಪುಟ ಸಂಖ್ಯೆ 111 ರಿಂದ 113) |
| 57. | a) **ಲೆಕ್ಕಪರಿಶೋಧನಾ ವರ್ಗೀಕರಣ:**<br>ಎ) ಹಿಂದಿನ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ | 'ಬಿ' |

| | | |
|---|---|---|
| | ಬಿ) ವರದಿ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ (ವರ್ಗೀಕರಣ ಪಟ್ಟಿ ಲಗತ್ತಿಸಿದೆ) | 'ಎ' |

ಮೆ॥ ಬಾಬು ಅಂಡ್ ಬದರ್
ಸನ್ನದು ಲೆಕ್ಕ ಪರಿಶೋಧಕರು
ಸಂಸ್ಥೆಯ ನೋಂದಣಿ ಸಂಖ್ಯೆ 321009ಇ
ಸಹಿ/–
**(ಕೆ. ಚಂದ್ರ ಬಾಬು)**
ಪಾಲುದಾರರು
ಸದಸ್ಯತ್ವ ಸಂಖ್ಯೆ–29130
UDIN : 24029130BKEDJR7345

ಸ್ಥಳ : ಬೆಂಗಳೂರು
ದಿನಾಂಕ : 14.06.2024

ಅಡಕಗಳು:

1. ಜಮಾ–ಖರ್ಚು ತಃಖ್ತೆ
2. ಲಾಭ–ನಷ್ಟ ತಃಖ್ತೆ
3. ಆಸ್ತಿ–ಜವಾಬ್ದಾರಿ ತಃಖ್ತೆ
4. ನಿಗದಿಪಡಿಸಿದ ನಮೂನೆಯಲ್ಲಿ ದೃಢೀಕರಣ
5. ಸಮಗ್ರ ಆರ್ಥಿಕ ವಿವರವುಳ್ಳ ತಃಖ್ತೆ (ನಿಗದಿತ ನಮೂನೆಯಲ್ಲಿ ಲಗತ್ತಿಸುವುದು)
6. ಎನ್.ಪಿ.ಎ. ತಃಖ್ತೆ.
7. ವರ್ಗೀಕರಣ ತಃಖ್ತೆ ಅನುಬಂಧ–2, ಲೆಕ್ಕ ಪರಿಶೋಧನಾ ವರ್ಗೀಕರಣ.
8. ಶಾಖೆಗಳಿದ್ದಲ್ಲಿ LFAR ನಮೂನೆಯಲ್ಲಿ ವರದಿ, ಅನುಬಂಧ–3, ಶಾಖೆಗಳ LFAR